# ೨ ಸಪ್ತತತ್ತ್ವಗಳು

**೧. ತತ್ತ್ವ ಎಂದರೇನು ?**

"ತಸ್ಯಭಾವಃ ತತ್ತ್ವಂ" ಎಂಬಂತೆ ವಸ್ತುವಿನ ಸ್ವಭಾವವೇ-ಒಳ ಅರ್ಥವೇ-ಅಂತರಂಗವೇ ತತ್ತ್ವವಿದೆ. ಜೀವಾಜೀವಗಳ ಸಂಬಂಧ-ಬಿಡುಗಡೆಯ ಸಿದ್ಧಾಂತವನ್ನು ನಿರೂಪಿಸುವ ವಿಷಯವೇ ತತ್ತ್ವವಾಗಿದೆ.

**೨. ತತ್ತ್ವಗಳು ಎಷ್ಟು ? ಅವುಗಳಾವುವು ?**

ಸಿದ್ಧಾಂತದ ರೀತ್ಯ ತತ್ತ್ವಗಳು ಏಳು :-

1) ಜೀವತತ್ತ್ವ 2) ಅಜೀವತತ್ತ್ವ 3) ಆಸ್ರವತತ್ತ್ವ 4) ಬಂಧತತ್ತ್ವ 5) ಸಂವರತತ್ತ್ವ 6) ನಿರ್ಜರತತ್ತ್ವ 7) ಮೋಕ್ಷತತ್ತ್ವ

**೩. ತತ್ತ್ವಗಳಲ್ಲಿ ಮೂಲತತ್ತ್ವಗಳೆಷ್ಟು ?**

ಮೂಲದ ತತ್ತ್ವಗಳು ಎರಡೇ :- 1. ಜೀವತತ್ತ್ವ 2. ಅಜೀವತತ್ತ್ವ

ಈ ಜೀವ-ಅಜೀವಗಳ ಬಂಧ-ಬಿಡುಗಡೆಯನ್ನು ನಿರೂಪಿಸುವ ಸಹಕಾರಿ ತತ್ತ್ವಗಳು ಐದು :- ಆಸ್ರವ, ಬಂಧ, ಸಂವರ, ನಿರ್ಜರಾ, ಮೋಕ್ಷ.

## ೧ - ಜೀವತತ್ತ್ವ ಮತ್ತು ಅಜೀವತತ್ತ್ವ :

**೪. ಜೀವತತ್ತ್ವ ಎಂದರೇನು ?**

ಜ್ಞಾನ, ದರ್ಶನ, ಚೇತನ ಶಕ್ತಿಯುಳ್ಳದ್ದೇ ಜೀವತತ್ತ್ವ. ಅಚೇತನವಾದ ಜಡವಸ್ತುವೇ ಅಜೀವತತ್ತ್ವ. ಈ ವಿಷಯವನ್ನು ಈ ಹಿಂದೆ ತಿಳಿಸಲಾಗಿದೆ. ಜೀವವೂ, ಅಜೀವವೂ, ದ್ರವ್ಯಗಳೂ ಆಗಿವೆ. ಅಸ್ತಿಕಾಯಗಳೂ, ತತ್ತ್ವಗಳೂ ಆಗಿವೆ ಮತ್ತು ಪದಾರ್ಥಗಳೂ ಆಗಿವೆ.

## ೨ - ಆಸ್ರವತತ್ತ್ವ :

**೧. ಆಸ್ರವವೆಂದರೇನು ?**

ಈ ಜೀವ ದ್ರವ್ಯದಲ್ಲಿ ಸಂಸಾರದಲ್ಲಿ ಸುತ್ತಾಡುವ ಅವಸ್ಥೆಯಲ್ಲಿ ತನ್ನ ಶುಭಾಶುಭ ಭಾವಮಾಡುವ ಕಾರ್ಯಗಳಿಂದ ಕರ್ಮವೆಂಬ ಅಜೀವವನ್ನು ತನ್ನತ್ತ ಬರಮಾಡಿಕೊಳ್ಳುವ ದ್ವಾರಕ್ಕೆ ಆಸ್ರವವೆನ್ನುತ್ತಾರೆ. ಕರ್ಮಗಳ ಬರುವಿಕೆಗೇ



ಆಸ್ರವವೆನ್ನುತ್ತಾರೆ. ಜೀವಿಯ, ಮನ, ವಚನ, ಕಾಯಗಳ ಕ್ರಿಯೆಗೆ ಯೋಗ ವೆನ್ನುವರು. ಈ ಯೋಗದ ಸಮಯದಲ್ಲಿ ಆತ್ಮ ಪ್ರದೇಶದಲ್ಲಿ ಪರಿಸ್ಪಂಧನ, ಕಂಪನವಾಗುವುದು. ಅಂದರೆ ಆತ್ಮ ಪ್ರದೇಶವು ಲೋಹ ಚುಂಬಕದಂತೆ ಆಗುತ್ತದೆ. ಅದು ಹೊರ ಪ್ರಪಂಚದಲ್ಲಿ ತುಂಬಿತುಳುಕಾಡುವ ಕಾರ್ಮಣ-ವರ್ಗಣವೆಂಬ ಜಡಪುದ್ಗಲಾಣುಗಳನ್ನು ತನ್ನತ್ತ ಆಕರ್ಷಿಸಿ, ಸೆಳೆದುಕೊಳ್ಳುತ್ತದೆ- ಈ ರೀತಿ ಕರ್ಮಾಣುಗಳು ಆತ್ಮನತ್ತ ಬರುವ ದ್ವಾರವೇ ಆಸ್ರವ ತತ್ತ್ವವಾಗಿದೆ.

**೨. ಆಸ್ರವದಲ್ಲಿ ಎಷ್ಟು ವಿಧ ? ಅವು ಯಾವುವು ?**

ಆಸ್ರವದಲ್ಲಿ ಎರಡುವಿಧ :- 1. ಭಾವಾಸ್ರವ 2. ದ್ರವ್ಯಾಸ್ರವ.

ಛಿದ್ರವಾದ ದೋಣಿಯೊಳಗೆ ನೀರು ಬರುವಂತೆ ಕರ್ಮವು ಆತ್ಮ ಪ್ರದೇಶಕ್ಕೆ ಬರುವ ದ್ವಾರವೇ ಆಸ್ರವ. ಇದಕ್ಕೆ ಮನ, ವಚನ, ಕಾಯಗಳ ಕಾರ್ಯವೇ ಕಾರಣವಾಗಿದೆ.

**೩. ಭಾವಾಸ್ರವ ಎಂದರೇನು ?**

ಮಿಥ್ಯಾತ್ವ, ಅವಿರತ, ಪ್ರಮಾದ, ಕಷಾಯ ಮತ್ತು ಯೋಗ ರೂಪವಾದ ಜೀವನ ಪರಿಣಾಮದಿಂದ ಕರ್ಮಗಳು ತನ್ನತ್ತ ಬರುತ್ತವೆ. ಇಂತಹ ಪರಿಣಾಮ ಗಳಿಗೆ ಭಾವಾಸ್ರವವೆನ್ನುವರು.

**೪. ಮಿಥ್ಯಾತ್ವವೆಂದರೇನು ?**

ಜೀವಾದಿ ತತ್ತ್ವಗಳಲ್ಲಿ, ಜಿನದೇವ, ಗುರು, ಧರ್ಮ, ಶಾಸ್ತ್ರಗಳಲ್ಲಿ ಶ್ರದ್ಧೆ ಇಲ್ಲದೆ ಅತ್ಯಾಚಾರ, ಅನಾಚಾರ, ದುರಾಚಾರದಲ್ಲಿ ಇರುವ ಜೀವಿಯ ಕ್ರಿಯೆಯ ದುರ್ಭಾವಕ್ಕೆ ಮಿಥ್ಯಾತ್ವವೆನ್ನುತ್ತಾರೆ. ಇದನ್ನು ಅಂಧಶ್ರದ್ಧೆಯೆಂದೂ, ಮೂಢ ನಂಬಿಕೆಯೆಂದೂ ಹೇಳುವರು.

**೫. ಮಿಥ್ಯಾತ್ವದಲ್ಲಿ ಎಷ್ಟುವಿಧ ? ಅವುಗಳು ಯಾವುವು ?**

ಮಿಥ್ಯಾತ್ವಗಳು ಐದು :-

1. ಏಕಾಂತ 2. ವಿಪರೀತ 3. ಸಂಶಯ 4. ವಿನಯ 5. ಅಜ್ಞಾನ

**೬. ಏಕಾಂತ ಮಿಥ್ಯಾತ್ವವೆಂದರೇನು ?**

ಅನೇಕ ಧರ್ಮಾತ್ಮಕವಾದ ವಸ್ತುಸ್ವರೂಪವನ್ನು ಒಂದೇ ಧರ್ಮಾತ್ಮಕ ವೆಂದೂ, ತನ್ನ ತಿಳಿವಳಿಕೆ, ಆಚರಣೆಗಳೇ ಸರಿಯೆಂದು ಹಟ ಮಾಡುವುದು ಏಕಾಂತ ಮಿಥ್ಯಾತ್ವವಾಗುತ್ತದೆ.

**೭. ವಿಪರೀತ ಮಿಥ್ಯಾತ್ವವೆಂದರೇನು ?**

ಧರ್ಮ, ದೇವರು, ಗುರುಗಳು, ಶಾಸ್ತ್ರ, ಆಚಾರ, ವಿಚಾರಗಳು ನಿಜವಾಗಿ ಇರುವುದು ಒಂದು, ಆದರೆ ತಾನು ತಿಳಿಯುವುದು ಮತ್ತೊಂದು. ಶಾಸ್ತ್ರದ ವಿಷಯವನ್ನು ಬೇರೇತರಹವಾಗಿ ಬರೆಯುವುದು, ಹೇಳುವುದು ಅಂದರೆ ಕೇವಲಿಗಳಿಗೆ ಹಸಿವಾಗುತ್ತದೆ, ವಸ್ತ್ರಸಹಿತ ಮುಕ್ತರಾಗಬಹುದು, ಯಾವ ದೇವರಾದರೇನು, ಗುರುವಾದರೇನು, ಶಾಸ್ತ್ರವಾದರೇನು ಎಂದು ಉದಾಸೀನ ಭಾವದಿಂದ ಇರುವುದು. ಎಲ್ಲವನ್ನು ನಂಬುವುದು. ಎಂಬಿವೇ ವಿಪರೀತ ಮಿಥ್ಯಾತ್ವ

**೮. ಸಂಶಯ ಮಿಥ್ಯಾತ್ವವೆಂದರೇನು ?**

ಧರ್ಮದ ವಿಷಯದ ಬಗ್ಗೆ, ದೇವ, ಗುರು ಶಾಸ್ತ್ರದ ಬಗ್ಗೆ ಅನುಮಾನ ಪಡುವುದು, ವಸ್ತುಸ್ವರೂಪದ ಬಗ್ಗೆ ಅನುಮಾನ ಪಡುವುದು. ಜೀವ ಇದ್ದಾನೋ ಇಲ್ಲವೋ ಎಂದು ಅನುಮಾನಿಸುವುದು. ಈ ಜಗತ್ತು ಮಿಥ್ಯೆ ಎನ್ನುವುದು ಸಂಶಯ ಮಿಥ್ಯಾತ್ತ್ವವಾಗುತ್ತದೆ.

**೯. ವಿನಯ ಮಿಥ್ಯಾತ್ವವೆಂದರೇನು ?**

ಸರಾಗೀ-ವೀತರಾಗೀ, ಧರ್ಮ-ಅಧರ್ಮ, ಸತ್ಯ-ಮಿಥ್ಯ, ಪಾಪ-ಪುಣ್ಯ, ಒಳ್ಳೆಯದು-ಕೆಟ್ಟದು, ಹೇಯ-ಉಪಾಧೇಯಗಳ ಸ್ವರೂಪವನ್ನು ತಿಳಿಯದೇ ಎಲ್ಲಕ್ಕೂ ನಮಿಸುವುದು, ಒಪ್ಪುವುದು, ವಿನಯ ತೋರಿಸುವುದು, ವಿನಯ ಮಿಥ್ಯಾತ್ವವಾಗುತ್ತದೆ.

**೧೦. ಅಜ್ಞಾನ ಮಿಥ್ಯಾತ್ವ ಎಂದರೇನು ?**

ಹಿತಾಹಿತಗಳ, ಸತ್ಯಾಸತ್ಯಗಳ ಪರಿಜ್ಞಾನವಿಲ್ಲದ ಅವಿವೇಕದಿಂದ ಸಮ್ಯಕ್ತ್ವ-ಮಿಥ್ಯಾತ್ವಗಳ ಅರಿವಿಲ್ಲದಿರುವುದೇ ಅಜ್ಞಾನ, ಇದೇ ಮೂಢತ್ವ, ತತ್ತ್ವಗಳ ವಿಷಯಗಳನ್ನು ತಿಳಿಯದೇ ಇರುವುದೇ ಅಜ್ಞಾನ ಮಿಥ್ಯಾತ್ವವಿದೆ.

**೧೧. ಅವಿರತ ಎಂದರೇನು ? ಅವು ಯಾವುವು ?**

ಪಂಚಪಾಪಗಳನ್ನು ಬಿಡದಿರುವುದೇ ಅವಿರತ. ಯಾವ ವ್ರತ, ನೇಮ, ನಿಯಮ ಮಾಡದಿರುವುದೂ ಅವಿರತವಿದೆ. ಇವು ಐದಿವೆ :-

1. ಹಿಂಸೆ 2. ಸುಳ್ಳು 3. ಕಳ್ಳತನ 4. ಕುಶೀಲ 5. ಪರಿಗ್ರಹ

ಇವುಗಳನ್ನು ಬಿಡುವುದೆಂದರೆ ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ವ್ರತವನ್ನು ಪಾಲಿಸುವುದು.



**೧೨. ಕಷಾಯವೆಂದರೇನು ? ಅವು ಯಾವುವು ?**

ಆತ್ಮನ ಶಾಂತಿಯನ್ನು ವಿಕೃತಿಗೊಳಿಸುವ ಭಾವನೆಗಳೇ ಕಷಾಯಗಳು.

ಕಷಾಯಗಳು ನಾಲ್ಕು :- 1) ಕ್ರೋಧ-ಕೋಪ, ಸಿಟ್ಟು-ಒರಟುತನ, 2) ಮಾನ-ಗರ್ವ, ಜಂಭ-ಅಹಂಕಾರ, ಮದ-ಮಸ್ತಿ, 3) ಮಾಯಾ-ಕಪಟತನ, ವಂಚನೆ-ಮೋಸ, 4) ಲೋಭ-ದುರಾಶೆ, ಜಿಪುಣತನ.

**೧೩. ಪ್ರಮಾದವೆಂದರೇನು ? ಅವು ಯಾವುವು ?**

ಪ್ರಮಾದವೆಂದರೆ ತಿಳಿವಳಿಕೆಯಲ್ಲಿ, ವಿಚಾರದಲ್ಲಿ, ನಡೆನುಡಿಯಲ್ಲಿ ತಪ್ಪು ಮಾಡುವುದು, ದೋಷ ಮಾಡುವುದು ಪ್ರಮಾದವೆನಿಸುತ್ತದೆ. ಹಾಗೂ ಶುಭ ಕಾರ್ಯಗಳಲ್ಲಿ ಆಲಸ್ಯ, ಉದಾಸೀನತೆ, ಸೋಮಾರಿತನ ತೋರುವುದು ಪ್ರಮಾದವಾಗಿದೆ.

ಪ್ರಮಾದಗಳು 15 :- ನಾಲ್ಕು ವಿಕಥೆಗಳು, ನಾಲ್ಕು ಕಷಾಯಗಳು, ಐದು ಇಂದ್ರಿಯ ವಿಷಯ, ಒಂದು ನಿದ್ರಾ, ಒಂದು ಸ್ನೇಹ (ಇವುಗಳ ವಿಚಾರವಾಗಿ ಹಿಂದೆ ತಿಳಿಸಲಾಗಿದೆ.)

**೧೪. ಯೋಗ ಎಂದರೇನು ? ಅವು ಯಾವುವು ?**

ಮನ, ವಚನ, ಕಾಯಗಳ ಕ್ರಿಯೆಗೆ ಯೋಗವೆನ್ನುವರು. ಇವು ಶುಭ ಯೋಗ ಎಂದು ಮೂರು ವಿಧ. ಮನೋಯೋಗ, ವಚನಯೋಗ, ಕಾಯ ಯೋಗ ಎಂದು ಮೂರು ವಿಧ.

ಈ ರೀತಿ ಮಿಥ್ಯಾ ಅವಿರತ, ಕಷಾಯ, ಪ್ರಮಾದ ಮತ್ತು ಯೋಗಗಳಿಂದ ಭಾವಾಸ್ರವವಾಗುತ್ತದೆ.

**೧೫. ದ್ರವ್ಯಾಸ್ರವವೆಂದರೇನು**

ಭಾವಾಸ್ರವದ ಕಾರಣದಿಂದ ಜ್ಞಾನಾವರಣಾದಿ ಪುದ್ಗಲ ಕರ್ಮಗಳು ಆತ್ಮ ಪ್ರದೇಶಕ್ಕೆ ಬರುವುದಕ್ಕೆ ದ್ರವ್ಯಾಸ್ರವವೆಂದು ಹೆಸರು.

**೧೬. ದ್ರವ್ಯಾಸ್ರವದ ಪ್ರಕಾರಗಳಾವುವು ?**

ದ್ರವ್ಯಾಸ್ರವದಲ್ಲಿ ಎಂಟು ಪ್ರಕಾರವಿದೆ :- 1. ಜ್ಞಾನಾವರಣ 2. ದರ್ಶನಾವರಣ 3. ವೇದನೀಯ 4. ಮೋಹನೀಯ 5. ಆಯುಷ್ಯ 6. ನಾಮ 7. ಗೋತ್ರ 8. ಅಂತರಾಯ ಎಂಬ ಕರ್ಮಾಣುಗಳು ಬರುವ ದ್ವಾರ.

ತಮ್ಮ ತಮ್ಮ ಶುಭ-ಅಶುಭ ಪರಿಣಾಮಗಳಿಗನುಸಾರವಾಗಿ ಈ ರೀತಿಯ ಎಂಟು ಕರ್ಮಗಳೂ, ಹಲವು ಭೇದಗಳಾಗುತ್ತವೆ. ಇವುಗಳ ಉತ್ತರ ಭೇದಗಳು 148 ಇವೆ. ಇವುಗಳ ವಿವರವನ್ನು ಕರ್ಮಪ್ರಕರಣದಲ್ಲಿ ತಿಳಿಸಲಾಗಿದೆ.

**೧೭. ಅಷ್ಟಕರ್ಮಗಳಲ್ಲಿ ಜ್ಞಾನಾವರಣೀಯ ಆಸ್ರವ ಹೇಗಾಗುತ್ತದೆ ?**

ಜ್ಞಾನಾವರಣೀಯ ಕರ್ಮದ ಆಸ್ರವವು-ಧರ್ಮ ಮತ್ತು ಶಾಸ್ತ್ರವನ್ನು ತಿಳಿದವರನ್ನು ತಿರಸ್ಕಾರ ಮಾಡುವುದರಿಂದ, ತನ್ನಲ್ಲಿರುವ ಜ್ಞಾನವನ್ನು ಬಚ್ಚಿಡುವುದರಿಂದ ಜ್ಞಾನಾಭ್ಯಾಸಕ್ಕೆ ಅಡ್ಡಿ ಮಾಡುವುದರಿಂದ, ಸಮ್ಯಗ್ಜ್ಞಾನವನ್ನು ಅವಹೇಳನ ಮುಂತಾದವುಗಳನ್ನು ಮಾಡುವುದರಿಂದ ಆಗುತ್ತದೆ.

**೧೮. ದರ್ಶನಾವರಣದ ಆಸ್ರವ ಹೇಗಾಗುತ್ತದೆ ?**

ಧರ್ಮ, ದೇವರು, ಗುರು, ಶಾಸ್ತ್ರಗಳನ್ನು ನಂಬುವುದರಲ್ಲಿ ಅನುಮಾನ ಪಡುವುದರಿಂದ. ಜಿನದರ್ಶನ, ಸಾಧು ಸತ್ಪುರುಷರ-ತೀರ್ಥಕ್ಷೇತ್ರಗಳ ದರ್ಶನಕ್ಕೆ ಅಡ್ಡಿ ಮುಂತಾದವುಗಳನ್ನು ಮಾಡುವುದರಿಂದ ದರ್ಶನಾವರಣೀಯ ಕರ್ಮದ ಆಸ್ರವವಾಗುತ್ತದೆ.

**೧೯. ಮೋಹನೀಯ ಕರ್ಮದ ಆಸ್ರವ ಹೇಗಾಗುತ್ತದೆ ?**

ಮಿಥ್ಯಾದೃಷ್ಟಿಯಾಗಿರುವುದರಿಂದ, ಮೋಹ-ಮಮತೆ-ಮಾಯಾಚಾರ, ಲೋಭ-ಕ್ರೋಧಾದಿ ಕಷಾಯಗಳಿಂದ, ಧರ್ಮ-ಶಾಸ್ತ್ರ-ಗುರು, ದೇವರ ಬಗ್ಗೆ ನಂಬಿಕೆ ಇಲ್ಲದಿರುವುದರಿಂದ, ಇಲ್ಲಸಲ್ಲದ ಆರೋಪ ಮಾಡುವುದರಿಂದ-ಚಾರಿತ್ರಶಾಲಿಗಳನ್ನು ತಿರಸ್ಕರಿಸಿ, ಅಗೌರವ ತೋರಿಸುವುದೇ ಮುಂತಾದವುಗಳಿಂದ ಮೋಹನೀಯ ಕರ್ಮದ ಆಸ್ರವವಾಗುವುದು. ಮಿಥ್ಯಾತ್ವವನ್ನು ಬಿಡದಿರುವುದೂ ಮತ್ತು ಪರವಸ್ತುಗಳ ಮೇಲೆ ಅತಿಯಾದ ಪ್ರೀತಿ, ರಾಗ ಮಾಡುವುದೇ ಮೋಹವಿದೆ.

**೨೦. ಅಂತರಾಯ ಕರ್ಮದ ಆಸ್ರವ ಹೇಗಾಗುತ್ತದೆ ?**

ಬೇರೆಯವರು ಮಾಡುವ ದಾನ, ಲಾಭ, ಭೋಗ, ಉಪಭೋಗ ಮತ್ತು ಶಕ್ತಿಗಳಿಗೆ ಅಡ್ಡಿಯನ್ನುಂಟುಮಾಡಿ, ಆತ್ಮನ ಅನಂತಶಕ್ತಿ, ಗುಣವನ್ನು ಒಪ್ಪದೆ ಮರೆಮಾಡುವುದರಿಂದ ಧರ್ಮದ ಪ್ರಭಾವನೆಗೆ ಇತರ ಸುಖ-ಶಾಂತಿಗಳಿಗೆ ಅಡ್ಡಿ ಮಾಡುವುದೇ ಮುಂತಾದವುಗಳಿಂದ ಅಂತರಾಯ ಕರ್ಮದ ಆಸ್ರವವಾಗುತ್ತದೆ.



**೨೧. ಆಯುಷ್ಯಕರ್ಮದ ಆಸ್ರವ ಹೇಗಾಗುತ್ತದೆ ?**

ಆತ್ಮನಲ್ಲಿ ಅವಗಾಹನತ್ವವೆಂಬ ಗುಣವಿದೆ. ತಾನು ಜನ್ಮ ತಾಳುವ ಗತಿಯಲ್ಲಿ ಇಂತಿಷ್ಟು ಸಮಯ ಕಾಲ ಇರಬೇಕಾಗುತ್ತೆಂಬುದೇ ಆಯುಷ್ಯ. ಈ ಆಯುಷ್ಯಕರ್ಮದಿಂದ ಆತ್ಮನ ಅವಗಾಹನತ್ವ ಗುಣ ಮರೆಯಾಗುತ್ತದೆ.

ಸರಾಗಸಮ್ಯಕ್ತ್ವದಿಂದ, ಸಹನೆಯಿಂದ ಕರ್ಮದ ಫಲವನ್ನು ಅನುಭವಿಸುವುದರಿಂದ, ಸಮ್ಯಕ್ತ್ವ ಧಾರಣೆಯಿಂದ ದೇವಗತಿಯ ಆಯುಷ್ಯದ ಆಸ್ರವವಾಗುತ್ತದೆ.

ಆರಂಭಪರಿಗ್ರಹವಿಲ್ಲದೆ ಅಲ್ಪ ಪರಿಗ್ರಹಿಯಾದವರಿಗೆ, ಕೋಮಲ ಸ್ವಭಾವದವರಿಗೆ-ಮನುಷ್ಯಗತಿಯ ಆಯುಷ್ಯದ ಆಸ್ರವವಾಗುತ್ತದೆ.

ಮಾಯಾಚಾರದಿಂದ ತಿರ್ಯಂಚಗತಿಯೂ, ಬಹು ಆರಂಭ ಪರಿಗ್ರಹದಿಂದ-ಪಂಚಪಾಪಗಳಿಂದಲೂ, ಕ್ರೋಧಾದಿ ಕಷಾಯಗಳ ಅನಂತಾನುಬಂಧಿಯಿಂದಲೂ ನರಕಗತಿಯ ಆಯುಷ್ಯವೂ ಆಸ್ರವವಾಗುವುದು.

**೨೨. ನಾಮಕರ್ಮದ ಆಸ್ರವ ಹೇಗಾಗುತ್ತದೆ ?**

ನಾಮಕರ್ಮದಲ್ಲಿ ಶುಭನಾಮಕರ್ಮ, ಅಶುಭನಾಮಕರ್ಮವೆಂದು ಎರಡು ವಿಧ.

ಮನ-ವಚನ-ಕಾಯಗಳ ಕುಟಿಲತೆಯಿಂದ ಅಶುಭನಾಮಕರ್ಮದ ಆಸ್ರವವಾಗುತ್ತದೆ. ಮನ-ವಚನ-ಕಾಯಗಳ ಸರಳತೆಯಿಂದ ಶುಭನಾಮ ಕರ್ಮದ ಆಸ್ರವವಾಗುತ್ತದೆ.

ದರ್ಶನ ವಿಶುದ್ಧಿ ಮುಂತಾದ ಷೋಡಶಕಾರಣಭಾವನೆಗಳನ್ನು ತೀರ್ಥಂಕರರ ಅಥವಾ ಕೇವಲಿಗಳ ಪಾದಮೂಲದಲ್ಲಿ ಭಾವಿಸಿ,ಆರಾಧಿಸಿದರೆ ತೀರ್ಥಂಕರರ ಆಯುವಿನ ಆಸ್ರವವಾಗುತ್ತದೆ. ನಾಮಕರ್ಮದ ಆಸ್ರವದ ವಿಧಗಳು ಅನೇಕವಿವೆ.

**೨೩. ಗೋತ್ರಕರ್ಮದ ಆಸ್ರವ ಹೇಗಾಗುತ್ತದೆ ?**

ಇತರರ ನಿಂದೆ, ಸ್ವ ಪ್ರಶಂಸೆ ಮಾಡುವುದರಿಂದ, ನಮ್ರತೆ, ವಿಧೇಯತೆಯಿಂದ ನೀಚ, ಉಚ್ಚಗೋತ್ರ ಕರ್ಮದ ಆಸ್ರವವಾಗುತ್ತದೆ.

**೨೪. ವೇದನೀಯ ಕರ್ಮದ ಆಸ್ರವ ಹೇಗಾಗುತ್ತದೆ ?**

ವೇದನೀಯ ಕರ್ಮದಲ್ಲಿ ಅಸಾತಾ ವೇದನೀಯ ಮತ್ತು ಸಾತಾ ವೇದನೀಯ ಎಂದು ಎರಡು ವಿಧ.

ಅಶುಭ ಕಾರ್ಯದಲ್ಲಿ ತೊಡಗುವುದರಿಂದ, ಕಠಿಣ ಹೃದಯವಿರುವುದರಿಂದ, ನಿರ್ದಯ, ಅಸತ್ಯ, ಕಳ್ಳತನ, ಕುಶೀಲ, ಪರಿಗ್ರಹಗಳಿಂದ ಪಾಪರೂಪವಾದ ಅಸಾತಾವೇದನೀಯ ಕರ್ಮದ ಆಸ್ರವವಾಗುವುದು. ದಯೆ, ಕರುಣೆ, ದಾನ, ಶೀಲ, ವ್ರತ, ಉಪವಾಸ, ಪೂಜೆ, ಆರಾಧನೆ, ಮಂದಕಷಾಯದ ಪರಿಣಾಮ, ಧರ್ಮಪಾಲನೆ, ಅಪರಿಗ್ರಹಾದಿ ಶುಭ ಕಾರ್ಯಗಳಿಂದ ಸಾತಾ ವೇದನೀಯವೆಂಬ ಪುಣ್ಯದ ಆಸ್ರವವಾಗುವುದು.

## ೩ - ಬಂಧತತ್ತ್ವ :

**೧. ಬಂಧತತ್ತ್ವ ಎಂದರೇನು ?**

ತನ್ನ ಮನ, ವಚನ, ಕಾಯಗಳ ಕ್ರಿಯೆಯಿಂದ, ಶುಭಾಶುಭ ಪರಿಣಾಮಗಳಿಂದ ಕರ್ಮಾಣುಗಳು ಆತ್ಮಪ್ರದೇಶಕ್ಕೆ ಆಸ್ರವವಾಗಿ ಬಂದು ಆತ್ಮನೊಂದಿಗೆ ಅಂಟುವುದೇ ಬಂಧತತ್ತ್ವವಿದೆ. ಈ ಬಂಧಕ್ಕೆ ಆಸ್ರವವೇ ಕಾರಣ. ಈ ಆಸ್ರವವೂ ಮಿಥ್ಯಾ, ಅವಿರತ, ಕಷಾಯಯೋಗ ಮತ್ತು ಪ್ರಮಾದದಿಂದ ಆಗುತ್ತದೆ. ಈ ಮೂಲಕ ಕರ್ಮದ ಬಂಧಕ್ಕೆ ಕಾರಣವಾಗುವುದರಿಂದ ಇವಕ್ಕೆ ಭಾವಬಂಧವೆಂದೂ, ಕರ್ಮಗಳು ಆತ್ಮಪ್ರದೇಶದಲ್ಲಿ ಹಾಲು-ನೀರಿನಂತೆ, ಚಿನ್ನದ ರಜವು, ಕಲ್ಲುಮಣ್ಣಿನಲ್ಲಿ ಬೆರೆತಂತೆ ಬಂಧವಾಗುತ್ತದೆ. ಇದೇ ದ್ರವ್ಯಬಂಧ. ಅಂದರೆ ಎಂಟು ಕರ್ಮಗಳು ಆತ್ಮನನ್ನು ಎಡೆಬಿಡದೆ ಬಂಧಿಸುವುದು. ಛಿದ್ರವಾದ ದೋಣಿಗೆ ರಂಧ್ರದ ಮುಖಾಂತರವಾಗಿ ನೀರು ತುಂಬುವಂತೆ ಕರ್ಮಬಂಧವಾಗುತ್ತದೆ.

**೨. ಈ ಕರ್ಮಬಂಧದ ಭೇದಗಳಾವುವು ?**

ಕರ್ಮಬಂಧದಲ್ಲಿ ನಾಲ್ಕು ಭೇದಗಳಿವೆ :- 1) ಪ್ರಕೃತಿಬಂಧ 2) ಸ್ಥಿತಿಬಂಧ 3) ಅನುಭಾಗಬಂಧ 4) ಪ್ರದೇಶಬಂಧ.

**೩. ಪ್ರಕೃತಿಬಂಧವೆಂದರೇನು ?**

ಜ್ಞಾನಾವರಣೀಯಾದಿ ಎಂಟು ಕರ್ಮಗಳು ಆತ್ಮನ ಅನಂತ ಜ್ಞಾನಾದಿ ಎಂಟು ಅಮಿತವಾದ ಸ್ವಾಭಾವಿಕವಾದ ಗುಣಗಳನ್ನು ಹಿಡಿದು ಬಂಧಿಸಿರುವುದೇ



ಪ್ರಕೃತಿಬಂಧ. ಕರ್ಮಗಳಿಗೆ ಜ್ಞಾನಾವರಣಾದಿಗಳ ಕರ್ಮಪ್ರಕೃತಿಗಳು ಎನ್ನುತ್ತಾರೆ. ಈ ಕರ್ಮಪ್ರಕೃತಿಗಳು ಆತ್ಮನನ್ನು ಬಂಧಿಸಿ, ಆತ್ಮನ ಸ್ವಾಭಾವಿಕ ಗುಣಗಳನ್ನು ಮರೆಮಾಡಿರುವುದೇ ಪ್ರಕೃತಿಬಂಧ.

**೪. ಸ್ಥಿತಿಬಂಧವೆಂದರೇನು ?**

ಒಂದೊಂದೂ ಕರ್ಮವೂ ಆತ್ಮನೊಂದಿಗೆ ಎಷ್ಟೆಷ್ಟು ಕಾಲವಿರುತ್ತದೆ ಎಂಬ ಕಾಲಪರಿಮಿತಿಯೊಡನೆ ಜೀವನ ಪರಿಣಾಮಕ್ಕನುಸರಿಸಿ-ಯೋಗಗಳಿಗೆ ಅನುಸರಿಸಿ ಆಗುವ ಬಂಧವೇ ಸ್ಥಿತಿಬಂಧವಿದೆ.

ಜ್ಞಾನಾವರಣೀಯ, ದರ್ಶನಾವರಣೀಯ, ವೇದನೀಯ ಮತ್ತು ಅಂತರಾಯ ಕರ್ಮದ ಉತ್ಕೃಷ್ಟ ಸ್ಥಿತಿಯು ಮೂವತ್ತು ಕೋಟಾಕೋಟಿ ಸಾಗರೋಪಮವಾಗಿರುತ್ತದೆ. ಮೋಹನೀಯದ ಉತ್ಕೃಷ್ಟ ಸ್ಥಿತಿ ಎಪ್ಪತ್ತು ಕೋಟಾಕೋಟಿ ಸಾಗರೋಪಮವಾಗಿರುತ್ತದೆ. ನಾಮ, ಗೋತ್ರಕರ್ಮಗಳ ಉತ್ಕೃಷ್ಟ ಸ್ಥಿತಿಯು ಇಪ್ಪತ್ತು ಕೋಟಾಕೋಟಿ ಸಾಗರೋಪಮವಾಗಿರುತ್ತದೆ. ಆಯುಕರ್ಮದ ಉತ್ಕೃಷ್ಟ ಸ್ಥಿತಿಯು ಮೂವತ್ತಮೂರು ಸಾಗರೋಪಮವಾಗಿರುತ್ತದೆ.

ಹಾಗೆಯೇ ಜ್ಞಾನಾವರಣೀಯ, ದರ್ಶನಾವರಣೀಯ, ಮೋಹನೀಯ, ಅಂತರಾಯ ಕರ್ಮಗಳ ಜಘನ್ಯ ಸ್ಥಿತಿಯು ಅತ್ಯಂತ ಕಡಿಮೆಯೆಂದರೆ ಒಂದು ಅಂತರ್‌ಮುಹೂರ್ತ-ವೇದನೀಯ ಕರ್ಮದ ಜಘನ್ಯಸ್ಥಿತಿಯು 12 ಮುಹೂರ್ತ. ಒಂದು ಮುಹೂರ್ತವೆಂದರೆ 48 ನಿಮಿಷ. ನಾಮ, ಗೋತ್ರಗಳ ಜಘನ್ಯ ಸ್ಥಿತಿಯು 12 ಮುಹೂರ್ತವಿರುತ್ತದೆ.

**೫. ಅನುಭಾಗಬಂಧವೆಂದರೇನು ?**

ಆತ್ಮನ ಜ್ಞಾನಾದಿ ಗುಣಗಳು ಪ್ರಕಟವಾಗದಂತೆ ಬಂಧಿಸಿಕೊಂಡ ಕರ್ಮಗಳು ಉದಯಕ್ಕೆ ಬಂದು ನಿಜವಾದ ಸುಖ-ಆನಂದಗಳನ್ನು ಅನುಭವಿಸದಂತೆ ಮಾಡುವ ಕರ್ಮದ ಉದಯವೇ ಅನುಭಾಗಬಂಧ. ಆಯಾ ಕರ್ಮಗಳ ಫಲವನ್ನು ಅನುಭವಿಸಿದ ನಂತರ ಉದಯಕ್ಕೆ ಬಂದ ಆ ಕರ್ಮದ ಭಾಗವು ಆತ್ಮನನ್ನು ಬಿಟ್ಟುಹೋಗುತ್ತದೆ. ಕರ್ಮದ ಫಲವನ್ನು ಅನುಭವಿಸುವುದಕ್ಕೆ ಆಗುವ ಕರ್ಮೋದಯವೇ ಅನುಭಾಗಬಂಧವಿದೆ.

ಶುಭಕರ್ಮಗಳಾದ ಪುಣ್ಯಫಲ ಅನುಭವವು ತೀವ್ರ-ಮಂದ ಪರಿಣಾಮದಂತೆ ಬಂಧವಾಗಿರುವುದರಿಂದ ಅದರ ಶಕ್ತಿಯ, ಸುಖದ ಅನುಭವವು

ಬೆಲ್ಲದ ಪಾಕ, ಕಲ್ಲುಸಕ್ಕರೆ, ಅಮೃತದ ಸ್ವಾದದಂತೆ ಇರುತ್ತದೆ. ಅಶುಭಕರ್ಮಗಳಾದ ಪಾಪಫಲದ ಅನುಭವವೂ ತೀವ್ರ, ಮಂದ ಪರಿಣಾಮದಂತೆ ಬಂಧವಾಗಿರುವುದರಿಂದ ಅದರ ಶಕ್ತಿಯ-ದುಃಖದ ಅನುಭವವು ಲತೆ, ಹಗ್ಗ, ಮೂಳೆ, ಕಲ್ಲು ಬಂಡೆಗಳಂತೆ. ಅಂದರೆ ಮೃದುತ್ವ-ಕಾಠಿಣ್ಯತೆಗಳ ತಾರತಮ್ಯತೆಯಂತೆ ಇರುತ್ತದೆ.

೬. **ಪ್ರದೇಶಬಂಧವೆಂದರೇನು ?**

ಆತ್ಮನು ಬಹುಪ್ರದೇಶಿಯಾದವನು. ಈ ಆತ್ಮ ಪ್ರದೇಶದಲ್ಲಿ ಕರ್ಮವು ಹಾಲು-ನೀರಿನಂತೆ ಬೆರೆತು ಪರಸ್ಪರ ಒಂದೇ ಆದಂತೆ ಕಾಣುವುದೇ ಪ್ರದೇಶ ಬಂಧವಿದೆ. ಬಂಧವಾದ ಕರ್ಮವು ಆತ್ಮನನ್ನು ಪೂರ್ಣವಾಗಿ ತುಂಬಿಬಿಡುತ್ತದೆ. ತನ್ನ ಶುಭಾಶುಭ ಯೋಗದಿಂದ ಇಡೀ ಆತ್ಮವೇ ಪರಿಸ್ಪಂಧನವಾಗುತ್ತದೆ. ಆಗ ಇಡೀ ಆತ್ಮನ ತುಂಬಾ ಕರ್ಮವು ವ್ಯಾಪಿಸುತ್ತದೆ. ಈ ಕರ್ಮಬಂಧವು ಪ್ರತಿ ಸಮಯದಲ್ಲೂ ಆಗುತ್ತಲೇ ಇರುತ್ತದೆ. ಆದರೆ ಶುಕ್ಲಧ್ಯಾನ, ಯೋಗ ನಿರೋಧದ ಸಮಯದಲ್ಲಿ ಆಗುವುದಿಲ್ಲ.

ಈ ನಾಲ್ಕೂ ಪ್ರಕಾರದ ಬಂಧಗಳಲ್ಲಿ ಪ್ರಕೃತಿ ಮತ್ತು ಪ್ರದೇಶ ಬಂಧಗಳು ಯೋಗ ನಿಮಿತ್ತದಿಂದಲೂ ಸ್ಥಿತಿ ಮತ್ತು ಅನುಭಾಗಬಂಧಗಳು ಕಷಾಯ ನಿಮಿತ್ತದಿಂದಲೂ ಆಗುತ್ತವೆ.

## ೪ - ಸಂವರ ತತ್ತ್ವ :

೧. **ಸಂವರ ತತ್ತ್ವವೆಂದರೇನು ?**

ಕರ್ಮಗಳು ಬರುವುದನ್ನು ಅಂದರೆ ಕರ್ಮಾಸ್ರವವನ್ನು ತಡೆಯುವುದು ಸಂವರವೆನಿಸುತ್ತದೆ. ತನ್ನ ಶುದ್ಧ-ಶುಭ ಪರಿಣಾಮದಿಂದ, ಕಾರ್ಯದಿಂದ ಭಾವಸಂವರ-ದ್ರವ್ಯಸಂವರ ಆಗುತ್ತದೆ. ದೋಣಿಗೆ ನೀರು ಬರುವುದಕ್ಕೆ ಕಾರಣವಾದ ದೋಣಿಯ ರಂಧ್ರವನ್ನು ಮುಚ್ಚುವ ಹಾಗೆ ಆತ್ಮ ಪ್ರದೇಶಕ್ಕೆ ಕರ್ಮವು ಬರುವ ದ್ವಾರವನ್ನು ತಡೆಯುವುದು.

೨. **ಸಂವರದ ಭೇದಗಳಾವುವು ?**

ಸಂವರದಲ್ಲಿ- 1) ಭಾವಸಂವರ 2) ದ್ರವ್ಯಸಂವರ ಎಂದು ಎರಡು ವಿಧ.

ಭಾವಸಂವರವೆಂದರೆ ಆಸ್ರವವನ್ನು ತಡೆಯುವ ಜೀವದ ಪರಿಣಾಮ, ದ್ರವ್ಯಸಂವರವೆಂದರೆ ಕರ್ಮಪುದ್ಗಲಾಣುಗಳು ಆತ್ಮಪ್ರದೇಶಕ್ಕೆ ಬರುವುದನ್ನು ತಡೆಯುವುದು.



೩. **ಯಾವ ಯಾವ ಗುಣ ಸ್ಥಾನದಲ್ಲಿ ಕರ್ಮದ ಸಂವರವಾಗುವುದು ?**

ಮಿಥ್ಯಾತ್ವವು-ನಾಲ್ಕನೇ ಗುಣಸ್ಥಾನದಲ್ಲೂ,

ಅವಿರತವು- 5-6ನೇ ಗುಣಸ್ಥಾನದಲ್ಲೂ ,

ಪ್ರಮಾದವು- 7ನೇ ಗುಣಸ್ಥಾನದಲ್ಲೂ,

ಕಷಾಯವು- 8-9ನೇ ಗುಣಸ್ಥಾನದಲ್ಲೂ,

ಯೋಗವು- 14ನೇ ಗುಣಸ್ಥಾನದಲ್ಲೂ ತಡೆಯಲ್ಪಡುತ್ತದೆ.

ಈ ರೀತಿ ಮಿಥ್ಯಾ, ಅವಿರತ, ಪ್ರಮಾದ, ಕಷಾಯ ಯೋಗಗಳೇ ಕರ್ಮಾಸ್ರವಕ್ಕೆ ಕಾರಣವಾಗಿವೆ. ಇವುಗಳನ್ನು ತಡೆಯುವುದೇ ಸಂವರ.

೪. **ಸಂವರದ ಕಾರಣಗಳಾವುವು ?**

ಪಂಚವ್ರತ, ತ್ರಿಗುಪ್ತಿ, ಪಂಚಸಮಿತಿ, ದಶಧರ್ಮ, ಪಂಚಾಚಾರ, ದ್ವಾದಶಾನುಪ್ರೇಕ್ಷೆ, ಪರಿಷಹಜಯಗಳಿಂದ ಹಾಗೂ ತಪಗಳಿಂದ ಕರ್ಮಗಳು ಬರುವುದನ್ನು ತಡೆಯಬಹುದು. ಇವೇ ಸಂವರಕ್ಕೆ ಕಾರಣಗಳು-ಕಾರ್ಯಗಳು -ಭಾವಗಳು.

**ಪಂಚವ್ರತಗಳು :-** ಅಹಿಂಸೆ, ಸತ್ಯ, ಅಚೌರ್ಯ, ಬ್ರಹ್ಮಚರ್ಯ, ಅಪರಿಗ್ರಹ.

**ತ್ರಿಗುಪ್ತಿ :-** ಮನ ವಚನ ಕಾಯಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದು, ಮನೋಗುಪ್ತಿ, ವಚನಗುಪ್ತಿ, ಕಾಯಗುಪ್ತಿ.

**ಪಂಚಸಮಿತಿ :-** ಈರ್ಯಾಸಮಿತಿ, ಭಾಷಾಸಮಿತಿ, ಏಷಣಾಸಮಿತಿ, ಆದಾನ ನಿಕ್ಷೇಪಣಾಸಮಿತಿ, ಉತ್ಸರ್ಗಸಮಿತಿ.

**ದಶಧರ್ಮ :-** ಉತ್ತಮಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ-ಬ್ರಹ್ಮಚರ್ಯ.

**ದ್ವಾದಶಾನುಪ್ರೇಕ್ಷೆ :-** ಅನಿತ್ಯ, ಅಶರಣ, ಸಂಸಾರ, ಏಕತ್ವ, ಅನ್ಯತ್ವ, ಅಶುಚಿತ್ವ, ಆಸ್ರವ, ಸಂವರ, ನಿರ್ಜರಾ, ಲೋಕ, ಬೋಧಿದುರ್ಲಭ ಮತ್ತು ಧರ್ಮ ಎಂಬಿವೇ ಹನ್ನೆರಡು ಭಾವನೆಗಳು.

**ಪರೀಷಹಜಯ :-** ಕ್ಷುಧಾ (ಹಸಿವು), ತೃಷಾ(ಬಾಯಾರಿಕೆ), ಶೀತ, ಉಷ್ಣ, ದಂಶಮಶಕ (ಸೊಳ್ಳೆ, ನೊಣ ಕಡಿತ), ನಗ್ನತ್ವ, ಅರತಿ(ರಾಗ-ದ್ವೇಷ), ಸ್ತ್ರೀ, ಚರ್ಯಾ(ಆಹಾರದ ತೊಂದರೆ), ನಿಷದ್ಯಾ (ಏಕಾಂತದ ತೊಂದರೆ), ಶಯ್ಯಾ (ನೆಲದಮೇಲೆ ಮಲಗುವುದು), ಆಕ್ರೋಶ, ವಧ, ಯಾಚನ, ಅಲಾಭ, ಮಲ, ರೋಗ, ತೃಣಸ್ಪರ್ಶ, ಸತ್ಕಾರ-ಪುರಸ್ಕಾರ, ಪ್ರಜ್ಞಾ, ಅಜ್ಞಾನ, ಅದರ್ಶನ ಎಂಬಿವೇ 22 ಪರೀಷಹಗಳು.

**ಪಂಚಚಾರಿತ್ರ :-** ಸಾಮಾಯಿಕ, ಛೇದೋಪಸ್ಥಾಪನ, ಪರಿಹಾರವಿಶುದ್ಧಿ, ಸೂಕ್ಷ್ಮಸಾಂಪರಾಯ, ಯಥಾಖ್ಯಾತ ಚಾರಿತ್ರ. ಇವೆಲ್ಲವುಗಳ ವಿವರವನ್ನು ಈ ಹಿಂದೆ ತಿಳಿಸಲಾಗಿದೆ.

## ೫ - ನಿರ್ಜರಾ ತತ್ತ್ವ :

**೧. ನಿರ್ಜರಾ ತತ್ತ್ವವೆಂದರೇನು ?**

ದೋಣಿಯೊಳಗಿನ ನೀರನ್ನು ಹೊರಚಲ್ಲುವುದು. ಕರ್ಮಗಳು ಆಸ್ರವವಾಗಿ ಆತ್ಮ ಪ್ರದೇಶದಲ್ಲಿ ಬಂಧವಾಗಿರುವುದನ್ನು ಸಂವರ ಮಾಡಿ ಅವನ್ನು ಹೊರಕ್ಕೆ ಹಾಕುವುದೇ ನಿರ್ಜರೆ. ಅಂದರೆ ಬಂಧವಾದ ಕರ್ಮವನ್ನು ಕಳೆದುಕೊಳ್ಳುವುದು, ಕರ್ಮಕ್ಷಯ ಮಾಡುವುದು ನಿರ್ಜರಾ ತತ್ತ್ವವಾಗಿದೆ.

**೨. ನಿರ್ಜರಾ ತತ್ತ್ವದ ಭೇದಗಳಾವುವು ?**

1) ಭಾವನಿರ್ಜರೆ 2) ದ್ರವ್ಯನಿರ್ಜರೆ 3) ಸವಿಪಾಕನಿರ್ಜರೆ 4) ಅವಿಪಾಕ ನಿರ್ಜರೆ.

ತನ್ನ ಶುದ್ಧ ಭಾವದಿಂದ ಶುದ್ಧಪರಿಣಾಮದಿಂದ ಕರ್ಮವು ಆತ್ಮನನ್ನು ಬಿಟ್ಟುಹೋಗುವ ಸ್ಥಿತಿಗೆ ಭಾವನಿರ್ಜರೆ ಎಂದೂ, ಧ್ಯಾನಾದಿಗಳಿಂದ, ತಪಗಳಿಂದ ಕರ್ಮವು ಕಳೆದುಹೋಗುವುದಕ್ಕೆ ದ್ರವ್ಯನಿರ್ಜರೆ ಎಂದೂ ಹೇಳುವರು.

**೩. ಸವಿಪಾಕನಿರ್ಜರೆ ಎಂದರೇನು ?**

ತಾನು ಬಂಧಿಸಿಕೊಂಡ ಕರ್ಮಗಳ ಫಲವನ್ನು ಸುಖವೋ, ದುಃಖವೋ, ಪಾಪವೋ, ಪುಣ್ಯವೋ, ಅನುಭವಿಸಿ ಕಳೆದುಕೊಳ್ಳುವುದು ಸವಿಪಾಕನಿರ್ಜರೆ ಆಗುತ್ತದೆ. ಅಂದರೆ ಸಮಯಕ್ಕೆ ಅನುಸಾರ ಪಕ್ವವಾಗಿ ಉದಯಕ್ಕೆ ಬಂದು ಫಲ ನೀಡಿ, ತಾನೇ ತಾನಾಗಿ ಬಿಟ್ಟು ಹೋಗುವುದು.

**ಉದಾಹರಣೆ :-** ಮರದ ಮೇಲೆ ಇದ್ದು ಕಾಲಕ್ಕೆ ಅನುಸಾರವಾಗಿ



ಕಾಯಿಯು ಹಣ್ಣಾಗಿ ತನಗೆ ತಾನೇ ಉದುರುವಂತೆ ಸವಿಪಾಕನಿರ್ಜರೆಯಾಗಿದೆ. ಇದಕ್ಕೆ ಸಕಾಮನಿರ್ಜರೆ ಎಂದೂ ಹೇಳುವರು.

**೪. ಅವಿಪಾಕನಿರ್ಜರೆ ಎಂದರೇನು ?**

ತಪೋಧ್ಯಾನ, ವೈರಾಗ್ಯ, ಶುದ್ಧಭಾವಗಳಿಂದ ಬಂಧವಾಗಿದ್ದ ಕರ್ಮಗಳು ಆತ್ಮ ಪ್ರದೇಶವನ್ನು ಬಿಟ್ಟು ಹೋಗುವುದು ಅವಿಪಾಕ ನಿರ್ಜರೆಯಾಗಿದೆ. ಅಂದರೆ ಮರದಲ್ಲಿ ಬಲಿತಕಾಯನ್ನು ತಂದು ಒತ್ತೆ ಹಾಕಿ ಬೇಗ ಹಣ್ಣು ಮಾಡುವಂತೆ ಕರ್ಮಗಳು ಮುಂದೆ ಫಲ ಕೊಡದಂತೆ ಕಳೆದುಕೊಳ್ಳುವುದೇ ಅವಿಪಾಕ ನಿರ್ಜರೆಯಾಗಿದೆ. ಈ ನಿರ್ಜರೆಯು ಮೋಕ್ಷಕ್ಕೆ ತುಂಬಾ ಕಾರಣವಾದುದು ಇದಕ್ಕೆ ಅಕಾಮನಿರ್ಜರೆ ಎಂದೂ ಹೇಳುವರು. ಕಟ್ಟಿಕೊಂಡ ಕರ್ಮವು ಫಲ ಕೊಡದೆ ಕಳೆದುಹೋಗುವುದು.

**೫. ನಿರ್ಜರೆಗೆ ವಿಶೇಷ ವಿಧಾನಗಳಾವುವು ?**

ತಪಸ್ಸು ಮತ್ತು ಆತ್ಮ ಧ್ಯಾನಗಳಿಂದ ಕರ್ಮದ ನಿರ್ಜರೆಯಾಗುತ್ತದೆ.

**೬. ತಪಸ್ಸು ಎಂದರೇನು ? ಅದರಲ್ಲಿ ಎಷ್ಟುವಿಧ ?**

**'ತಪಸಾ ನಿರ್ಜರಾ ಚ'** ಎಂಬಂತೆ ತಪಸ್ಸು ನಿರ್ಜರೆಗೆ ಕಾರಣವಾಗಿದೆ. ಇಂದ್ರಿಯ, ಶರೀರ, ಮನ, ಮಾತುಗಳನ್ನು ಹಿಡಿತದಲ್ಲಿಟ್ಟುಕೊಂಡು ಕೆಲವು ಕ್ರಿಯೆಗಳಿಂದ ತಪಿಸುವುದು, ಕರ್ಮಗಳನ್ನು ಸುಡುವುದು, ತಪಸ್ಸಾಗಿದೆ. ಚಿನ್ನದ ಅದಿರನ್ನು ಕಾಯಿಸುವುದರಿಂದ ಅದರಲ್ಲಿದ್ದ ಕಿಟ್ಟಕಾಲಿಕೆಯು ಸುಟ್ಟು ನಾಶವಾಗಿ ಉತ್ತಮ ಗುಣಮಟ್ಟದ ಚಿನ್ನ ದೊರೆಯುವಂತೆ ತಪಸ್ಸಿನಿಂದ ಶುದ್ಧಾತ್ಮ ಸ್ಥಿತಿಯನ್ನು ಹೊಂದಬಹುದು.

**೭. ತಪಸ್ಸಿನ ವಿಧಾನಗಳಾವುವು ? ಅವು ಎಷ್ಟು ವಿಧ ?**

ತಪಸ್ಸಿನಲ್ಲಿ ಎರಡು ವಿಧ :-

1) ಅಂತರಂಗ ತಪಸ್ಸು 2) ಬಹಿರಂಗ ತಪಸ್ಸು.

**೮. ಅಂತರಂಗ ತಪಸ್ಸುಗಳಾವುವು ?**

1) ಪ್ರಾಯಶ್ಚಿತ್ತ 2) ವಿನಯ 3) ವಯ್ಯಾವೃತ್ಯ 4) ಸ್ವಾಧ್ಯಾಯ 5) ವ್ಯುತ್ಸರ್ಗ 6) ಧ್ಯಾನ.

**೯. ಪ್ರಾಯಶ್ಚಿತ್ತವೆಂದರೇನು ? ಅವುಗಳಾವುವು ?**

ತಾನು ಮಾಡಿದ ದೋಷಗಳ ಬಗ್ಗೆ ಪಶ್ಚಾತ್ತಾಪಪಟ್ಟು, ಅಂತಹ ತಪ್ಪು

ಗಳನ್ನೂ, ದೋಷಗಳನ್ನೂ ಮತ್ತೆ ಮಾಡದಂತೆ ಎಚ್ಚರ ವಹಿಸಿ ಮಾಡಿದ ದೋಷಗಳ ಪರಿಹಾರ ಮಾಡುವುದಕ್ಕೆ ಪ್ರಾಯಶ್ಚಿತ್ತವೆನ್ನುವರು.

ಪ್ರಾಯಶ್ಚಿತ್ತದಲ್ಲಿ ಒಂಭತ್ತು ಭೇದಗಳಿವೆ-

1) ಆಲೋಚನ 2) ಪ್ರತಿಕ್ರಮಣ 3) ತದುಭಯ 4) ವಿವೇಕ 5) ವ್ಯುತ್ಸರ್ಗ 6) ತಪ 7) ಛೇದ 8) ಪರಿಹಾರ 9) ಉಪಸ್ಥಾಪನಾ.

**೧೦. ವಿನಯವೆಂದರೇನು ? ಅದರ ವಿಧಾನಗಳಾವುವು ?**

ದೇವರು, ಶಾಸ್ತ್ರ, ಗುರು, ಆಚಾರ್ಯರುಗಳಲ್ಲಿ ನಯ, ವಿನಯ ದಿಂದಿರುವುದು. ತಗ್ಗಿ-ಬಗ್ಗಿ ಗೌರವದಿಂದ ನಡೆದುಕೊಳ್ಳುವುದು.

ಇದರಲ್ಲಿ ನಾಲ್ಕು ಭೇದಗಳಿವೆ :-

1) ಆಜ್ಞಾವಿನಯ 2) ದರ್ಶನವಿನಯ 3) ಚಾರಿತ್ರವಿನಯ 4) ಉಪಚಾರವಿನಯ.

**೧೧. ವೈಯಾವೃತ್ಯವೆಂದರೇನು ? ಅವುಗಳ ವಿಧಗಳಾವುವು ?**

ಗುರು, ಸಾಧು, ಸಜ್ಜನರ ಸೇವೆ ಮಾಡುವುದು.

ಇದರಲ್ಲಿ ಹತ್ತು ಭೇದಗಳಿವೆ :-

1) ಆಚಾರ್ಯ 2) ಉಪಾಧ್ಯಾಯ 3) ತಪಸ್ವಿ 4) ಶೈಕ್ಷ್ಯ 5) ಗ್ಲಾನಿ 6) ಗಣ 7) ಕುಲ 8) ಸಂಘ 9) ಸಾಧು 10) ಮನೋಜ್ಞ. ಈ 10 ರೀತಿಯಲ್ಲಿ ಸಾಧುಗಳ ಸೇವೆ ಮಾಡುವುದು.

**೧೨. ಸ್ವಾಧ್ಯಾಯ ಎಂದರೇನು ? ಅವುಗಳಲ್ಲಿ ಎಷ್ಟು ವಿಧ ?**

ಆತ್ಮನ ಮತ್ತು ಧರ್ಮ ಗ್ರಂಥಗಳ ಅಧ್ಯಯನ ಮಾಡುವುದು ಇತರ ರಿಂದ ಕೇಳುವುದು.

ಸ್ವಾಧ್ಯಾಯದಲ್ಲಿ ಐದು ವಿಧಗಳಿವೆ :- 1) ವಾಚನ 2) ಪೃಚ್ಛನ 3) ಅನುಪ್ರೇಕ್ಷಾ 4) ಆಮ್ನಾಯ 5) ಧರ್ಮೋಪದೇಶ.

ಈ ರೀತಿಯಾಗಿ ಸ್ವಾಧ್ಯಾಯವೂ ಶ್ರೇಷ್ಠವಾದ ತಪಸ್ಸಾಗಿದೆ.

**೧೩. ವ್ಯುತ್ಸರ್ಗವೆಂದರೇನು ? ಅವುಗಳ ಭೇದಗಳಾವುವು ?**

ಬಾಹ್ಯ ಪರಿಗ್ರಹಗಳ ಮತ್ತು ಅಂತರಂಗ ಪರಿಗ್ರಹಗಳ ತ್ಯಾಗ ಮಾಡುವುದೇ ವ್ಯುತ್ಸರ್ಗ ತಪವಾಗಿದೆ.



ಅಂತರಂಗ ಪರಿಗ್ರಹಗಳು 14 ಇವೆ :- 1) ಮಿಥ್ಯಾತ್ವ 2) ವೇದ 3) ಹಾಸ್ಯ 4) ರತಿ 5) ಅರತಿ 6) ಶೋಕ 7) ಭಯ 8) ಜಿಗುಪ್ಸಾ 9) ರಾಗ 10) ದ್ವೇಷ 11) ಕ್ರೋಧ 12) ಮಾನ 13) ಮಾಯಾ 14) ಲೋಭ.

ಬಾಹ್ಯ ಪರಿಗ್ರಹಗಳು 10 :- 1) ಧನ 2) ಧಾನ್ಯ 3) ಕ್ಷೇತ್ರ 4) ಸುವರ್ಣ 5) ಸ್ತ್ರೀ 6) ಪುತ್ರ 7) ಪುತ್ರಿ 8) ದಾಸ 9) ದಾಸಿ 10) ಕುಪ್ಯ 11) ಭಾಂಡ -ಹೀಗೆ ಚೇತನ-ಅಚೇತನ ಪದಾರ್ಥಗಳ ತ್ಯಾಗವೇ ವ್ಯುತ್ಸರ್ಗವಾಗಿದೆ.

**೧೪. ಧ್ಯಾನವೆಂದರೇನು ? ಅವುಗಳ ವಿಧಗಳಾವುವು ?**

ಏಕಾಗ್ರತೆಯಿಂದ ಯಾವುದಾದರೊಂದು ವಿಷಯದ ಬಗ್ಗೆ ಚಿಂತನ ಮಾಡುವುದು ಧ್ಯಾನವಿದೆ.

ಧ್ಯಾನದಲ್ಲಿ ನಾಲ್ಕು ಭೇದಗಳಿವೆ :-

1) ಆರ್ತಧ್ಯಾನ 2) ರೌದ್ರಧ್ಯಾನ 3) ಧರ್ಮಧ್ಯಾನ 4) ಶುಕ್ಲಧ್ಯಾನ.

ಇವುಗಳಲ್ಲಿ ಮೊದಲೆರಡು ಅಶುಭ ಧ್ಯಾನಗಳು. ಧರ್ಮಧ್ಯಾನ ಶುಭ ವಾದುದು. ಶುಕ್ಲಧ್ಯಾನವು ಶುದ್ಧವಾದುದು. ಇದು ಕರ್ಮನಿರ್ಜರೆಗೆ ಕಾರಣ ವಾಗಿದೆ. (ಧ್ಯಾನದ ವಿವರಗಳನ್ನು ಹಿಂದೆ ತಿಳಿಸಲಾಗಿದೆ)

**೧೫. ಬಹಿರಂಗ ತಪಸ್ಸುಗಳಾವುವು ?**

ಬಾಹ್ಯಕ್ರಿಯೆ, ಚಾರಿತ್ರಗಳು ಬಹಿರಂಗ ತಪಸ್ಸುಗಳಿವೆ.

ಇವು 6 ಇವೆ :- 1) ಅನಶನ 2) ಅವಮೌದಾರ್ಯ 3) ವೃತ್ತಿಪರಿಸಂಖ್ಯಾನ 4) ರಸಪರಿತ್ಯಾಗ 5) ಏಕಾಂತ 6) ಕಾಯಕ್ಲೇಶ.

ಅನಶನ-ಉಪವಾಸ, ಅವಮೌದಾರ್ಯ-ಅರೆ ಹೊಟ್ಟೆಯ ಆಹಾರ ಸ್ವೀಕಾರ, ವೃತ್ತಿಪರಿಸಂಖ್ಯಾನ-ಮನೆ-ವಸ್ತುಗಳನ್ನು ಸಂಕಲ್ಪಿಸಿಕೊಳ್ಳುವುದು, ರಸ ಪರಿತ್ಯಾಗ-ರಸವಸ್ತುಗಳನ್ನು ಬಿಡುವುದು, ಏಕಾಂತ-ನಿರ್ಜನ ಪ್ರದೇಶದಲ್ಲಿರು ವುದು, ಕಾಯಕ್ಲೇಶ-ಶರೀರ ದಂಡನೆ. ಇವು ಬಹಿರಂಗ ತಪಸ್ಸುಗಳಿವೆ. ಇವೇ ಕರ್ಮನಿರ್ಜರೆಗೆ ಕಾರಣವಿವೆ.

## ೬ - ಮೋಕ್ಷತತ್ತ್ವ :

**೧. ಮೋಕ್ಷವೆಂದರೇನು ?**

ಶುದ್ಧ ಪರಿಣಾಮ ಧ್ಯಾನ-ತಪಸ್ಸಿನ ಮೂಲಕ ತಾನು ಹೊತ್ತ ಕರ್ಮಗಳನ್ನು ನಿರ್ಜರೆ(ಕ್ಷಯ) ಮಾಡಿದ ನಂತರ ಹೊಂದುವ ಶುದ್ಧವಾದ ಆತ್ಮನ ಅವಸ್ಥೆಯೇ ಮೋಕ್ಷ. 'ಮೋ'-ಎಂದರೆ ಮೋಹದ, 'ಕ್ಷ'-ಎಂದರೆ ಕ್ಷಯ. ಮೋಹದ ಕ್ಷಯವೇ ಮೋಕ್ಷ. ಅಂದರೆ ಕರ್ಮಗಳಲ್ಲೆಲ್ಲಾ ಪ್ರಬಲವಾದುದೂ, ಕರ್ಮಗಳ ರಾಜನೆನಿಸಿರುವುದೂ ಆದುದೇ ಮೋಹನೀಯ ಕರ್ಮ. ಈ ಕರ್ಮದಿಂದ ಆತ್ಮನ ಬಿಡುಗಡೆಯೇ ಮೋಕ್ಷ. ಮೋಕ್ಷ ಹೊಂದಿದ ಆತ್ಮನು ತನ್ನ ಊರ್ಧ್ವಗಮನತ್ವ ಗುಣದಿಂದ ನೇರವಾಗಿ ಮೇಲೇರಿ ಲೋಕದ ತುತ್ತತುದಿಯಲ್ಲಿರುವ ಈಶತ್ಪ್ರಾಗ್ಭಾರದ ಸಿದ್ಧಲೋಕದಲ್ಲಿ ನಿಲ್ಲುತ್ತದೆ. ಅಲ್ಲಿ ಸದಾ ಆತ್ಮಿಕವಾದ ಅನಂತಗುಣಗಳನ್ನು ಹೊಂದಿ ನಿತ್ಯ ಸುಖ-ಶಾಂತಿಯಿಂದ ಸ್ಥಿರವಾಗಿರುತ್ತದೆ. ಅದು ಅರೂಪಿಯಾಗಿ ಜ್ಞಾನಾನಂದ ನಿರ್ಮಲ ಶುದ್ಧ ಚೇತನವಾಗಿರುತ್ತದೆ. ಅದು ಮತ್ತೆ ಈ ಸಂಸಾರಕ್ಕೆ ಬರುವುದಿಲ್ಲ. ಸಕಲ ಭವ್ಯಾತ್ಮರೂ ಕಾಲಲಬ್ಧಿಯೊದಗಿದಾಗ ತಮ್ಮ ಪುರುಷಾರ್ಥ ಪ್ರಯತ್ನದಿಂದ -ಈ ಸಿದ್ಧ ಪದವಿಯನ್ನು ಹೊಂದಬಹುದು. ಮತ್ತೆ ಹುಟ್ಟದ, ಸಾಯದ ಆತ್ಮನ ಸ್ಥಿತಿಯೇ ಮೋಕ್ಷ.

**೨. ಸಪ್ತತತ್ತ್ವಗಳಲ್ಲಿ ಸಂಸಾರದ ಬಂಧ-ಮೋಕ್ಷಗಳಿಗೆ ಯಾವುದು ಕಾರಣವಿದೆ ?**

ಸಪ್ತತತ್ತ್ವಗಳಲ್ಲಿ ಮುಖ್ಯವಾಗಿ ಜೀವ-ಅಜೀವವೆಂದು ಎರಡು ತತ್ತ್ವಗಳಿವೆ. ಇವುಗಳೇ ಬಂಧ-ಮೋಕ್ಷಗಳಿಗೆ ಕಾರಣವಾಗಿವೆ.

ಜೀವವು ಅಜೀವವೆಂಬ ಕರ್ಮವನ್ನು ಆಸ್ರವವೆಂದರೆ ಬರಮಾಡಿಕೊಂಡು, ಬಂಧವೆಂದರೆ-ಬಂಧಿಸಿಕೊಂಡರೆ, ಅದು ಸಂಸಾರಕ್ಕೆ ಕಾರಣವಾಗುತ್ತದೆ. ಹಾಗೆಯೇ ಜೀವವು ಅಜೀವವೆಂಬ ಕರ್ಮವನ್ನು ಸಂವರವೆಂದರೆ ತನ್ನತ್ತ ಬರುವುದನ್ನು ತಡೆದು, ನಿರ್ಜರೆ ಎಂದರೆ ಈಗಾಗಲೇ ತನ್ನಲ್ಲಿ ಬಂಧವಾಗಿರುವ ಕರ್ಮಗಳನ್ನು ಕಳೆದುಕೊಂಡರೆ, ಮೋಕ್ಷಕ್ಕೆ ಕಾರಣವಾಗುವುದು.

ಜೀವವು ಆಸ್ರವವನ್ನು ಸಂವರ ಮಾಡುವುದೂ, ಬಂಧವನ್ನು ನಿರ್ಜರೆ ಮಾಡುವುದೇ ಮೋಕ್ಷವಿದೆ. ಜೀವ-ಅಜೀವಗಳ ಬಂಧ ಮತ್ತು ಮೋಕ್ಷಗಳಿಗೆ ಆಸ್ರವ-ಸಂವರಗಳ ಪಾತ್ರ ಮಹತ್ವದ್ದು. ಆದ್ದರಿಂದ ಕರ್ಮಗಳ ಆಸ್ರವ-ಬಂಧಗಳನ್ನು ಕಡಿಮೆ ಮಾಡಿಕೊಂಡು, ಸಂವರೆ-ನಿರ್ಜರೆಗಳನ್ನು ಹೆಚ್ಚು ಮಾಡುವುದರಿಂದ ಆತ್ಮನು ಮುಕ್ತನಾಗುವನು.



## ೯ - ಪದಾರ್ಥಗಳು :

**೧. ಪದಾರ್ಥವೆಂದರೇನು ?**

ಗುಣ-ಪರ್ಯಾಯಗಳನ್ನು ಹೊಂದಿರುವ ಜೀವಾದಿಗಳ ಗುಣದ ಭಾವಕ್ಕೆ ಪದಾರ್ಥವೆನ್ನುತ್ತಾರೆ.

**೨. ಪದಾರ್ಥಗಳೆಷ್ಟು ? ಅವು ಯಾವುವು ?**

ಪದಾರ್ಥಗಳು ಒಂಭತ್ತು :- 1) ಜೀವ 2) ಅಜೀವ 3) ಆಸ್ರವ 4) ಬಂಧ 5) ಸಂವರ 6) ನಿರ್ಜರಾ 7) ಮೋಕ್ಷ 8) ಪಾಪ 9) ಪುಣ್ಯ.

ಅಂದರೆ ಸಪ್ತತತ್ತ್ವಗಳ ಜೊತೆಗೆ ಪಾಪ-ಪುಣ್ಯಗಳನ್ನು ಸೇರಿಸಿದರೆ ನವಪದಾರ್ಥಗಳಾಗುತ್ತವೆ. ಇಲ್ಲಿ ಇವುಗಳ ಅರ್ಥ-ವಿಚಾರ-ಕಾರ್ಯ ಮುಖ್ಯವಾಗಿದೆ.

ಇವುಗಳಲ್ಲಿ ಸಪ್ತತತ್ತ್ವಗಳ ವಿವರವನ್ನು ಈ ಹಿಂದೆ ತಿಳಿಸಲಾಗಿದೆ. ಈಗ ಪುಣ್ಯ ಮತ್ತು ಪಾಪಗಳ ವಿಷಯ ತಿಳಿಸಲಾಗುವುದು. ಶುಭಾಶುಭ ಭಾವ-ಕಾರ್ಯ-ವಿಚಾರವೇ ಪುಣ್ಯ-ಪಾಪಗಳು.

**೩. ಪುಣ್ಯವೆಂದರೇನು ?**

ಮನ-ವಚನ-ಕಾಯಗಳ ಶುಭಯೋಗದಿಂದ ಬಂದಂಟಿದ ಶುಭ ಕರ್ಮವೇ ಪುಣ್ಯವಿದೆ.

**೪. ಪುಣ್ಯದ ವಿಧಗಳಾವುವು ?**

ಪುಣ್ಯದಲ್ಲಿ- 1) ಭಾವಪುಣ್ಯ 2) ದ್ರವ್ಯಪುಣ್ಯ ಎಂದು ಎರಡು ವಿಧಗಳಿವೆ. ಪುಣ್ಯವು ಅಸಾತಾವೇದನೀಯ ಕರ್ಮದ ಫಲವಾಗಿದೆ.

ಶುಭಭಾವನೆಯೇ ಭಾವಪುಣ್ಯವಾಗಿದೆ. ಶುಭಕರ್ಮಗಳ ಬಂಧದ ಉದಯವೇ ದ್ರವ್ಯಪುಣ್ಯವಾಗಿದೆ. ಇದಕ್ಕೆ ಪ್ರಶಸ್ತ ಕರ್ಮಪ್ರಕೃತಿ ಎನ್ನುವರು.

**೫. ಶುಭಭಾವಗಳ ಕ್ರಿಯೆಗಳಾವುವು ?**

ಅಹಿಂಸೆ, ಜೀವರಕ್ಷಣೆ, ಸತ್ಯವಚನ, ಅಚೌರ್ಯ, ಬ್ರಹ್ಮಚರ್ಯ, ಶೀಲ ಪಾಲನೆ, ಅಪರಿಗ್ರಹ, ಇದ್ದದ್ದರಲ್ಲಿ ತೃಪ್ತಿಪಡುವುದು, ಅರಿಹಂತ ಭಕ್ತಿ, ಪೂಜೆ, ಸ್ತುತಿ, ವಂದನ, ಪಂಚಪರಮೇಷ್ಠಿಗಳ ಜಪ, ಗುರುಭಕ್ತಿ, ಗುರುಸೇವೆ, ದಾನ, ಪರೋಪಕಾರ, ಎಲ್ಲದರಲ್ಲೂ ಮೈತ್ರೀ ಭಾವ, ಸರಳತೆ, ಸಭ್ಯತೆ, ಸದಾಚಾರ,

ಅಕಷಾಯ, ಮುಂತಾದ ಶುಭವೂ, ಪ್ರಶಸ್ತವೂ ಆದ ಕ್ರಿಯೆಗಳೂ ಭಾವಗಳೂ, ಶುಭ ಕ್ರಿಯೆಗಳಾಗಿವೆ.

ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿ, ತೃಪ್ತಿ, ಸಹನೆ, ಕೀರ್ತಿ, ಗೌರವ, ಸನ್ಮಾನ, ಪ್ರಶಂಶೆ, ಸೌಂದರ್ಯ, ಐಶ್ವರ್ಯ, ನಿರೋಗ, ಧನ-ಕನಕ, ಧಾನ್ಯ, ಮನೆ-ಮಠ, ಪುತ್ರ-ಕಳತ್ರ, ಮಾನವೀಯ ಗುಣ, ದೇವಗತಿ ಮುಂತಾದವು ಪುಣ್ಯದ ಫಲಗಳೇ ಆಗಿವೆ. ದೇವಗತಿ, ಭೋಗ, ತೀರ್ಥಂಕರತ್ವ, ಚಕ್ರವರ್ತಿ, ರಾಜ, ಶ್ರೀಮಂತ, ಸಮ್ಯಗ್ದೃಷ್ಟಿ, ಸತ್ಪರಿಣಾಮಿ, ಶ್ರಾವಕ, ಮುನಿ ಪದವಿ, ಸುಖದಿಂದ ಬಾಳುವುದು, ಪುಣ್ಯದ ಫಲಗಳೇ ಆಗಿವೆ.

**೬. ಪಾಪಕರ್ಮ ಎಂದರೇನು ?**

ಅಸಾತಾವೇದನೀಯ ಕರ್ಮವೇ ಪಾಪಪ್ರಕೃತಿ, ಅಶುಭವಾದ ಮನ, ವಚನ, ಕಾಯಗಳ ಕ್ರಿಯೆ ಎಂಬ ಅಶುಭಯೋಗದಿಂದ ಬಂಧಿಸಿಕೊಂಡ ಕರ್ಮವೇ ಪಾಪಕರ್ಮ.

**೭. ಅಶುಭ ಭಾವಗಳಾವುವು ?**

ಹಿಂಸೆ, ಸುಳ್ಳು, ಕಳ್ಳತನ, ದುರಾಚಾರ, ಭ್ರಷ್ಟಾಚಾರ, ಆರಂಭ ಪರಿಗ್ರಹ, ನಿರ್ದಯತೆ, ಕಠೋರತೆ, ಆರ್ತಧ್ಯಾನ, ರೌದ್ರಧ್ಯಾನ, ಜಿನದೇವ, ಗುರು, ಧರ್ಮ, ಶಾಸ್ತ್ರಗಳಿಗೆ ಅವಿನಯ, ಅಸಂಯಮ, ಅವ್ರತ, ದಾನ, ಧರ್ಮಗಳಿಗೆ ವಿಘ್ನ ಮಾಡುವುದು. ಕ್ರೋಧಾದಿ ಕಷಾಯ, ಪ್ರಮಾದಾದಿ ದೋಷ, ಅತ್ಯಾಚಾರ, ಅನಾಚಾರ, ಮಧು-ಮದ್ಯ-ಮಾಂಸ ಭಕ್ಷಣೆ, ಕೆಟ್ಟ ಮಾತು ನಿಂದೆ, ಚಾಡಿಹೇಳುವುದು, ಸಪ್ತವ್ಯಸನ, ಮಿಥ್ಯಾತ್ವ ಮುಂತಾದವು ಪಾಪಕಾರ್ಯಗಳೂ, ಅಶುಭ ಭಾವಗಳೂ ಆಗಿವೆ.

**೮. ಪಾಪಕರ್ಮದ ಫಲಗಳಾವುವು ?**

ನರಕ, ತಿರ್ಯಂಚ ಗತಿಗಳಲ್ಲಿ ಜನ್ಮ ತಾಳುವುದು. ಮಾನವನಾದರೂ ಸದಾ ದುಃಖ, ದಾರಿದ್ರ, ರೋಗ, ಅಜ್ಞಾನ, ಅಶಕ್ತಿ, ಅಪಮಾನ, ಕುರೂಪ, ಅತೃಪ್ತಿ, ಕೋಪ, ಗರ್ವ, ಮಾಯಾಚಾರ, ಲೋಭ, ದುರ್ಬುದ್ಧಿ, ನಿಂದನೆ, ಯಾಚನೆ, ಮುಂತಾದವು ಪಾಪಕರ್ಮದ ಫಲಗಳಾಗಿವೆ.

**೯. ಪುಣ್ಯ-ಪಾಪಗಳು ಹೇಯವೋ ಉಪಾಧೇಯವೋ ?**



ಪಾಪಕಾರ್ಯಗಳು, ಭಾವನೆಗಳು, ಅಶುಭಯೋಗ, ಅಶುಭಕರ್ಮ ಬಂಧ ಇವು ಯಾರಿಗೂ ಬೇಡ. ಇವು ಹೇಯವಾದವುಗಳು.

ಪುಣ್ಯಕಾರ್ಯಗಳೂ, ಭಾವನೆಗಳೂ, ಶುಭಯೋಗವೂ, ಶುಭಕರ್ಮ ಬಂಧವೂ ಈ ಕಾಲಕ್ಕೆ ಅದರಲ್ಲೂ ಗೃಹಸ್ಥರಿಗೆ ಉಪಾಧೇಯವೂ, ಅನಿವಾರ್ಯವೂ ಆಗಿದೆ. ಉತ್ತಮವಾದ ಪುಣ್ಯವು ಹೇಯವಲ್ಲ. ಗೃಹಸ್ಥರೂ, ಮುನಿಗಳೂ ಏಳನೇ ಗುಣಸ್ಥಾನವಾದ ಅಪ್ರಮತ್ತ ಅವಸ್ಥೆಯಲ್ಲಿ ಆತ್ಮಧ್ಯಾನದಲ್ಲಿ ತೊಡಗಿದ್ದಾಗ ಪುಣ್ಯವು ಹೇಯವಿದೆ. ಅಲ್ಲಿಯವರೆಗೆ ಪುಣ್ಯ ಬೇಕೇಬೇಕು. ಈ ಪಂಚಮ ಕಾಲದಲ್ಲಿ ಶುದ್ಧಧ್ಯಾನ, ಯೋಗ, ಶುದ್ಧಭಾವ, ಅಸಾಧ್ಯ. ಕೆಲವೇ ಮಹಾಮುನಿಗಳಿಗೆ ಮಾತ್ರ ಸಾಧ್ಯ. ಆದರೆ ಆತ್ಮಧ್ಯಾನ ಮಾಡದೇ ಇರುವಾಗ ಶುಭಧ್ಯಾನ, ಶುಭಯೋಗ, ಶುಭಭಾವದಲ್ಲಿರುವುದು ಉತ್ತಮ.

ಈ ಪಂಚಮಕಾಲದಲ್ಲಿ ಮೋಕ್ಷಹೊಂದುವಹಾಗಿಲ್ಲ. ಆದ್ದರಿಂದ ಆ ಮೋಕ್ಷ ಹೊಂದುವವರೆಗೂ ಪುಣ್ಯದ ಫಲದಿಂದ ಉತ್ತಮ ಗತಿಗಳಲ್ಲಿದ್ದು ಕಾಲಲಬ್ಧಿ ಒದಗಿ ಸಮ್ಯಕ್‌ರತ್ನತ್ರಯ ಲಾಭವಾದಾಗ ಪುಣ್ಯವನ್ನೂ ಕ್ಷಯಿಸಿ, ತ್ಯಜಿಸಿ, ಮುಕ್ತರಾಗಬಹುದು.

ಮುಕ್ತಿಹೊಂದಲು ಪಾಪ-ಪುಣ್ಯಗಳೇ ಆದಿಯಾಗಿ ಎಲ್ಲಾ ವಿಧದ ಕರ್ಮಗಳೂ ಹೇಯವಾಗಿವೆ. ಎಲ್ಲ ಕರ್ಮಗಳ ಕ್ಷಯವೇ ಮೋಕ್ಷ. ಪುಣ್ಯವು ಆತ್ಮನನ್ನು ಪವಿತ್ರಮಾಡುವುಮಕ್ಕೆ ನಿಮಿತ್ತಕಾರಣವಾಗಿದೆ. ಆದ್ದರಿಂದ ಪುಣ್ಯವು ಸರ್ವಥಾ ತ್ಯಾಗವಲ್ಲ. ಮುಕ್ತಿಹೊಂದುವವರೆಗೂ ಆತ್ಮನನ್ನು ದುರ್ಗತಿಗಳಿಂದ, ದುಃಖಗಳಿಂದ ರಕ್ಷಿಸಿಕೊಂಡು ಎಚ್ಚರಿಕೆಯಿಂದ ಬಾಳುವುದೇ ಮಹಾತ್ಮರ ಲಕ್ಷಣವಾಗಿದೆ. ಧಾರ್ಮಿಕ ಕ್ರಿಯೆಗಳೆಲ್ಲಾ ಪುಣ್ಯಾರ್ಜನೆಗೆ ಕಾರಣವಾಗಿವೆ. ಇದರಿಂದ ಸ್ವರ್ಗಾದಿ ಮೋಕ್ಷಕ್ಕೆ ಕಾರಣವಾಗುವುದು. ತೀರ್ಥಂಕರರೂ ಅರಹಂತರೂ, ಚಕ್ರವರ್ತಿಗಳೂ, ದೇವೇಂದ್ರರೂ ಮುಂತಾದವರುಗಳ ಪದವಿಗಳೆಲ್ಲ ಅತ್ಯಂತ ಉತ್ತಮವಾದ ಅಮಿತ ಪುಣ್ಯದ ಫಲವೇ ಆಗಿವೆ.

*ಪೊರಗೆ ತಪಂಗಳ್ ಆರರ ಸಹಾಯತೆ ಬೇಕು, ಶರೀರ ಮೋಹಮಂ*
*ತೊರೆಯಲೆಬೇಕು, ಭಾವನೆಯ ಶಾಸ್ತ್ರವಿಲೋಕಿತೆ ಬೇಕು, ನಿಚ್ಚಲುಂ*
*ನೆರೆವ ವಿರಕ್ತಿಬೇಕು, ರಿಪುಬಂಧುಗಳೊಳ್ ಸರಿಗಾಣಬೇಕು ಕಣ್ಣು,*
*ಅರಿದು ನಿಜಾತ್ಮನಂ ಚಲಿಸದೆ ಈಕ್ಷಿಸುವಂಗೆ ಅಪರಾಜಿತೇಶ್ವರಾ !*

# ೭೩ ಸಂಸಾರ-ಶರೀರ-ಭೋಗ

## ೧. ಸಂಸಾರವೆಂದರೇನು ?

ಸಂಸಾರವೆಂದರೆ ಭವಭವಗಳಲ್ಲಿ ಸುತ್ತಾಟವೆಂದರ್ಥ. ಈ ಜೀವನು ತಾನು ಹೊತ್ತ ಕರ್ಮದ ಫಲವನ್ನು ಅನುಭವಿಸುವುದಕ್ಕಾಗಿ ಒಂದಿಲ್ಲೊಂದು ಗತಿಗಳಲ್ಲಿ ಜನ್ಮತಾಳಿ, ಸುಖವನ್ನೋ, ದುಃಖವನ್ನೋ ಅನುಭವಿಸುತ್ತಾನೆ. ಇವು ತಾನು ಹಿಂದೆ ಗಳಿಸಿದ ಪುಣ್ಯ-ಪಾಪಕರ್ಮಗಳ ಫಲಗಳೇ ಆಗಿರುತ್ತವೆ. ಜೀವನಿಗೆ ಈ ರೀತಿಯ ಸುಖವಾಗಲೀ-ದುಃಖವಾಗಲೀ ಶಾಶ್ವತವಲ್ಲ. ತಾನು ಎಷ್ಟು ಗಳಿಸಿರುತ್ತಾನೋ ಅಷ್ಟನ್ನು ಅದು ಮುಗಿಯುವವರೆಗೂ ಅನುಭವಿಸುತ್ತಾನೆ. ಈ ರೀತಿಯಾಗಿ ಜೀವನು ದೇವಗತಿ, ಮನುಷ್ಯಗತಿ, ತಿರ್ಯಂಚಗತಿ ಮತ್ತು ನರಕಗತಿಗಳಲ್ಲಿ ಹುಟ್ಟಿ, ಸತ್ತು ಹಳೆಯ ಕರ್ಮದ ಫಲವನ್ನು ಅನುಭವಿಸುತ್ತಾ, ಹೊಸ ಕರ್ಮಬಂಧವನ್ನು ಮಾಡಿಕೊಳ್ಳುತ್ತಾ ಅನಾದಿಯಿಂದಲೂ ಸುತ್ತುತ್ತಿರುತ್ತಾನೆ. ಈ ರೀತಿಯ ಸುತ್ತಾಟಕ್ಕೆ ಸಂಸಾರವೆನ್ನುತ್ತಾರೆ. ತಾನು ಹೊತ್ತ ಕರ್ಮವು ಸಂಪೂರ್ಣವಾಗಿ ನಾಶವಾಗುವವರೆಗೂ ಈ ಸುತ್ತಾಟ ಇದ್ದೇ ಇರುತ್ತದೆ. ಈ ಸುತ್ತಾಟದಲ್ಲಿ ಸುಖ ಕಮ್ಮಿ ಇದ್ದು ದುಃಖವೇ ಹೆಚ್ಚಾಗಿರುತ್ತದೆ. ಆದ್ದರಿಂದ ಸಂಸಾರ ದುಃಖಮಯ ಎಂದಿದ್ದಾರೆ. ಇನ್ನೊಂದರ್ಥದಲ್ಲಿ ಈ ಜಗತ್ತನ್ನು-ಪ್ರಪಂಚವನ್ನು ಸಂಸಾರವೆನ್ನುವರು. ಹಾಗೆಯೇ ತನಗೆ ಗತಿ-ಗತಿಗಳಲ್ಲಿ ಒದಗುವ ಹೆಂಡತಿ-ಮಕ್ಕಳು, ಧನ-ಧಾನ್ಯ, ಮನೆ-ಜಮೀನು, ಸ್ನೇಹಿತ-ಪರಿವಾರ, ಬಂಧು-ಬಳಗ, ಶತ್ರು-ಮಿತ್ರ ಮುಂತಾದ ಸಂಬಂಧಕ್ಕೂ ಸಂಸಾರವೆನ್ನುತ್ತಾರೆ. ಇವುಗಳ ಸಂಯೋಗ-ವಿಯೋಗಗಳಲ್ಲಿ ದುಃಖವಾಗುತ್ತದೆ. ಏಕೆಂದರೆ ಇಷ್ಟದ ವಿಯೋಗವೆಂದರೆ ನಾಶವಾದಾಗ, ಅನಿಷ್ಟವಾದುದು ಬಂದು ಸೇರಿದಾಗ ದುಃಖವಾಗುತ್ತದೆ. ಅದಕ್ಕಾಗಿ ಈ ಸಂಸಾರದಲ್ಲಿ ಯಾವ ಗತಿಗಳಲ್ಲೂ ನಿಲುಗಡೆ ಇಲ್ಲ. ದುಃಖವೇ ದುಃಖವಿರುವುದರಿಂದ ಈ ಸಂಸಾರ ಬಂಧನದಿಂದ ಬಿಡುಗಡೆ ಹೊಂದಲು ಈ ಆತ್ಮನು ಬಯಸುತ್ತಾನೆ. ಜನ್ಮ-ಜರಾ-ಮರಣಗಳನ್ನು ಹೊಂದುತ್ತಾ ಜನ್ಮ-ಜನ್ಮಗಳಲ್ಲಿ ಸುತ್ತುವುದೇ ಸಂಸಾರ.

## ೨. ಶರೀರ ಎಂದರೇನು ?

ಗತಿಗಳಲ್ಲಿ ಈ ಜೀವವು ಒಂದಿಲ್ಲೊಂದು ಶರೀರವನ್ನು ಹೊಂದುತ್ತಲೇ ಇರುತ್ತದೆ. ಈ ಸಂಸಾರದಲ್ಲಿ ಜೀವನು ಶರೀರದೊಂದಿಗೆ ತನ್ನ ಕರ್ಮಫಲವನ್ನು



ಅನುಭವಿಸುತ್ತಾನೆ. ಈ ಶರೀರವಾದರೋ ಒಂದೊಂದು ಗತಿಯಲ್ಲಿ ಒಂದೊಂದು ರೀತಿಯಾಗಿರುತ್ತದೆ. ನಿಗೋದವೆಂಬ ಸೂಕ್ಷ್ಮ ಜೀವಿಯಿಂದ ಹಿಡಿದು ತಿಮಿಂಗಿಲ, ಆನೆ, ಭೋಗಭೂಮಿಜರ ಶರೀರದ ಗಾತ್ರದವರೆಗೂ ಜೀವವು ಶರೀರವನ್ನು ಹೊರುತ್ತದೆ. ನಿಗೋದದಲ್ಲಿ ಸೂಕ್ಷ್ಮ ಶರೀರದಲ್ಲೇ ಕೇವಲ ಹುಟ್ಟಿ ಸಾಯುವುದೇ ಕಾರ್ಯವಾಗಿ ಈ ಜೀವನು ದುಃಖಪಡುತ್ತದೆ. ನರಕಗತಿಯಲ್ಲಿ ವೈಕ್ರಯಿಕ ಶರೀರವಿದ್ದರೂ ಪಾಪಕರ್ಮಫಲದಿಂದ ಅನೇಕ ಅನೇಕ ದುಃಖವನ್ನು ಅನುಭವಿಸುತ್ತದೆ. ತಿರ್ಯಂಚಗತಿಯಲ್ಲಿ ಭಾರ ಹೊರುವುದು, ಛೇದನ, ಭೇದನ, ಹಸಿವು, ರೋಗ ಮುಂತಾದವುಗಳಿಂದ ದುಃಖವನ್ನನುಭವಿಸುತ್ತದೆ. ಮನುಷ್ಯಗತಿಯಲ್ಲಿ ರೋಗ, ದಾರಿದ್ರ್ಯ, ಕುರೂಪ, ಅಂಗಹೀನತೆ, ಹಸಿವು ನೀರಡಿಕೆ ಮುಂತಾಗಿ ಹಲವು ರೀತಿಯಾಗಿ ದುಃಖವನ್ನು ಅನುಭವಿಸುತ್ತದೆ. ದೇವಗತಿಯಲ್ಲಿ ವೈಕ್ರಯಿಕ ದೇಹವಿದ್ದರೂ ಅಲ್ಲಿ ಮಾನಸಿಕ ಯಾತನೆಯಿಂದ ದುಃಖವನ್ನು ಅಭವಿಸಬೇಕಾಗುತ್ತದೆ. ಈ ಶರೀರ ಸದಾ ಅಶುಚಿಯಾಗಿ, ರೋಗಮಯವೂ ಆಗಿದೆ. ಹುಟ್ಟುವಾಗ ಶಿಶುತನದಲ್ಲಿ, ದುಡಿಮೆ ಮಾಡುವಾಗ, ಮುದಿತನದಲ್ಲಿ, ಮರಣ ಹೊಂದುವಾಗ ಅಸಹ್ಯವಾದ ವೇದನೆಯನ್ನು ಅನುಭವಿಸುತ್ತದೆ. ಆದರೂ ಈ ಶರೀರ ಮಾಧ್ಯಮದಿಂದಲೇ ಧರ್ಮಸಾಧನೆ ಮಾಡಿ, ಆತ್ಮ ಕಲ್ಯಾಣ ಮಾಡಿಕೊಳ್ಳಲು ಮಾನವ ಜನ್ಮ ಉತ್ತಮವಾದುದರಿಂದ ಇದನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿದೆ. **''ಶರೀರಮಾದ್ಯಂ ಖಲುಧರ್ಮ ಸಾಧನಂ''** ಎಂದೂ **''ಮನಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ''** ಎಂದಿದ್ದಾರೆ.

## ೩. ಭೋಗವೆಂದರೇನು ?

ಭೋಗವೆಂದರೆ ತಾನು ಅನುಭವಿಸುವ ಸುಖದ ವಿಧಗಳು. ಈ ಸಂಸಾರದಲ್ಲಿ ಸುಖವೆಂಬುದು ಪರಪದಾರ್ಥಗಳಿಂದಲೇ ಆಗುತ್ತದೆ. ಈ ಸುಖವಾದರೂ ಇಂದ್ರಿಯಾಧೀನ-ಶರೀರಾಧೀನಗಳಾಗಿವೆ. ಅವು ಹಲವು ರೀತಿಯ ಭೋಗ ಸಾಮಗ್ರಿಗಳಿಂದ ದೊರೆಯುತ್ತವೆ. ಈ ಸಾಮಗ್ರಿಗಳಾದರೂ ತಾನು ಹಿಂದೆ ಮಾಡಿದ ಕರ್ಮಕ್ಕೆ ಅನುಸಾರವಾಗಿ ದೊರಕುತ್ತವೆ. ಈ ಭೋಗಗಳ ಅನುಭವವು ವಿವಿಧ ರೀತಿಯದ್ದಾಗಿರುತ್ತದೆ. ಇವುಗಳನ್ನು ಸದಾ ಅನುಭವಿಸಲು ಸಾಧ್ಯವಿಲ್ಲ. ಕೆಲವು ಮಂದಿ ಚಕ್ರವರ್ತಿ, ದೇವೇಂದ್ರ, ರಾಜ, ಮಹಾರಾಜ, ಮಂತ್ರಿ, ಶ್ರೀಮಂತರುಗಳಿಗೆ ಹಲವು ರೀತಿಯ ಭೋಗ ಸಾಮಗ್ರಿಗಳು ಒದಗಿದ್ದರೂ ಅವು ಅನಿತ್ಯ, ಅಶಾಶ್ವತ ಎಂದು ತಿಳಿದು ಅವರೂ ಇದನ್ನು ಧಿಕ್ಕರಿಸಿ

ತೊರೆದುಬಿಡುತ್ತಾರೆ. ಆದರೂ ಇವು ಭವಭವದಲ್ಲೂ ಜೊತೆಗೆ ಬರುವಂತಹುಗಳಲ್ಲ. ಭೋಗದ ಮಧ್ಯದಲ್ಲಿದ್ದು ಈ ಜೀವನು ಇವಕ್ಕೆ ಮರುಳಾಗಿ ಮೋಹದಿಂದ, ರಾಗ-ದ್ವೇಷದಿಂದ ತನ್ನನ್ನು ತಾನು ಮರೆತಿದ್ದಾನೆ. ಈ ಭೋಗಗಳು ಅಮಲು ಬರಿಸುವಂತಹವುಗಳು ಆದ್ದರಿಂದ ಭೋಗಕ್ಕೆ ಮರುಳಾಗಿ ಜೀವನು ಹಾಳಾಗುತ್ತಾ ಬಂದಿದ್ದಾನೆ. ಭೋಗವಸ್ತುಗಳಲ್ಲಿ ಎರಡು ವಿಧಗಳಿವೆ. ಒಂದೇ ವಸ್ತುವನ್ನು ಬಹುಕಾಲ-ಬಾರಿ-ಬಾರಿಗೂ ಅನುಭವಿಸಲು ಬರುವ ವಸ್ತುಗಳಾದ ಮನೆ-ಪತ್ನಿ-ವಸ್ತ್ರ, ಆಭರಣ, ಮುಂತಾದವುಗಳು ಉಪಭೋಗ ವಸ್ತುಗಳು. ಕೇವಲ ಒಮ್ಮೆ ಮಾತ್ರ ಭೋಗಿಸಲು ಬರುವಂತಹ ವಸ್ತುಗಳಾದ ಊಟ, ತಿಂಡಿ, ಹೂ, ಸುಗಂಧದ್ರವ್ಯಗಳು, ಮುಂತಾದವುಗಳಿಗೆ ಭೋಗ ವಸ್ತುಗಳು ಎನುತ್ತಾರೆ.

ಹೀಗೆ ಈ ಸಂಸಾರ-ಶರೀರ-ಭೋಗಗಳು ಆಧ್ಯಾತ್ಮ ದೃಷ್ಟಿಯಿಂದ ಇವು ಬೇಕೇ ಆಗಿದ್ದರೂ ಇವನ್ನು ಹಿತ, ಮಿತವಾಗಿ ಉಪಯೋಗಿಸಬೇಕು. ಇವು ಅಲ್ಪ ಸುಖವನ್ನೂ ನಿರಂತರ ದುಃಖವನ್ನೂ ನೀಡುವಂತಹವುಗಳಾಗಿವೆ. ಇವುಗಳಿಗೆ ಮಾರುಹೋಗಿ ತನ್ನ ನಿಜಸ್ವರೂಪವನ್ನು-ತನ್ನ ಮಾನವೀಯತೆಯನ್ನು, ತನ್ನ ಆತ್ಮಕಲ್ಯಾಣವನ್ನು ಮರೆಯಬಾರದು.

ಹಿಂದೆ ಆಗಿಹೋದ ತೀರ್ಥಂಕರರೂ-ಕೇವಲಿಗಳೂ, ಮುಕ್ತಿಗೆ ಹೋದವರೆಲ್ಲಾ ಈ ಸಂಸಾರ, ಶರೀರ, ಭೋಗಗಳಲ್ಲಿ ವೈರಾಗ್ಯ ಹೊಂದಿ, ಇವನ್ನು ತ್ಯಜಿಸಿ, ದೀಕ್ಷಾಧಾರಿಗಳು ಶರೀರದ ವ್ಯಾಮೋಹವನ್ನು ಬಿಟ್ಟು, ಸುಜ್ಞಾನದಿಂದ ಧ್ಯಾನ, ತಪಗಳನ್ನು ಮಾಡಿ, ಕರ್ಮಕ್ಷಯ ಮಾಡಿ ಮುಕ್ತರಾಗಿದ್ದಾರೆ.

**೪. ಸಂಸಾರ-ಶರೀರ-ಭೋಗಗಳ ಅಶಾಶ್ವತತೆಯನ್ನು ತಿಳಿಸುವ ನಿದರ್ಶನ ಯಾವುದು ?**

ಸಂಸಾರದ ವ್ಯಾಮೋಹ, ಶರೀರದ ಅಸ್ಥಿರತೆ, ಮರಣ ಭಯ ಕಾಡುವ ಕರ್ಮದ ಕಾಟ, ಭೋಗದ ಅಲ್ಪತೃಪ್ತಿಯ ಆಸೆಗಳಿಂದ ತತ್ತರಿಸುವ ಓರ್ವ ವ್ಯಕ್ತಿಯ ನಿದರ್ಶನವನ್ನು ತಿಳಿಸುವ ಒಂದು ಪ್ರಸಂಗ ಹೀಗಿದೆ :-

ಅನಂತ ಜೀವಿಗಳಿಂದ ತುಂಬಿರುವ ಸಂಸಾರದಂತೆ ಭಯಂಕರವಾದ ಅರಣ್ಯದಲ್ಲಿ ಓರ್ವ ವ್ಯಕ್ತಿಯು ಎಲ್ಲಿಗೋ ಹೋಗುತ್ತಿದ್ದನು. ಅವನು ದಾರಿತಪ್ಪಿ ಅಲೆಯುತ್ತಿದ್ದನು. ಅಲ್ಲಿ ಅವನ ಎದುರಿಗೆ ಒಂದು ಮದಿಸಿದ ಆನೆಯು ಭಯಂಕರವಾಗಿ ಘೀಳಿಡುತ್ತ ಸೊಂಡಿಲನ್ನು ಮೇಲೆತ್ತಿಕೊಂಡು ಬರುತ್ತಿತ್ತು. ಅದನ್ನು ನೋಡಿದ ಆ ವ್ಯಕ್ತಿ ಭಯಭೀತನಾಗಿ ಓಡಲಾರಂಭಿಸಿದನು. ಆನೆಯು




ಸಂಸಾರ ವೃಕ್ಷ

ಅವನನ್ನು ಹಿಂಬಾಲಿಸಿತು. ದಾರಿಯಲ್ಲಿ ಒಂದು ದೊಡ್ಡ ಹಾಳು ಬಾವಿಯಿತ್ತು. ದಿಕ್ಕುತಪ್ಪಿ ಓಡುತ್ತಿದ್ದ ಆ ವ್ಯಕ್ತಿ ಇನ್ನೇನು ಬಾವಿಗೆ ಬೀಳುತ್ತಿರುವಷ್ಟರಲ್ಲಿ ಆ ಬಾವಿಯ ಪಕ್ಕದಲ್ಲಿ ಬೆಳೆದಿದ್ದ ಒಂದು ದೊಡ್ಡ ಆಲದ ಮರದ ಬಿಳಿಲುಗಳು ನೇತಾಡುತ್ತಿದುದನ್ನು ನೋಡಿ ಅವುಗಳನ್ನು ಹಿಡಿದುಕೊಂಡನು. ಆ ಬಿಳಿಲು ಆ ಬಾವಿಯ ಮಧ್ಯದಲ್ಲಿ ಉಯ್ಯಾಲೆಯ ಹಗ್ಗದಂತೆ ಇತ್ತು. ಅದನ್ನು ಹಿಡಿದ ಅವನು ಆ ಬಾವಿಯ ಒಳಗೆ ನೋಡಿದನು. ಅದರಲ್ಲಿ ಒಂದು ದೊಡ್ಡ ಹೆಬ್ಬಾವು ತನ್ನ ಬಾಯನ್ನು ಮೇಲೆ ಮಾಡಿಕೊಂಡಿತ್ತು. ಅದರ ಸುತ್ತಾ ನಾಲ್ಕು ಕೃಷ್ಣ ಸರ್ಪಗಳು ಹೆಡೆ ಎತ್ತಿದ್ದವು. ಅದನ್ನು ನೋಡಿದ ಆ ವ್ಯಕ್ತಿ ಮತ್ತಷ್ಟು ಭಯ ಭೀತನಾದನು. ಅಲ್ಲಿಂದ ಆ ಬಾವಿಯ ದಡದ ಮೇಲೆ ಬರಲು ಆಗಲಿಲ್ಲ. ಆ ಬಾವಿಯ ಸುತ್ತಳತೆ ಬಹಳ ಹರವಾಗಿತ್ತು. ಯಾವ ರೀತಿಯಲ್ಲಿ ಪ್ರಯತ್ನಿಸಿ ದರೂ ದಡ ಸಿಗುತ್ತಿರಲಿಲ್ಲ. ಆಮೇಲೆ ಆ ಮರದ ಮೇಲೆ ನೋಡಿದನು. ಕೆಲವು ಇಲಿಗಳು ಬಂದು ತಾನು ಹಿಡಿದಿದ್ದ ಬಿಳಿಲನ್ನು ಕಡಿಯುತ್ತಿದ್ದವು. ಈ ಮಧ್ಯದಲ್ಲಿ ಅವನನ್ನು ಓಡಿಸಿಕೊಂಡು ಬಂದ ಆನೆಯು ಕೋಪದಿಂದ ಆ ಮರದ ಕಾಂಡವನ್ನು ಹಿಡಿದು ಅಲುಗಾಡಿಸಲಾರಂಭಿಸಿತು. ಈ ಅಲುಗಾಟದಿಂದ ಅದೇ ಮರದಲ್ಲಿದ್ದ ಜೇನು ಗೂಡು ಕಲಕಿ ಅದರಲ್ಲಿದ್ದ ಜೇನ್ನೊಣಗಳು ಮೇಲೆದ್ದವು. ಆ ಜೇನು ಗೂಡಿನಿಂದ ಜೇನು ತುಪ್ಪದ ಕೆಲವೆರಡು ಹನಿಗಳು ಕೆಳಗೆ ಬೀಳುತ್ತಿದ್ದವು. ಅವು ಇವನು ಮೇಲೆ ನೋಡುತ್ತಿದ್ದಾಗ ಅವನ ಮುಖದ ಮೇಲೆ ಬೀಳುತ್ತಿರುವುದನ್ನು ಕಂಡ ಆ ವ್ಯಕ್ತಿ ನಾಲಿಗೆಯನ್ನು ನೀಡಿ ಆ ಜೇನಿನ ಹನಿಗಳನ್ನು ಚಪ್ಪರಿಸತೊಡಗಿದನು. ಅದರ ಸಿಹಿಯ ಆಸ್ವಾದದಲ್ಲಿ ತನಗೆ ಬಂದಿರುವ ಆಪತ್ತನ್ನು ಮರೆತೇಬಿಟ್ಟನು. ಮೇಲೆದ್ದ ನೊಣಗಳು ಹಾರಿಬಂದು ಆ ವ್ಯಕ್ತಿಯನ್ನೇ ಮುತ್ತಿಕೊಂಡು ಕಚ್ಚಲಾರಂಭಿಸಿದವು. ನೋವಾಗುತ್ತಿದ್ದರೂ ಅವನ ಗಮನವೆಲ್ಲ ಅವನ ನಾಲಿಗೆಯ ಮೇಲೆ ಬೀಳುತ್ತಿರುವ ಜೇನು ಹನಿಗಳ ಮೇಲೆ ಮಾತ್ರವಿತ್ತು.

ಈ ಮಧ್ಯದಲ್ಲಿ ಅತ್ತಕಡೆ ಓರ್ವ ದೇವನು ತನ್ನ ವಿಮಾನದಲ್ಲಿ ತನ್ನ ಪತ್ನಿಯ ಸಹಿತ ಸಮ್ಮೇದಗಿರಿ ಕ್ಷೇತ್ರ ದರ್ಶನಾರ್ಥವಾಗಿ ಹೋಗುತ್ತಿದ್ದನು. ಅವನು ಈ ವ್ಯಕ್ತಿಯ ಕಡೆ ನೋಡಿ ಅವನ ಪರಿಸ್ಥಿತಿಯನ್ನು ಕಂಡ ಆ ದೇವನು ಕರುಣೆಯಿಂದ ''ಅಯ್ಯಾ ! ನೀನು ಮಹಾ ಕಷ್ಟಕ್ಕೆ -ಅಪಾಯಕ್ಕೆ ಸಿಕ್ಕಿಕೊಂಡಿದ್ದೀ ಯೇ ಬಾ ನಿನ್ನನ್ನು ಈ ನನ್ನ ವಿಮಾನದಲ್ಲಿ ಕೂರಿಸಿಕೊಂಡು ಹೋಗುತ್ತೇನೆ ಎಂದು ಕರೆದನು. ಆದರೆ ಆ ಮೂರ್ಖ ವ್ಯಕ್ತಿಯು ಸ್ವಲ್ಪ ತಾಳು ಇನ್ನೊಂದು

ಹನಿ ಜೇನು ಸವಿದು ಬರುತ್ತೇನೆ'' ಎಂದು ಹೇಳುತ್ತಾ ಬಹುಕಾಲ ತಳ್ಳಿದನು. ಆ ದೇವನು ಬೇಸತ್ತು ಕಾಯಲಾರದೆ ಹೊರಟು ಹೋದನು. ಕೆಲ ಹೊತ್ತಿನಲ್ಲಿಯೇ ಆತನು ಹಿಡಿದಿದ್ದ ಬಿಳಿಲು ಕತ್ತರಿಸಿಹೋಯಿತು. ಆತನು ಬಾವಿಯಲ್ಲಿ ಬಿದ್ದು ಹೆಬ್ಬಾವಿನ ಬಾಯಿಗೆ ತುತ್ತಾದನು.

**೫. ಈ ನಿದರ್ಶನದಿಂದಾಗುವ ಬೋಧೆಯೇನು ?**

ಸಂಸಾರವೆಂಬುದು ಒಂದು ಅರಣ್ಯವಿದ್ದಂತೆ. ಅದರಲ್ಲಿ ಅಲೆಯುವ ಪಥಿಕನೇ ಜೀವಿ. ಕರ್ಮವೆಂಬುದೇ ಭಯಂಕರವಾದ ಆನೆ, ಅದು ಜೀವಿಯ ಬೆನ್ನು ಹತ್ತುತ್ತಿದೆ. ದುರ್ಗತಿಯೆಂಬುದೇ ಬಾವಿಯು, ಆಯುಷ್ಯವೆಂಬುದೇ ಬಿಳಿಲು, ಅದನ್ನು ಕಡಿಯುತ್ತಿರುವುದು ಕೃಷ್ಣ ಪಕ್ಷ, ಶುಕ್ಲ ಪಕ್ಷವೆಂಬ ಇಲಿಗಳಿದ್ದಂತೆ, ಇವು ಕಡಿಯುತ್ತಿರುವುದು ಆಯುಷ್ಯ ಕಳೆಯುತ್ತಿರುವುದರ ಸಂಕೇತ, ಆ ಇಲಿಗಳು ಸ್ವಲ್ಪ ಸ್ವಲ್ಪವೇ ಕಡಿಯುತ್ತಿರುವುದು ಹೆಬ್ಬಾವಿನ ಇರುವಿಕೆಯು ಯಮನ ಕರೆಯಂತೆ, ಕ್ರೋಧ, ಮಾನ, ಮಾಯೆ, ಲೋಭವೆಂಬ ಕಷಾಯಗಳೇ ನಾಲ್ಕು ಕೃಷ್ಣ ಸರ್ಪಗಳು. ಬಾಯಿಗೆ ಬೀಳುತ್ತಿರುವ ಒಂದೊಂದು ಹನಿಯ ಸಿಹಿ ಈ ಸಂಸಾರದಲ್ಲಿ ಸಿಗುವ ಅಲ್ಪ ಸುಖ. ಇದಕ್ಕೆ ಮಾರು ಹೋಗಿ, ಮರುಳಾಗಿ, ತನ್ನ ಆಪತ್ತನ್ನೂ ಮರೆಸುವ ವ್ಯಾಮೋಹ. ಸಂಸಾರಾರಣ್ಯದಲ್ಲಿ ಗತಿ ಎಂಬುದೇ ಮರ-ಅದರ ಶಾಖೋಪಶಾಖೆಗಳೇ ಕರ್ಮ ವೈಚಿತ್ರ್ಯ-ಅದರಲ್ಲಿ ಬಂದೊದಗುವ ರೋಗ, ಕಷ್ಟ, ಮುಪ್ಪು, ದಾರಿದ್ರ್ಯ, ದೀನ, ಹೀನ, ಸ್ಥಿತಿ, ಮುಂತಾದವುಗಳ ವೇದನೆಯೇ ಆ ಜೇನು ಹುಳುಗಳು ಕಚ್ಚುತ್ತಿರುವುದು. ಹೀಗಿದ್ದರೂ ಯಾವುದೋ ಜನ್ಮದ ಪುಣ್ಯದಿಂದ ಬಂದೊದಗುವ ಅವಕಾಶವೇ ಆ ದೇವತೆಗಳು ಬಂದು ಕರೆಯುವುದು. ಅಂದರೆ ಈ ಜೀವನದಲ್ಲಿ ಹಲವಾರು ಸಾರಿ ಧರ್ಮಪ್ರಭಾವನೆಗಳು, ದಾನ, ಪೂಜೆ, ಗುರೂಪದೇಶಗಳ ಅವಕಾಶಗಳು ಒದಗಿ ಈ ಸಂಸಾರ ದುಃಖದಿಂದ ಪಾರಾಗುವ ಸಂದರ್ಭಗಳು ಒದಗುತ್ತವೆ. ಆದರೆ ಮೋಹಿಯಾದ ಜೀವನು ಈ ಸಂಸಾರ, ಶರೀರ, ಭೋಗಗಳ ಅಮಲಿನಲ್ಲಿ ತನ್ನನ್ನೂ, ತನ್ನ ಆಪತ್ತನ್ನೂ ಮರೆತು ತನಗೆ ದೊರೆತ ಅವಕಾಶ, ಲಬ್ಧಿಗಳನ್ನು ಧಿಕ್ಕರಿಸಿ ಕಳೆದುಕೊಳ್ಳುತ್ತಾನೆ. ಕೊನೆಗೆ ದುರ್ಮರಣವನ್ನು ಹೊಂದಿ ನರಕಾದಿ ದುರ್ಗತಿಗೆ ಬೀಳುತ್ತಾನೆ. ಹೀಗೆ ಈ ಸಂಸಾರದ ಗತಿ ಚಕ್ರದಲ್ಲಿ ಸಿಕ್ಕಿ ಸುತ್ತುತ್ತಿರುತ್ತಾನೆ ಈ ಸಂಸಾರೀ ಜೀವನು.

ಸಾರಾಂಶವೇನೆಂದರೆ-ಈ ಸಂಸಾರದಲ್ಲಿ ಮುಳುಗಿಹೋಗದೆ ಅವಕಾಶ ಸಿಕ್ಕಿದಾಗ ಜಾಗೃತನಾಗಿ ತನ್ನಾತ್ಮನ ಕಲ್ಯಾಣದತ್ತ ಸಾಗಬೇಕು.

---



## ೭೪ ಜಿನವಾಣಿ

**೧. ಜಿನವಾಣಿ ಎಂದರೇನು ?**

ಜಿನೇಂದ್ರ ಭಗವಾನರೂ, ಕೇವಲಿಗಳೂ, ಶ್ರುತಕೇವಲಿಗಳೂ, ಆಚಾರ್ಯರೂ ಹೇಳಿರುವ ಉಪದೇಶವೇ ಜಿನವಾಣಿ. ಇದು ಅನಾದಿ ಕಾಲದಿಂದಲೂ ಸಾಗಿ ಬಂದಿದೆ. ಆಯಾಯ ಕಾಲದಲ್ಲಿ ಆಗಿಹೋದ ತೀರ್ಥಂಕರಾದಿಗಳು ಹೇಳಿರುವ ವಿಷಯವನ್ನು ಗಣಧರಾದಿ ಆಚಾರ್ಯರು ಸಂಗ್ರಹಿಸಿರುವ ಶಾಸ್ತ್ರಗಳೇ ಜಿನವಾಣಿ.

**೨. ಜಿನವಾಣಿಯ ವಿಸ್ತಾರವೇನು ?**

ಜಿನವಾಣಿಯು ಬಹು ವಿಸ್ತಾರವಾದುದು. ಬಹುಕಾಲ ಅರಿಹಂತರು ಹೇಳಿದುದನ್ನೆಲ್ಲಾ ಗಣಧರರು ಸಂಗ್ರಹಿಸಲಾಗಲಿಲ್ಲ. ಅವರು ಸಂಗ್ರಸಿದ್ದೆಲ್ಲಾ ಗ್ರಂಥರೂಪದಲ್ಲಿ ಬರೆಯಲಾಗಲಿಲ್ಲ. ಎಷ್ಟು ಬರೆದಿದ್ದ ಗ್ರಂಥಗಳಿದ್ದವೋ ಅವೆಲ್ಲಾ ಈಗ ಉಳಿದಿಲ್ಲ. ಈಗೆಷ್ಟು ಉಳಿದಿವೆಯೋ ಅವೆಲ್ಲಾ ಪ್ರಕಟವಾಗಿಲ್ಲ. ಈಗ ಪ್ರಕಟವಾಗಿರುವ ಗ್ರಂಥಗಳೆಷ್ಟಿವೆಯೋ ಅವನ್ನೆಲ್ಲಾ ನೋಡಲು, ಓದಲು ಯಾರಿಗೂ ಆಗಿಲ್ಲ. ಅಂದಮೇಲೆ ಜಿನವಾಣಿಯ ವೈಶಾಲ್ಯ ಎಷ್ಟು ದೊಡ್ಡದೆಂದು ಊಹಿಸಬಹುದು. ಜಿನವಾಣಿ ದೊಡ್ಡ ಸಾಗರ, ಶ್ರುತಸ್ಕಂಧವಿದ್ದಂತೆ.

**೩. ಜಿನವಾಣಿಗೆ ಇರುವ ಬೇರೆ ಬೇರೆ ಹೆಸರುಗಳೇನು ?**

ಜಿನವಾಣಿ, ಭಾರತಿ, ಶಾರದೆ, ಸರಸ್ವತಿ, ಗೀರ್ವಾಣಿ, ಶ್ರುತ, ಶಾಸ್ತ್ರ, ಶ್ರುತದೇವಿ, ಆಗಮ, ಅಂಗ, ಪೂರ್ವಿ, ದ್ವಾದಶಾಂಗ, ಅನುಯೋಗ, ಜೈನವೇದ, ಜಿನಾಗಮ ಮುಂತಾದ ಹಲವು ಹೆಸರುಗಳಿವೆ.

**೪. ಶಾಸ್ತ್ರ ಜ್ಞಾನವು ಮೊದಲು ಹೇಗಿತ್ತು ?**

ತೀರ್ಥಂಕರರು ಹೇಳಿದ ವಿಷಯವನ್ನು ಗಣಧರರೂ, ಮತ್ತೆ ಅವರ ಶಿಷ್ಯರೂ ಜ್ಞಾಪಕದಲ್ಲಿ ಇಟ್ಟುಕೊಂಡು ಸಂಗ್ರಹಿಸುತ್ತಿದ್ದರು. ಹೀಗೆ ಅವರ ಶಿಷ್ಯರೂ ಒಬ್ಬರಿಗೊಬ್ಬರು ಬಾಯಿಂದ ಬಾಯಿಗೆ ಹೇಳಿಕೊಂಡು ಬರುತ್ತಿದ್ದರು. ಹೀಗೆ ಮಹಾವೀರ ಸ್ವಾಮಿಯ ನಂತರ ಗೌತಮಗಣಧರರೂ, ಅವರ ನಂತರ ಜಂಬೂಸ್ವಾಮಿಗಳೂ ಎಂಬ ಕೇವಲಿಗಳು ಹೇಳಿಕೊಂಡು ಬಂದರು. ಈ ಪರಂಪರೆಯಲ್ಲಿ ಜಿನವಾಣಿಯು 12 ಅಂಗ ಹಾಗೂ ನಾಲ್ಕು ಪೂರ್ವಿಗಳಾಗಿ ವಿಂಗಡಿಸಲ್ಪಟ್ಟಿತು. ಈ ಎಲ್ಲ ವಿಷಯಗಳನ್ನು ಪರಂಪರಾಗತವಾಗಿ ಉಳಿಸಿ

ಕೊಂಡು ಬಂದರು. ಅವರಿಗೆ ಶ್ರುತಕೇವಲಿಗಳೆಂದರು. ಇವರಲ್ಲಿ ವಿಷ್ಣು, ನಂದಿಮಿತ್ರ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹುಗಳು ಮುಖ್ಯರು. ಇವರ ನಂತರ ಲೋಹಾಚಾರ್ಯರು, ಅವರ ಕಾಲದ ಧರಸೇನಾಚಾರ್ಯರು, ಗುಣಧರಾಚಾರ್ಯರು, ಪುಷ್ಪದಂತ ಭೂತಬಲಿ ಆಚಾರ್ಯರುಗಳು ಪ್ರಮುಖರು.

ಇವರಲ್ಲಿ ಗುರು ಪರಂಪರೆಯಿಂದ ಕೇಳಿ ತಿಳಿದ ಜಿನವಾಣಿಯನ್ನು ಗುಣ ಧರಾಚಾರ್ಯರೂ, ಪುಷ್ಪದಂತ-ಭೂತಬಲಿ ಆಚಾರ್ಯರುಗಳು ಗ್ರಂಥ ರೂಪದಲ್ಲಿ ಬರೆದರು. ಇವೇ ಧವಲಾ, ಜಯಧವಲಾ, ಮಹಾಧವಲಾ ಎಂದು ಪ್ರಸಿದ್ಧವಾಗಿದೆ.

**೫. ಜಿನವಾಣಿಯಲ್ಲಿ ವಿಭಜಿತವಾಗಿರುವ ಅಂಗಗಳೆಷ್ಟು ?**

ಜಿನವಾಣಿಯು ಅಂಗಪ್ರವಿಷ್ಟ ಮತ್ತು ಅಂಗಬಾಹ್ಯ ಎಂದು ಎರಡು ಮುಖ್ಯ ಭೇದಗಳಾಗಿದೆ. ಅಂಗಪ್ರವಿಷ್ಟದಲ್ಲಿ 12 ಅಂಗಗಳಿವೆ. ಅಂಗಬಾಹ್ಯದಲ್ಲಿ 14 ವಿಭಾಗಗಳಿವೆ.

**೬. ಅಂಗಗಳೆಷ್ಟು ಅವುಗಳಾವುವು ?**

ಜಿನವಾಣಿಯು 12 ಅಂಗಗಳಲ್ಲಿ ಸಂಗ್ರಹವಾಗಿದೆ. ಇದೇ ಅಂಗಪ್ರವಿಷ್ಟ.

1) **ಆಚಾರಾಂಗ :-** ಇದರಲ್ಲಿ 18 ಸಾವಿರ ಪದಗಳಿವೆ. ಶ್ರಾವಕರ, ಮುನಿಗಳ, ಆಚಾರ್ಯರ ವಿಚಾರಗಳ ವರ್ಣನೆ ಇದೆ.

2) **ಸೂತ್ರಕೃತಾಂಗ :-** ಇದರಲ್ಲಿ 36 ಸಾವಿರ ಪದಗಳಿವೆ. ಜೈನರ ಮತ್ತು ಅನ್ಯ ಧರ್ಮೀಯರ ವಿವರವಿದೆ. ವ್ಯವಹಾರದ ಧರ್ಮ ಕ್ರಿಯೆಗಳಿವೆ. ಜ್ಞಾನ, ವಿನಯ, ಪ್ರಜ್ಞಾಪನಾ, ಕಲ್ಪ್ಯಾಕಲ್ಪ್ಯ ಛೇದೋಪಸ್ಥಾನಗಳ ನಿರೂಪಣೆ ಇದೆ.

3) **ಸ್ಥಾನಾಂಗ :-** ಇದರಲ್ಲಿ 42 ಸಾವಿರ ಪದಗಳಿವೆ. ಜೀವದ್ರವ್ಯದ, ಅಜೀವದ್ರವ್ಯದ, ಕರ್ಮದ, ಜ್ಞಾನದ ವಿಷಯಗಳಿವೆ.

4) **ಸಮವಾಯಾಂಗ :-** ಇದರಲ್ಲಿ ಒಂದು ಲಕ್ಷ ಅರವತ್ತ ನಾಲ್ಕು (100064) ಪದಗಳಿವೆ. ದ್ರವ್ಯ, ಕ್ಷೇತ್ರ, ಕಾಲ, ಭಾವಗಳ ಮತ್ತು ಜೀವಾದಿ ಪದಾರ್ಥಗಳ ವರ್ಣನೆ ಇದೆ.

5) **ವ್ಯಾಖ್ಯಾಪ್ರಜ್ಞಪ್ತಿ ಅಂಗ :-** ಇದರಲ್ಲಿ 2 ಲಕ್ಷ 78 ಸಾವಿರ ಪದಗಳು



ಶ್ರುತಮಪಿ ಜಿನವರವಿಹಿತಂ ಗಣಧರರಚಿತಂ ದ್ವ್ಯನೇಕ ಭೇದಸ್ಥಂ ಅಂಗಾಂಗಬಾಹ್ಯ ಭಾವಿತಮನಂತವಿಷಯಂ ನಮಸ್ಯಾಮಿ
ಅರ್ಹದ್ವಕ್ತ್ರ ಪ್ರಸೂತಂ ಗಣಧರರಚಿತಂ ದ್ವಾದಶಾಂಗಂ ವಿಶಾಲಂ। ಚಿತ್ರಂ ಬಹ್ವರ್ಥಯುಕ್ತಂ ಮುನಿಗಣವೃಷಭೈರ್ಧಾರಿತಂ ಬುದ್ಧಿಮದ್ಭಿಃ।
ಮೋಕ್ಷಾಗ್ರದ್ವಾರ ಭೂತಂ ವ್ರತಚರಣಫಲಂ ಜ್ಞೇಯಭಾವಪ್ರದೀಪಂ। ಭಕ್ತ್ಯಾ ನಿತ್ಯಂ ಪ್ರವಂದೇ ಶ್ರುತಮಹಮಖಿಲಂ ಸರ್ವಲೋಕೈಕಸಾರಂ।

ಶ್ರೀ ಶ್ರುತಸ್ಕಂಧ ಯಂತ್ರಂ

ಇವೆ. ಇದರಲ್ಲಿ ಧರ್ಮಕ್ಕೆ ಸಂಭಂಧಿಸಿದ 66 ಸಾವಿರ ಪ್ರಶ್ನೋತ್ತರವಿದೆ. ಜೀವ-ಅಜೀವದ ಬಗ್ಗೆ ವಿವರವಿದೆ.

6) **ನಾಥಧರ್ಮ ಕಥಾಂಗ** (ಜ್ಞಾತೃಧರ್ಮ ಕಥಾ):- ಇದರಲ್ಲಿ 5 ಲಕ್ಷ 56 ಸಾವಿರ ಪದಗಳಿವೆ. ಅನೇಕ ಕಥೆ, ಉಪಕಥೆಗಳೂ, ಗಣಧರರು ನಿರೂಪಿಸಿದ ಸಮಾಧಾನಗಳೂ, ಧರ್ಮಸಿದ್ಧಾಂತವೂ ಇದೆ.

7) **ಉಪಾಸಕಾಧ್ಯಾಯನಾಂಗ :-** ಇದರಲ್ಲಿ 11 ಲಕ್ಷ 70 ಸಾವಿರ ಪದಗಳಿವೆ. ಶ್ರಾವಕರ ಆಚಾರದ ವಿಷಯವಿದೆ. ಶ್ರಾವಕರ ವ್ರತ-ಪ್ರತಿಮೆ, ನೆಲೆಗಳ ವರ್ಣನೆ ಇದೆ.

8) **ಅಂತಕೃದ್ದಶಾಂಗ** :- ಇದರಲ್ಲಿ 23 ಲಕ್ಷ 28 ಸಾವಿರ ಪದಗಳಿವೆ. ಇದರಲ್ಲಿ ಪ್ರತಿಯೋರ್ವ ತೀರ್ಥಂಕರರ ಕಾಲದಲ್ಲಿ ಆಗಿಹೋದ ಕೇವಲಿಗಳ ವರ್ಣನೆ ಇದೆ. ಇವರೆಲ್ಲಾ ಉಪಸರ್ಗವನ್ನು ಜಯಿಸಿ ಮುಕ್ತರಾದವರು.

9) **ಅನುತ್ತರೌಪಪಾದಿಕ ದಶಾಂಗ :-** ಇದರಲ್ಲಿ 92 ಲಕ್ಷ 44 ಸಾವಿರ ಪದಗಳಿವೆ. ಇದರಲ್ಲಿ ಒಂದೊಂದು ತೀರ್ಥಂಕರರ ಕಾಲದಲ್ಲಿ ಉಪಸರ್ಗ ವನ್ನು ಸಹಿಸಿ ತಪಸ್ಸು ಮಾಡಿ ಸಮಾಧಿ ಹೊಂದಿ ಅನುತ್ತರ ಸ್ವರ್ಗಕ್ಕೆ ಹೋದವರ ವರ್ಣನೆ ಇದೆ.

10) **ಪ್ರಶ್ನಾವ್ಯಾಕರಣಾಂಗ :-** ಇದರಲ್ಲಿ 93 ಲಕ್ಷ 16 ಸಾವಿರ ಪದಗಳಿವೆ. ಕೇಳಿದ ಪ್ರಶ್ನೆಗಳಿಗೆ ಅದಕ್ಕೆ ಉತ್ತರ ರೂಪವಾಗಿ ಹಲವು ವಿಷಯಗಳಿವೆ. ಧನ, ಧಾನ್ಯ, ಲಾಭ-ನಷ್ಟ, ಜಯ-ಅಪಜಯ, ಜೀವಿತ-ಮರಣಗಳೆಂಬ ಪ್ರಶ್ನೆಗಳಿಗೆ ಶಾಸ್ತ್ರಸಮ್ಮತವಾದ ಆಕ್ಷೇಪಣೆ-ವಿಕ್ಷೇಪಣೆ, ಸಂವೇದಿನೀ- ನಿರ್ವೇದಿನೀ, ಎಂಬ ಕಥನ ಪದ್ಧತಿಗಳಿವೆ. ಇದು ಪ್ರಶ್ನಾಶಾಸ್ತ್ರ.

11) **ವಿಪಾಕ ಸೂತ್ರಾಂಗ** :- ಇದರಲ್ಲಿ 1 ಕೋಟಿ, 84 ಲಕ್ಷದಷ್ಟು ವಿಸ್ಥಾರವಾದ ಪದಗಳಿವೆ. ಪುಣ್ಯ-ಪಾಪಗಳ ಫಲದ ವರ್ಣನೆಯಿದೆ.

12) **ದೃಷಿವಾದಾಂಗ** :- ಈ ಅಂಗವು ಬಹಳ ವಿಸ್ತಾರವಾದುದು. ಇದರಲ್ಲಿ ಐದು ವಿಭಾಗಗಳಾಗಿವೆ.

೧. ಪರಿಕರ್ಮ ೨. ಸೂತ್ರ ೩. ಪ್ರಥಮಾನುಯೋಗ ೪. ಪೂರ್ವಗತ ೫. ಚೂಲಿಕೆ.

ಪರಿಕರ್ಮದಲ್ಲಿ- ಚಂದ್ರಪ್ರಜ್ಞಪ್ತಿ, ಸೂರ್ಯಪ್ರಜ್ಞಪ್ತಿ, ಜಂಬೂದ್ವೀಪ ಪ್ರಜ್ಞಪ್ತಿ, ದ್ವೀಪಸಾಗರಪ್ರಜ್ಞಪ್ತಿ, ಮತ್ತು ವ್ಯಾಖ್ಯಾನಪ್ರಜ್ಞಪ್ತಿ ಎಂದು ಐದು ವಿಧದ ಭೇದಗಳಿವೆ.

ಸೂತ್ರ ಮತ್ತು ಪ್ರಥಮಾನುಯೋಗದಲ್ಲಿ ಭೇದಗಳಿಲ್ಲ.

**ಪೂರ್ವಗತದಲ್ಲಿ-** 14 ಭೇದಗಳಿವೆ :-

1) **ಉತ್ಪಾದ ಪೂರ್ವ:-** ಇದರಲ್ಲಿ 1 ಕೋಟಿ ಪದಗಳಿವೆ. ಜೀವ-ಪುದ್ಗಲ-ಕಾಲಗಳ ಪರ್ಯಾಯ, ಉತ್ಪಾದಗಳ ವರ್ಣನೆ ಇದೆ.

2) **ಅಗ್ರಾಯಣೀ ಪೂರ್ವ :-** ಇದರಲ್ಲಿ 96 ಲಕ್ಷ ಪದಗಳಿವೆ. ಅಂಗಗಳ-ಪದಾರ್ಥಗಳ ಸ್ವಸಮಯಗಳ ವರ್ಣನೆಯಿದೆ.

3) **ವೀರ್ಯಾನುವಾದ ಪ್ರವಾದ :-** ಇದು 70 ಲಕ್ಷ ಪದ ಪ್ರಮಾಣ ವಾಗಿದೆ. ಮುನಿಗಳ - ಕೇವಲಿಗಳ - ರಾಜ - ಚಕ್ರವರ್ತಿಗಳ - ದೇವೇಂದ್ರ ಮೊದಲಾದವರ ಶಕ್ತಿ, ಬಲ ಎಷ್ಟೆಂದು ತಿಳಿಸಲಾಗಿದೆ.

4) **ಅಸ್ತಿ-ನಾಸ್ತಿ ಪ್ರವಾದ :-** ಇದರಲ್ಲಿ 60 ಲಕ್ಷ ಪದಗಳಿವೆ. ಇದರಲ್ಲಿ ದ್ರವ್ಯಗಳ ಅಸ್ತಿ-ನಾಸ್ತಿ ಪರ್ಯಾಯಗಳ ವರ್ಣನೆಯಿದೆ.

5) **ಜ್ಞಾನ ಪ್ರವಾದ :-** ಇದು ಒಂದು ಕಡಿಮೆಯಾದ ಒಂದು ಕೋಟಿ ಪದಗಳಿಂದ ಕೂಡಿದೆ. ಇದರಲ್ಲಿ ಜ್ಞಾನ-ಅಜ್ಞಾನ-ಇಂದ್ರಿಯಗಳ ವಿಷಯವಿದೆ.

6) **ಸತ್ಯ ಪ್ರವಾದ :-** ಇದು ಒಂದು ಕೋಟಿ ಆರು ಪದ ಪ್ರಮಾಣವಿದೆ. ಇದರಲ್ಲಿ ಸತ್ಯ-ಅಸತ್ಯ-ವಚನಗಳ ಫಲ-ಭಾವಗಳ ವರ್ಣನೆಯಿದೆ.

7) **ಆತ್ಮ ಪ್ರವಾದ :-** ಇದು 26 ಕೋಟಿ ಪದಗಳಿಂದ ಕೂಡಿದೆ. ಇದರಲ್ಲಿ ಆತ್ಮನ ಅಸ್ತಿತ್ವ-ನಾಸ್ತಿತ್ವ ಗುಣಗಳ ವರ್ಣನೆಯಿದೆ.

8) **ಕರ್ಮ ಪ್ರವಾದ :-** ಇದು ಒಂದು ಕೋಟಿ ಎಂಭತ್ತು ಲಕ್ಷ ಪ್ರಮಾಣ ಇದೆ. ಇದರಲ್ಲಿ ಕರ್ಮದ ಬಂಧ, ಉದಯ, ಉಪಶಮ, ನಿರ್ಜರಾ ಮುಂತಾದ ವಿಷಯಗಳ ವರ್ಣನೆಯಿದೆ.

9) **ಪ್ರತ್ಯಾಖ್ಯಾನ :-** ಇದು 84 ಲಕ್ಷ ಪದವುಳ್ಳದ್ದಾಗಿದೆ. ಇದರಲ್ಲಿ ವ್ರತ, ನೇಮ, ನಿಯಮ, ಪ್ರತಿಕ್ರಮಣ, ಪ್ರತ್ಯಾಖ್ಯಾನ, ಆಚಾರ, ಆರಾಧನೆಯ ವಿಷಯಗಳಿವೆ.



10) **ವಿದ್ಯಾನುವಾದ :-** ಇದರಲ್ಲಿ ಒಂದು ಕೋಟಿ ಹತ್ತು ಲಕ್ಷ ಪದಗಳಿವೆ. ಇದರಲ್ಲಿ ಎಲ್ಲಾ ವಿದ್ಯೆಗಳ ನಿಮಿತ್ತ ಪ್ರಶ್ನೆ, ರಾಶಿ, ಕ್ಷೇತ್ರ, ಲೋಕ, ಸಂಸ್ಥಾನಗಳ ವಿಷಯಗಳಿವೆ.

11) **ಕಲ್ಯಾಣವಾದ :-** ಇದರಲ್ಲಿ 26 ಕೋಟಿ ಪದಗಳಿವೆ. ಇದರಲ್ಲಿ ಸೂರ್ಯ, ಚಂದ್ರ, ನಕ್ಷತ್ರ, ತಾರೆಗಳ ಗತಿ, ಶುಭಾಶುಭ ಫಲಗಳನ್ನು ತಿಳಿಸಲಾಗಿದೆ.

12) **ಪ್ರಾಣಾವಾಯ :-** ಇದರಲ್ಲಿ 13 ಕೋಟಿ ಪದಗಳಿವೆ. ಇದರಲ್ಲಿ ಶರೀರ ಚಿಕಿತ್ಸೆ, ಆಯುರ್ವೇದ, ಯೋಗಗಳ ವಿಷಯಗಳಿವೆ.

13) **ಕ್ರಿಯಾವಿಶಾಲವಾದ :-** ಇದು 9 ಕೋಟಿ ಪದವುಳ್ಳದ್ದಾಗಿದೆ. ಇದರಲ್ಲಿ ಲೇಖನಕಲೆ, ವಿದ್ಯೆ, ಸ್ತ್ರೀಯರ ಗುಣಲಕ್ಷಣ, ಶಿಲ್ಪ, ಕಾವ್ಯಗಳ ವಿಷಯವಿದೆ.

14) **ಲೋಕಬಿಂದುಸಾರ :-** ಇದರಲ್ಲಿ 12 ಕೋಟಿ 50 ಲಕ್ಷ ಪದಗಳಿವೆ. ಇದರಲ್ಲಿ ವ್ಯವಹಾರದ ಕ್ರಿಯಾ-ಕಲಾಪಗಳ ವರ್ಣನೆಯಿದೆ.

ಈ ರೀತಿ 12 ಅಂಗಗಳ 14 ಪೂರ್ವಿಗಳ ವಿಷಯವನ್ನು ಷಟ್‌ಖಂಡ ಆಗಮದ ಧವಲಾದ ಟೀಕೆಯಲ್ಲಿ ತಿಳಿಸಲಾಗಿದೆ.

**ಚೂಲಿಕೆ:-** ದೃಷ್ಟಿವಾದಾಂಗ ಚೂಲಿಕೆಯೆಂಬ ವಿಭಾಗದಲ್ಲಿ 5 ವಿಭಾಗ ಗಳಿವೆ ಅವು- ಜಲಗತ, ಸ್ಥಲಗತ, ಮಾಯಾಗತ, ಆಕಾಶಗತ, ರೂಪಗತ.

**೭. ಅಂಗಬಾಹ್ಯಗಳೆಷ್ಟು ? ಅವು ಯಾವುವು ?**

ಅಂಗಬಾಹ್ಯಗಳು 14, ಅವು ಕೆಳಗಿನಂತಿವೆ :-

1) **ಸಾಮಾಯಿಕ :-** ನಾಮ, ಸ್ಥಾಪನಾ, ದ್ರವ್ಯ, ಕ್ಷೇತ್ರ, ಕಾಲ, ಭಾವ ಗಳನ್ನರಿತು ದೇವ-ಗುರು-ಶಾಸ್ತ್ರಗಳಿಗೆ ಗೌರವವನ್ನು ತೋರುವ ವಿಧಾನವಿದೆ.

2) **ವಂದನಾ :-** ಜಿನದೇವ, ಗುರು, ಶಾಸ್ತ್ರಗಳ ವಿಷಯವನ್ನು ಅರಿತು ವಿಧಿಪೂರ್ವಕ ವಂದನೆ ಮಾಡುವ ಕ್ರಮವಿದೆ.

3) **ಸ್ತವನ :-** ತೀರ್ಥಾಧೀಶರ ಗುಣಸ್ಮರಣೆಯ ವಿಷಯವಿದೆ.

4) **ಪ್ರತಿಕ್ರಮಣ :-** ಮಾಡಿರುವ ತಪ್ಪುಗಳನ್ನು, ದೋಷಗಳನ್ನು ತಿದ್ದಿ ಕೊಳ್ಳಲು ಮಾಡಬೇಕಾದ ವಿಧಿನಿಯಮಗಳಿವೆ.

5) **ವಿನಯ** :- ದರ್ಶನ, ಜ್ಞಾನ, ಚಾರಿತ್ರ, ತಪ ಮತ್ತು ವೀರ್ಯ

6) **ಕೃತಿಕರ್ಮ** :- ನಿತ್ಯ, ನೈಮಿತ್ತಿಕ ಕ್ರಿಯಾ ವಿಧಾನಗಳಿವೆ.

7) **ದಶವೈಕಾಲಿಕ** :- ಮುನಿಗಳು ಆಹಾರದಾನ ತೆಗೆದುಕೊಳ್ಳುವ ಕ್ರಮಗಳ ವಿವರವಿದೆ.

8) **ಉತ್ತರಾಧ್ಯಾಯನ** :- 22 ಪರೀಷಹಗಳ ಜಯದ ಕ್ರಮಗಳಿವೆ.

9) **ಕಲ್ಪವ್ಯವಹಾರ** :- ಶ್ರಮಣರು ಮಾಡುವ ಪ್ರಾಯಶ್ಚಿತ್ತಗಳ ವಿಧಗಳಿವೆ.

10) **ಕಲ್ಪಾ-ಕಲ್ಪಾ** :- ಯತಿಗಳ ಯೋಗ್ಯಾಯೋಗ್ಯ ಆಚಾರ ವಿಚಾರ ಗಳ ವಿವರವಿದೆ.

11) **ಪುಂಡರೀಕ** :- ಸಮ್ಯಕ್ತ್ವದ ಉತ್ಪತ್ತಿ, ಸಂಯಮ ಪಾಲನೆ, ದೇವ ಗತಿಗೆ ಕಾರಣ ಮುಂತಾದ ವಿಷಯಗಳಿವೆ.

12) **ಮಹಾಪುಂಡರೀಕ** :- ಘೋರ ತಪಸ್ಸಿನ ಫಲ, ಇಂದ್ರ, ಪ್ರತೀಂದ್ರಾದಿ ಪದವಿಯ ಲಬ್ಧಿಯ ವಿವರಗಳಿವೆ.

13) **ಮಹಾಕಲ್ಪ** :- ಯತಿಗಳ ತಪಸ್ಸಿನ ವಿವರ, ಸಲ್ಲೇಖನಾದಿಗಳ ವಿಷಯಗಳಿವೆ.

14) **ನಿಷಿದ್ಧಿಕಾ** :- ಪ್ರಮಾದ, ದೋಷಾದಿಗಳ ನಿವಾರಣೆಗೆ ಬೇಕಾದ ಉಪಾಯಗಳಿವೆ.

ಹೀಗೆ ಜಿನವಾಣಿಯ ಅಂಗಪ್ರವಿಷ್ಟ ಮತ್ತು ಅಂಗಬಾಹ್ಯಗಳಲ್ಲಿ ಇನ್ನೂ ವಿವಿರ ಮತ್ತು ಭಾಗೋಪಭಾಗಗಳಿವೆ. ಹೀಗಾಗಿ ಜಿನವಾಣಿಯು ಬಹು ವಿಸ್ಥಾರವಾಗಿದೆ.

## ಷಟ್‌ಖಂಡಾಗಮ :

### ೮. ಷಟ್‌ಖಂಡಾಗಮ ಎಂದರೇನು ?

ಈ ಹಿಂದೆ ಹೇಳಿದ ೧೪ ಪೂರ್ವಿಗಳಲ್ಲಿ ಎರಡನೆಯದಾದ ಅಗ್ರಾಣೀ ಪೂರ್ವದ ಐದನೆಯ ವಿಭಾಗವಾದ ಚಯನಲಬ್ಧಿ ವಸ್ತುವಿನ ನಾಲ್ಕನೆಯ ಪ್ರಾಭೃತವಾದ ಕಮ್ಮಪಯಡಿ ಪಾಹುಡ ಎಂಬ ಹೆಸರಿನ ಸಿದ್ಧಾಂತ ಗ್ರಂಥವೇ ಷಟ್‌ಖಂಡಾಗಮ. ಇವುಗಳ ರಚನಾಕಾಲ ಕ್ರಿ.ಶ. ೬೬.



ಈ ಷಟ್‌ಖಂಡಾಗಮದಲ್ಲಿ ಅಂಗಪ್ರವಿಷ್ಟ ಮತ್ತು ಅಂಗಬಾಹ್ಯದ ವಿಷಯವೂ, ಜಿನವಾಣಿಯ ವಿಷಯಗಳೂ ಅಡಕವಾಗಿದೆ.

### ೯. ಇದನ್ನು ಯಾರು ತಿಳಿದಿದ್ದರು ? ಯಾರು ರಚಿಸಿದರು ?

ಈ ವಿಷಯಗಳನ್ನು ಪರಂಪರಾಗತವಾಗಿ ಧರಸೇನಾಚಾರ್ಯರು ಮಹಾಕರ್ಮಪ್ರಕೃತಿ ಪ್ರಾಭೃತವನ್ನು ತಿಳಿದಿದ್ದರು. ಇದನ್ನು ಪುಷ್ಪದಂತ-ಭೂತಬಲಿ ಎಂಬ ಶಿಷ್ಯರು ಗುರುಗಳಿಂದ ಕೇಳಿ ತಿಳಿದು ಆರು ಖಂಡಗಳಲ್ಲಿ ಬರೆದರು. ಅದೇ ಷಟ್‌ಖಂಡಾಗಮ.

### ೧೦. ಷಟ್‌ಖಂಡಾಗಮಗಳಾವುವು ?

1) ಜೀವಟ್ಠಾಣ 2) ಖುದ್ದಾಬಂಧ 3) ಬಂಧಸ್ವಾಮಿತ್ವ 4) ವೇದನಾಖಂಡ 5) ವರ್ಗಣಾಖಂಡ 6) ಮಹಾಬಂಧ. ಇವೇ ಷಟ್(ಆರು)ಖಂಡಾಗಮಗಳು.

ಇವುಗಳಲ್ಲಿ ಜೀವಟ್ಠಾಣದ ನೂರ ಎಪ್ಪತ್ತೇಳು ಸೂತ್ರಗಳನ್ನು ಮಾತ್ರ ಪುಷ್ಪದಂತರೂ, ಮಿಕ್ಕ ಎಲ್ಲಾ ಖಂಡಗಳನ್ನು ಭೂತಬಲಿಗಳೂ ಬರೆದರು. ಇದು ಬರೆದು ಪೂರೈಸಿದ್ದು ಜ್ಯೇಷ್ಠ ಶುದ್ಧ ಪಂಚಮಿಯ ದಿನ. ಇದು ಶ್ರುತ ಪಂಚಮಿ ಎಂದು ಪ್ರಸಿದ್ಧವಾಗಿದೆ.

### ೧೧. ಷಟ್‌ಖಂಡಾಗಮದಲ್ಲಿ ಬರುವ ವಿಷಯಗಳಾವುವು ?

1) **ಜೀವಟ್ಠಾಣ** :- ಇದು ಜೀವಸ್ಥಾನವೇ ಆಗಿದೆ. ಇದರಲ್ಲಿ ಎಂಟು ಅನುಯೋಗ ದ್ವಾರ, ಒಂಭತ್ತು ಚೂಲಿಕೆ, 14 ಗುಣಸ್ಥಾನ, 14 ಮಾರ್ಗಣಸ್ಥಾನ ಮತ್ತು ಜೀವಸ್ಥಾನದ ವಿಷಯವಿದೆ. ಇದರ ಪ್ರಾರಂಭದಲ್ಲಿ ಣಮೋಕಾರವಿದೆ.

2) **ಖುದ್ದಾಬಂಧ** :- ಇದು ಚಿಕ್ಕದಾದ ಖಂಡ, ಕ್ಷುದ್ರ ಎಂದರೆ ಚಿಕ್ಕದು. ಇದರಲ್ಲಿ ಕ್ಷೇತ್ರ, ಕಾಲ, ಭಾವ, ಅಂತರ, ಅಲ್ಪ ಬಹುತ್ವ ಮುಂತಾದ ಹನ್ನೊಂದು ಭಾಗಗಳಿವೆ. ಕರ್ಮಬಂಧದ ವಿಷಯವೂ ಇದೆ.

3) **ಬಂಧಸ್ವಾಮಿತ್ವ** :- ಇದರಲ್ಲಿ ಜೀವನು ಹೇಗೆ ಕರ್ಮಬಂಧನ ಮಾಡಿ ಕೊಳ್ಳುತ್ತಾನೆ. ಇವನ್ನು ಯಾವ ಯಾವ ಗುಣಸ್ಥಾನದಲ್ಲಿ ಬಿಡಿಸಿಕೊಳ್ಳುತ್ತಾನೆ ಎಂಬ ವಿಷಯಗಳಿವೆ.

4) **ವೇದನಾಖಂಡ :-** ಇದರಲ್ಲಿ ಗಣಧರ ವಲಯ ಮಂತ್ರ ರೂಪದ ಮಂಗಲಾಚರಣೆ ಇದೆ. ಕೃತಿ-ವೇದನಾ ಎಂಬ ವಿಭಾಗಗಳಿವೆ. ನಾಮನಿಕ್ಷೇಪ ಮುಂತಾದ 16 ಅನುಯೋಗ ದ್ವಾರಗಳಿವೆ.

5) **ವರ್ಗಣಾಖಂಡ :-** ಜೀವನಿಗೆ ಕರ್ಮದ ಸ್ಪರ್ಶ, ಕರ್ಮದ ಭೇದ, ಪ್ರಕೃತಿಯ ಪರ್ಯಾಯ, ಕರ್ಮವರ್ಗಣೆ, ಕರ್ಮಫಲ, ಅನುಭವಗಳ ವಿವರಗಳಿವೆ.

6) **ಮಹಾಬಂಧ :-** ಇದರಲ್ಲಿ ಪ್ರಕೃತಿ, ಸ್ಥಿತಿ, ಅನುಭಾಗ ಮತ್ತು ಪ್ರದೇಶಗಳ ಬಂಧತತ್ತ್ವವನ್ನು ಹೇಳಿದ್ದಾರೆ. ಕರ್ಮದ ಸ್ವಭಾವ, ಬಂಧವಾಗುವ ಕ್ರಮ, ಅವುಗಳ ಫಲ, ಅವುಗಳಿಂದ ಬಿಡುಗಡೆಯ ಕ್ರಮಗಳ ವಿಸ್ತಾರವಾದ ವರ್ಣನೆಯಿದೆ.

ಈ ಷಟ್‌ಖಂಡಾಗಮದಲ್ಲಿ ಈ ಹಿಂದೆ ಹೇಳಿದ ವಿಷಯಗಳೆಲ್ಲಾ ಸಂಕ್ಷಿಪ್ತವಾಗಿ ಸಮಾವೇಶವಾಗಿದೆ. ಜಿನವಾಣಿಯ ವಿವರವೆಲ್ಲಾ ಇದರಲ್ಲಿದೆ.

**ಧವಲಾ ಗ್ರಂಥ** : ಮೇಲ್ಕಂಡ ಷಟ್‌ಖಂಡಾಗಮದಲ್ಲಿ ಆರನೆಯ ಮಹಾಬಂಧವನ್ನು ಬಿಟ್ಟು ಉಳಿದ ೫ ಖಂಡಗಳಿಗೆ ಕುಂದಕುಂದಾಚಾರ್ಯ ಮೊದಲಾದವರು ಟೀಕೆಯನ್ನು ಬರೆದಿದ್ದಾರೆ. ಜಿನಸೇನಾಚಾರ್ಯರ ಗುರುಗಳಾದ ವೀರಸೇನಾಚಾರ್ಯರು ಐದೂ ಖಂಡಗಳಿಗೆ ೭೨ ಸಾವಿರ ಶ್ಲೋಕಗಳಲ್ಲಿ ಟೀಕೆ ಬರೆದರು. ಇದರ ಮೂಲ ಶ್ಲೋಕಗಳು ೬ ಸಾವಿರ; ಇವೆರಡೂ ಸೇರಿ ೭೮ ಸಾವಿರ ಶ್ಲೋಕ ಪ್ರಮಾಣದ ಈ ಗ್ರಂಥವೇ ಧವಲಾ ಎಂದು ಪ್ರಸಿದ್ಧವಾಯಿತು.

**ಮಹಾಧವಲಾ** : ಷಟ್‌ಖಂಡಾಗಮದ ೬ನೆಯ ಭಾಗವಾದ ಮಹಾಬಂಧವನ್ನು ಭೂತಬಲಿ ಆಚಾರ್ಯರು ೪೦ ಸಾವಿರ ಶ್ಲೋಕ ಪ್ರಮಾಣದಲ್ಲಿ ರಚಿಸಿದ್ದಾರೆ. ಇದೇ ಮಹಾಧವಲ ಗ್ರಂಥ.

**ಜಯಧವಲಾ** : ಧರಸೇನಾಚಾರ್ಯರ ಕಾಲದಲ್ಲಿ ಗುಣಧರಾಚಾರ್ಯರು ಇದ್ದರು. ಅವರು ಈ ಹಿಂದೆ ಹೇಳಿದ ೧೪ ಪೂರ್ವಿಗಳಲ್ಲಿ ಐದನೆಯದಾದ ಜ್ಞಾನಪ್ರವಾದ ಪೂರ್ವದ ಒಂದು ವಿಭಾಗವಾದ ಪೇಜ್ಜಾಪಾಹುಡ, ಅಂದರೆ ಕಷಾಯಪಾಹುಡದ ವಿಷಯವಾಗಿ ೧೮೩ ಮೂಲ ಗಾಥೆ (ಶ್ಲೋಕ) ಗಳನ್ನು ೫೦೩ ವಿವರಣಾ ಗಾಥೆಗಳನ್ನು ಬರೆದರು. ಈ ಗ್ರಂಥಕ್ಕೆ ಯತಿ ವೃಷಭಾಚಾರ್ಯರ ಶಿಷ್ಯರಾದ ಉಚ್ಚಾರಣಾಚಾರ್ಯರು ೧೨ ಸಾವಿರ ಶ್ಲೋಕ ಪ್ರಮಾಣದ ಟೀಕೆಯನ್ನು ಬರೆದರು. ಆಗ ಇದು ೧೮ ಸಾವಿರದ ೬೮೪ ಶ್ಲೋಕ ಪ್ರಮಾಣವಾಯಿತು. ಅನಂತರ ಧವಲಾ ಗ್ರಂಥದ ಟೀಕೆಯನ್ನು ಬರೆದ ವೀರಸೇನಾಚಾರ್ಯರು ಈ ಕಷಾಯಪಾಹುಡ ಗ್ರಂಥಕ್ಕೆ ೨೦ ಸಾವಿರ ಶ್ಲೋಕ ಪ್ರಮಾಣದ ಟೀಕೆಯನ್ನು ಬರೆದರು. ಉಳಿದ ಭಾಗಕ್ಕೆ ಇವರ ಶಿಷ್ಯರಾದ ಜಿನಸೇನಾಚಾರ್ಯರು ೪೦ ಸಾವಿರ ಶ್ಲೋಕ ಪ್ರಮಾಣದಲ್ಲಿ ಟೀಕೆ ಬರೆದು ಪೂರೈಸಿದರು. ಹೀಗಾಗಿ ಈ ಕಷಾಯ ಪಾಹುಡವೆಂಬ ಗ್ರಂಥವು ಒಟ್ಟು ೭೮ ಸಾವಿರದ ೬೮೬ ಶ್ಲೋಕ ಪ್ರಮಾಣದ ಬೃಹದ್ ಗ್ರಂಥವಾಯಿತು. ಇದೇ ಜಯಧವಲ ಗ್ರಂಥ ಎಂದು ಪ್ರಸಿದ್ಧವಾಯಿತು.



ಇದಲ್ಲದೆ ವಿಜಯಧವಲಾ ಎಂಬ ಗ್ರಂಥ ಇತ್ತೆಂದು ಹೇಳುತ್ತಾರೆ. ಅದು ಈಗ ಲಭ್ಯವಿಲ್ಲ. ಹೀಗೆ ಜಿನವಾಣಿ ಬೃಹದ್ ಆಕಾರವಾಗಿ ಶೋಭಿಸುತ್ತಾ ಇದೆ. ಇದರಲ್ಲಿ ಪತಿತನು ಪಾವನನಾಗಿ ಪರಮಾತ್ಮನಾಗುವ ಸಕಲ ಮಾನ್ಯ ದರ್ಶನವಿದೆ, ಇದರಲ್ಲಿ ಎಲ್ಲಾ ವಿಷಯವೂ ಅಡಕವಾಗಿದೆ.

ಜಿನವಾಣಿಯಲ್ಲಿ ಪ್ರಥಮಾನುಯೋಗ, ಚರಣಾನುಯೋಗ, ಕರಣಾನುಯೋಗ ಮತ್ತು ದ್ರವ್ಯಾನುಯೋಗಗಳೂ ಸೇರಿವೆ.

*ಯುಗಾಂತರೇಷು ಭ್ರಾಂತೋಽಸ್ಮಿ, ತ್ವದ್ದರ್ಶನಾ ವಿನಾಕೃತಃ ।*
*ನಮೋಽಸ್ತು ಕಲಯೇ ಯತ್ರ ತ್ವದ್ದರ್ಶನಮಜಾಯತ ॥*

--ವೀತರಾಗಸ್ತವ, 9-7.

**ಅರ್ಥ :-** ಪ್ರಭೋ ನಿಮ್ಮ ದರ್ಶನವಾಗದಿರುವವರೆಗೆ ಯುಗಗಳವರೆಗೆ ಅಲೆದಾಡಿದೆ. ಈ ಕಲಿಕಾಲಕ್ಕೆ ನಾನು ನಮಸ್ಕರಿಸುತ್ತೇನೆ. ಇದರಲ್ಲೇ ನನಗೆ ನಿಮ್ಮ ದರ್ಶನವಾಯಿತು.

*ನಿಶಿದೀಪೋಂಬುಧೌ ದ್ವೀಪಂ, ಮರೌ ಶಾಖೀ ಹಿಮೇ ಶಿಖೀ ।*
*ಕಲೌ ದುರಾಪಃ ಪ್ರಾಪ್ತೋಽಯಂ ತ್ವತ್ಪಾದಾಬ್ಜರಜಃ ಕಣಃ ॥*

--ವೀತರಾಗಸ್ತವ, 9-6.

**ಅರ್ಥ :-** ರಾತ್ರಿಯಲ್ಲಿ ಸಂಚರಿಸುವ ವ್ಯಕ್ತಿಗೆ ದೀಪವೂ, ಸಮುದ್ರದಲ್ಲಿ ಮುಳುತ್ತಿರುವ ವ್ಯಕ್ತಿಗೆ ದ್ವೀಪವೂ, ಜ್ಯೇಷ್ಠಮಾಸದ ಮಧ್ಯಾಹ್ನದ ಬಿಸಿಲಿನಲ್ಲಿ ಮರುಭೂಮಿಯಲ್ಲಿ ಸಂಚರಿಸುವ ವ್ಯಕ್ತಿಗೆ ಮರವೂ ಮತ್ತು ಹಿಮದಲ್ಲಿ ನಡುಗುತ್ತಿರುವ ವ್ಯಕ್ತಿಗೆ ಬೆಂಕಿಯೂ ದೊರಕುವಂತೆ ನಿಮ್ಮ ಚರಣಕಮಲಗಳ ರಜಕಣವು ಈ ಕಲಿಕಾಲದಲ್ಲಿ ಪ್ರಾಪ್ತವಾಗಿದೆ.

## ೭೫ ಕೆಲವು ಪ್ರಸಿದ್ಧ ಜೈನಾಚಾರ್ಯರು

**೧. ಆಚಾರ್ಯ ಪರಂಪರೆ ಹೇಗೆ ಬಂದಿತು ?**

ಭಗವಾನ್ ಮಹಾವೀರ ಸ್ವಾಮಿಯವರ ನಂತರ ಗೌತಮ ಗಣಧರರೂ, ಸುಧರ್ಮ ಗಣಧರರೂ ಮತ್ತು ಜಂಬೂಸ್ವಾಮಿಗಳೂ ಕ್ರಮವಾಗಿ ಕೇವಲಿಗಳಾಗಿ ಮುಕ್ತರಾದರು. ಇವರ ನಂತರ ವಿಷ್ಣುಮುನಿಗಳೂ, ನಂದಿ, ಅಪರಾಜಿತ, ಗೋವರ್ಧನ ಮತ್ತು ಭದ್ರಬಾಹು ಆಚಾರ್ಯರು ಎಂಬೀ ಐದು ಮಂದಿ ಶ್ರುತಕೇವಲಿಗಳೂ ಆದರು. ಅನಂತರ ವಿಶಾಖದತ್ತ, ಪ್ರೌಷ್ಠಿಲ, ಕ್ಷತ್ರಿಯ, ಜಯಸೇನ, ನಾಗಸೇನ, ಸಿದ್ಧಾರ್ಥ, ಧೃತಿಷೇಣ, ವಿಜಯಸೇನ, ಬುದ್ಧಿಮಾನ್, ಗಂಗ, ಧರ್ಮ, ಎಂಬ ಆಚಾರ್ಯರು ಜಿನವಾಣಿಯ ದಶಪೂರ್ವ ಶಾಸ್ತ್ರ ಜ್ಞಾನಿಗಳಾಗಿದ್ದರು.

ಆ ನಂತರ ನಕ್ಷತ್ರ, ಜಯಪಾಲ, ಪಾಂಡು, ಧೃತಿಸೇನಾ, ಕಂಸಾ ಎಂಬ ಐದು ಮಂದಿ ಆಚಾರ್ಯರು ಏಕಾದಶಾಂಗ ಶಾಸ್ತ್ರದ ಜ್ಞಾನಿಗಳಾಗಿದ್ದರು.

ಆಮೇಲೆ ವಿನಯಧರ, ಶ್ರೀಧತ್ತ, ಶಿವದತ್ತ, ಅರ್ಹದ್ಧತ್ತ ಎಂಬ ನಾಲ್ಕು ಮಂದಿ ಆಚಾರ್ಯರು ಅಂಗ ಪೂರ್ವಿಗಳ ಕೆಲವು ವಿಷಯಗಳ ಬಗ್ಗೆ ತಿಳಿದವರಾಗಿದ್ದರು.

**೨. ಮುನಿ ಸಂಘಗಳು ಯಾವುವು ?**

ಅರ್ಹದ್ಬಲಿ ಆಚಾರ್ಯರು ಎಲ್ಲ ಮುನಿಸಂಘದ ಮುಖಂಡರನ್ನು ಕೂಡಿಸಿದರು. ಆಗ ನಿರ್ಗ್ರಂಥರಲ್ಲಿ ಸಂಘ ಭೇದಗಳಾದವು. ದೇವ-ಅಪರಾಜಿತ ಸಂಘ, ಭದ್ರ-ಸೇನಾ ಸಂಘ, ಗುಣಧರ-ಗುಪ್ತಸಂಘ, ಸಿಂಹ-ಚಂದ್ರ ಸಂಘ, ನಂದಿಸಂಘ ಮುಂತಾದ ಮುನಿ ಸಂಘಗಳಾದವು. ಆದರೂ ಇವರಲ್ಲಿ ಅಭಿಪ್ರಾಯ, ಆಚಾರ, ವಿಚಾರ, ಭೇದವಿರಲಿಲ್ಲ. ಒಂದೊಂದು ಮುನಿಗಳ ಗುಂಪಿಗೆ ಒಂದೊಂದು ಸ್ಥಳಗಳಲ್ಲಿರುವವರಿಗೆ ಈ ಹೆಸರುಗಳು ಪ್ರಸಿದ್ಧವಾದವು. ಆ ನಂತರ ಗಣ-ಗಚ್ಛಾ ಎಂದು ಹೇಳುವ ರೂಢಿಯಾಯಿತು. ಅನಂತರ ಪುನ್ನಾಟ ಯಾಪನೀಯ, ದ್ರಾವಿಡ, ಕಾಷ್ಠಾ, ಮಥುರಾ, ಮುಂತಾದ ಸಂಘಗಳಾದವು.

ಮುಂದೆ ಧರಸೇನಾಚಾರ್ಯರು ಪ್ರಸಿದ್ಧರಾಗಿದ್ದರು. ಅವರಿಗೆ ಮಹಾಕರ್ಮ ಪ್ರಾಭೃತ ಶಾಸ್ತ್ರಜ್ಞಾನವಿತ್ತು. ಅದನ್ನು ಪುಷ್ಪದಂತ-ಭೂತಬಲಿ ಆಚಾರ್ಯರಿಗೆ ಹೇಳಿ ಷಟ್‌ಖಂಡಾಗಮವನ್ನು ಬರೆಸಿದರು. ಈ ಪರಂಪರೆಯಲ್ಲಿ ಬಂದ ಕೆಲವು ಪ್ರಸಿದ್ಧ ಆಚಾರ್ಯರ ಪಟ್ಟಿ ಹೀಗಿದೆ-



**೩. ಆಚಾರ್ಯ ಪರಂಪರೆಯಲ್ಲಿ ಮುಖ್ಯ ಆಚಾರ್ಯರುಗಳು ಯಾರು? ಅವರ ಗ್ರಂಥಗಳಾವುವು ?**

| ಆಚಾರ್ಯರ ಹೆಸರು | ಕಾಲ ಕ್ರಿ.ಶ. | ಗ್ರಂಥಗಳು |
|---|---|---|
| 1. ಗುಣಧರಾಚಾರ್ಯರು | ೧ನೇ ಶತಮಾನ | ಕಷಾಯಪಾಹುಡ |
| 2. ಪುಷ್ಪದಂತ ಆಚಾರ್ಯರು | ಕ್ರಿ.ಶ. ೬೬ | ಷಟ್‌ಖಂಡಾಗಮ |
| 3. ಭೂತಬಲಿ ಆಚಾರ್ಯರು | ಕ್ರಿ.ಶ. ೬೬ | ಷಟ್‌ಖಂಡಾಗಮ |
| 4. ಆರ್ಯಮಂಕ್ಷು ಆಚಾರ್ಯರು | ಕ್ರಿ.ಶ. ೧೨೩ | ಕಷಾಯಪಾಹುಡ ಟೀಕೆ |
| 5. ನಾಗಹಸ್ತಿ ಆಚಾರ್ಯರು | ಕ್ರಿ.ಶ. ೧೭೩ | ಕಷಾಯಪಾಹುಡ ಟೀಕೆ |
| 6. ಕುಂದಕುಂದಾಚಾರ್ಯರು | ೧ನೇ ಶತಮಾನ | ಸಮಯಸಾರ, |
| | | ತಿರುಕ್ಕುರುಳ್, ಪ್ರವಚನಸಾರ |
| | | ನಿಯಮಸಾರ, ರಯಣಸಾರ |
| | | ಪಂಚಾಸ್ತಿಕಾಯ, ಅಷ್ಟಪಾಹುಡ |
| 7. ಶಿವಕೋಟಿ ಆಚಾರ್ಯರು | ೧ನೇ ಶತಮಾನ | ಭಗವತೀ ಆರಾಧನಾ |
| 8. ಕಾರ್ತಿಕೇಯ ಆಚಾರ್ಯರು | ೨ನೇ ಶತಮಾನ | ಕಾರ್ತಿಕೇಯಾನುಪ್ರೇಕ್ಷೆ |
| 9. ವಟ್ಟಕೇರಾಚಾರ್ಯರು | ೨ನೇ ಶತಮಾನ | ಮೂಲಾಚಾರ |
| 10. ಉಮಾಸ್ವಾಮಿ ಆಚಾರ್ಯರು | ೨ನೇ ಶತಮಾನ | ತತ್ತ್ವಾರ್ಥಸೂತ್ರ |
| 11. ಸ್ವಾಮಿ ಸಮಂತಭದ್ರರು | ೨ನೇ ಶತಮಾನ | ಷಟ್‌ಖಂಡಾಗಮಟೀಕೆ |
| | | ಗಂಧಹಸ್ತಿ ಮಹಾಭಾಷ್ಯ |
| | | ಆಪ್ತಮೀಮಾಂಸ, ಯುಕ್ತ್ಯಾನುಶಾಸನ, |
| | | ಜೀವಸಿದ್ಧಿ, ರತ್ನಕರಂಡಕ ಶ್ರಾವಕಾಚಾರ |
| 12. ಪೂಜ್ಯಪಾದ ಆಚಾರ್ಯರು | ೬ನೇ ಶತಮಾನ | ಜೈನೇಂದ್ರ ವ್ಯಾಕರಣ |
| | | ಶಬ್ದಾವತಾರ, ವೈದ್ಯಸಾರ |
| | | ಸರ್ವಾರ್ಥಸಿದ್ಧಿ, ಇಷ್ಟೋಪದೇಶ |
| | | ಸಮಾಧಿತಂತ್ರ, ದಶಭಕ್ತಿ |
| | | ಸಾರಸಂಗ್ರಹ, ಜಿನಾಭಿಷೇಕ |
| | | ಸಿದ್ಧಭಕ್ತಿ, ಶಾಂತ್ಯಾಷ್ಟಕ |
| 13. ಯೋಗೀಂದು ದೇವರು | ೬ನೇ ಶತಮಾನ | ಪರಮಾತ್ಮ ಪ್ರಕಾಶ |

| | | | |
|---|---|---|---|
| | | | ಯೋಗಸಾರ |
| 14. | ಯತಿ ವೃಷಭಾಚಾರ್ಯರು | ಕ್ರಿ.ಶ. ೬೦೪ | ಕಷಾಯಪಾಹುಡ ತಿಲೋಯಪಣ್ಣತ್ತಿ |
| 15. | ಸಿದ್ಧಸೇನ ದಿವಾಕರರು | ಕ್ರಿ.ಶ. ೫೫೦ | ಸನ್ಮತಿಸೂತ್ರ |
| 16. | ಜಟಾಸಿಂಹನಂದಿ | ಕ್ರಿ.ಶ. ೬೦೦ | ವರಂಗಚರಿತ್ರೆ |
| 17. | ಬಪ್ಪದೇವ | ಕ್ರಿ.ಶ. ೭೬೦ | ಷಟ್‌ಖಂಡಾಗಮ ಟೀಕೆ |
| 18. | ವಿದ್ಯಾನಂದರು | ಕ್ರಿ.ಶ. ೭೭೦ | ಶ್ಲೋಕವಾರ್ತಿಕ |
| 19. | ಭಟ್ಟಾಕಲಂಕರು | ಕ್ರಿ.ಶ. ೬೬೦ | ರಾಜವಾರ್ತಿಕ |
| 20. | ರವಿಷೇಣ | ಕ್ರಿ.ಶ. ೬೮೩ | ಪದ್ಮಪುರಾಣ |
| 21. | ವೀರಸೇನಾಚಾರ್ಯರು | ಕ್ರಿ.ಶ. ೭೯೨ | ಧವಲಾ ಟೀಕೆ |
| 22. | ಮಾನತುಂಗಾಚಾರ್ಯರು | ೭ನೇ ಶತಮಾನ | ಭಕ್ತಾಮರ ಸ್ತೋತ್ರ |
| 23. | ಜಿನಸೇನಾಚಾರ್ಯರು | ಕ್ರಿ.ಶ. ೮೦೦ | ಜಯಧವಲಾ, ಪೂರ್ವಪುರಾಣ |
| 24. | ಗುಣಭದ್ರಾಚಾರ್ಯರು | ಕ್ರಿ.ಶ. ೮೫೩ | ಉತ್ತರಪುರಾಣ ಆತ್ಮಾನುಶಾಸನ |
| 25. | ಮಹಾವೀರಾಚಾರ್ಯರು | ಕ್ರಿ.ಶ. ೮೭೮ | ಗಣಿತಸಾರ |
| 26. | ವಾದೀಭಸಿಂಹರು | ಕ್ರಿ.ಶ. ೮೯೮ | ಸ್ಯಾದ್ವಾದಸಿದ್ಧಿ |
| 27. | ವೀರನಂದಿಗಳು | ೧೦ನೇ ಶತಮಾನ | ಚಂದ್ರಪ್ರಭ ಚರಿತ ದ್ರವ್ಯಸಂಗ್ರಹ |
| 28. | ನೇಮಿಚಂದ್ರಸಿದ್ಧಾಂತಚಕ್ರಿಗಳು | ೧೦ನೇ ಶತಮಾನ | ಗೊಮ್ಮಟಸಾರ |
| 29. | ಶಿವಕೋಟಿ ಮುನಿಗಳು | ೧೦ನೇ ಶತಮಾನ | ರತ್ನಮಾಲಾ ವಡ್ಡಾರಾಧನೆ |
| 30. | ಕಾರ್ತಿಕೇಯ ಮುನಿಗಳು | ಕ್ರಿ.ಶ. ೧೦೧೧ | ಕಾರ್ತಿಕೇಯಾನುಪ್ರೇಕ್ಷೆ |
| 31. | ಶುಭಚಂದ್ರಾಚಾರ್ಯರು | ಕ್ರಿ.ಶ. ೧೦೦೩ | ಜ್ಞಾನಾರ್ಣವ |
| 32. | ಪದ್ಮನಂದಿ ಆಚಾರ್ಯರು | ಕ್ರಿ.ಶ. ೧೦೧೬ | ಪದ್ಮನಂದಿ ಪಂಚವಿಂಶತಿ |
| 33. | ಸೋಮದೇವಾಚಾರ್ಯರು | ಕ್ರಿ.ಶ. ೧೦೨೧ | ಬೃಹತ್‌ಕಥಾಸರಿತ್ಸಾಗರ |
| 34. | ನರೇಂದ್ರಸೇನಾಚಾರ್ಯರು | ಕ್ರಿ.ಶ. ೧೦೯೮ | ಸಿದ್ಧಾಂತಸಾರ ಸಂಗ್ರಹ |
| 35. | ನಾಗಸೇನಾಚಾರ್ಯರು | ಕ್ರಿ.ಶ. | ತತ್ತ್ವಾನುಶಾಸನ |
| 36. | ನಯಸೇನಾಚಾರ್ಯರು | ಕ್ರಿ.ಶ. ೧೧೧೨ | ಧರ್ಮಾಮೃತ |
| 37. | ನರೇಂದ್ರಸೇನಾಚಾರ್ಯರು | ಕ್ರಿ.ಶ. ೧೧೦೦ | ಸಿದ್ಧಾಂತಸಾರ ಸಂಗ್ರಹ |



ಹೀಗೆ ಈ ಆಚಾರ್ಯ ಪರಂಪರೆಯಲ್ಲಿ ಸಾಗಿಬಂದವರಲ್ಲಿ ಈಗ ೨೦ನೇ ಶತಮಾನದಲ್ಲಿ ಪ್ರಮುಖರಾದವರು ಚಾರಿತ್ರಚಕ್ರವರ್ತಿ ಶಾಂತಿಸಾಗರ ಮುನಿಮಹಾರಾಜರು.

ಈಗಿರುವ ಮುನಿಗಳೆಲ್ಲಾ ಇವರ ಶಿಷ್ಯಪರಂಪರೆಯಿಂದ ಬಂದವರೇ ಆಗಿದ್ದಾರೆ.

---

## ಕೆಲವುಮಂದಿ ಜೈನಾಚಾರ್ಯರ ಪರಿಚಯ :

**೧. ಗೌತಮ ಗಣಧರರು : ಕ್ರಿ.ಪೂ. ೫೫೭**

ಇವರು ಭಗವಾನ್ ಮಹಾವೀರರ ಪ್ರಧಾನ ಗಣಧರರು (ಶಿಷ್ಯರು). ಇವರ ಮೂಲ ಹೆಸರು ಇಂದ್ರಭೂತಿ. ಇವರು ಹುಟ್ಟು ಬ್ರಾಹ್ಮಣರು. ವೇದ-ವೇದಾಂಗಗಳಲ್ಲಿ ಪಾರಂಗತರಾಗಿದ್ದರು. ದೇವೇಂದ್ರನು ಇವರನ್ನು ಮಹಾವೀರರ ಸಮವಸರಣಕ್ಕೆ ಕರೆದುಕೊಂಡು ಹೋದನು. ಅಲ್ಲಿದ್ದ ಮಾನಸ್ಥಂಭದ ದರ್ಶನವಾದ ಕೂಡಲೇ ಇಂದ್ರಭೂತಿಯ ಮಾನಕಷಾಯ ನಷ್ಟವಾಯಿತು. ನಂತರ ಮಹಾವೀರರ ದರ್ಶನವಾದ ಕೂಡಲೇ ಅವರ ಸಂಶಯಗಳೆಲ್ಲ ನಿವಾರಣೆಯಾದವು. ನಂತರ ದೀಕ್ಷೆಯನ್ನು ತೆಗೆದುಕೊಂಡು ಭಗವಾನರ ಪ್ರಥಮ ಶಿಷ್ಯರಾದರು. ಭಗವಾನರಲ್ಲಿ ಹಲವು ಪ್ರಶ್ನೆಗಳನ್ನು ಕೇಳಿ ತಿಳಿದುಕೊಂಡು, ದ್ವಾದಶಾಂಗ ಶ್ರುತದ ರಚನೆ ಮಾಡಿದರು. ಮಹಾವೀರರು ಮುಕ್ತರಾದ ಕೂಡಲೇ ಗೌತಮರಿಗೆ ಕೇವಲಜ್ಞಾನವಾಯಿತು. ಅವರೂ ಗಂಧಕುಟಿಯಲ್ಲಿ ವಿರಾಜಮಾನರಾಗಿ ಹನ್ನೆರಡು ವರ್ಷಗಳ ಕಾಲ ಧರ್ಮ ಪ್ರಚಾರ ಮಾಡಿ ಮುಕ್ತರಾದರು.

**೨. ಭದ್ರಬಾಹು ಆಚಾರ್ಯರು : ಕ್ರಿ.ಪೂ. ೩೨೫**

ಇವರು ಕೊನೆಯ ಶ್ರುತಕೇವಲಿಗಳು. ಇವರ ಕಾಲದಲ್ಲಿ ಮಗಧ

ದೇಶದಲ್ಲಿ ೧೨ ವರ್ಷಗಳ ಕಾಲ ಭಯಂಕರವಾದ ಬರಗಾಲ ಬಂದಿತು. ಆಗ ತಮ್ಮ ಚಾರಿತ್ರವನ್ನು ಉಳಿಸಿಕೊಳ್ಳಲು ತಮ್ಮ ಶಿಷ್ಯರೊಂದಿಗೆ ದಕ್ಷಿಣ ದೇಶಕ್ಕೆ ಬಂದರು. ಆಗ ಮೌರ್ಯ ಸಾಮ್ರಾಟನಾಗಿದ್ದ ಚಂದ್ರಗುಪ್ತನು ಇವರ ಶಿಷ್ಯನಾಗಿದ್ದನು. ಅವನೂ ತನ್ನ ರಾಜ್ಯವನ್ನು ಮಗನಿಗೆ ಒಪ್ಪಿಸಿ ಭದ್ರಬಾಹುಗಳೊಂದಿಗೆ ಬಂದನು. ಇವರು ಶ್ರವಣಬೆಳಗೊಳದ ಚಿಕ್ಕಬೆಟ್ಟದಲ್ಲಿ ನೆಲೆಸಿದರು. ಆಗ ದಕ್ಷಿಣದಲ್ಲಿ ಜೈನ ಧರ್ಮವು ವಿಶೇಷ ಪ್ರಭಾವನೆಯಲ್ಲಿತ್ತು. ಭದ್ರಬಾಹುಗಳು ಇಲ್ಲಿಯ ಒಂದು ಗುಹೆಯಲ್ಲಿ ಸಮಾಧಿಮರಣ ಹೊಂದಿದರು. ಇಂದಿಗೂ ಭದ್ರಬಾಹು ಗುಹೆ ಎಂದು ಪ್ರಸಿದ್ಧವಾಗಿದೆ. ಅಲ್ಲಿ ಅವರ ಚರಣ ಚಿನ್ಹೆಗಳಿವೆ. ಕೆಲಕಾಲದ ನಂತರ ಚಂದ್ರಗುಪ್ತರೂ ಮುನಿಯಾಗಿ ಚಿಕ್ಕಬೆಟ್ಟದ ಮೇಲೆಯೇ ಸಮಾಧಿಯಾದರು. ಆ ಕಾಲದಲ್ಲಿ ಉತ್ತರ ದೇಶದಲ್ಲಿ ಉಳಿದ ಕೆಲವರು ಶ್ವೇತಾಂಬರ ಪಂಥವನ್ನು ಸ್ಥಾಪಿಸಿದರು.

ಆಚಾರ್ಯ ಧರಸೇನರ 'ಪುಷ್ಪದಂತ ಭೂತಬಲಿ' ಆಚಾರ್ಯರ ವಿಷಯವು ಈ ಹಿಂದೆ ಬಂದಿದೆ.

**೩. ಕುಂದಕುಂದಾಚಾರ್ಯರು : ಕ್ರಿ.ಶ. ೧ನೇ ಶತಮಾನ.**

ಇವರ ಕಾಲ ಕ್ರಿ.ಶ. ಒಂದನೇ ಶತಮಾನದ ಆದಿಭಾಗ. ಇವರು ಆಂಧ್ರ ಪ್ರದೇಶದ ಕೊಂಡಕೊಂದಿ ಎಂಬ ಗ್ರಾಮದಲ್ಲಿ ಜನಿಸಿದರು. ತಂದೆ ಕರ ಮುಂಡ, ತಾಯಿ ಶ್ರೀಮತಿ. ಭದ್ರಬಾಹುಗಳು ಮತ್ತು ಜಿನಚಂದ್ರರೆಂಬುವರು ಇವರ ಗುರುಗಳು. ಇವರು ಹಲವು ಭಾಷಾ ಪಂಡಿತರಾಗಿದ್ದರು. ತಮ್ಮ ಹನ್ನೊಂದನೆಯ ವಯಸ್ಸಿನಲ್ಲಿ ದಿಗಂಬರ ದೀಕ್ಷೆಯನ್ನು ತೆಗೆದುಕೊಂಡು ಭಾರ ತಾದ್ಯಂತ ಸಂಚರಿಸಿ, ಧರ್ಮ ಪ್ರಚಾರ ಮಾಡಿದರು. ಇವರು ತಮಿಳಿನಲ್ಲಿ ತಿರುಕ್ಕುರಳ್ ಎಂಬ ಗ್ರಂಥವನ್ನು, ಪ್ರಾಕೃತದಲ್ಲಿ ಸಮಯಸಾರ, ನಿಯಮಸಾರ, ಪ್ರವಚನಸಾರ, ಪಂಚಾಸ್ತಿಕಾಯ, ಅಷ್ಟಪಾಹುಡ ಮೊದಲಾದ ಎಂಭತ್ತ ನಾಲ್ಕು ಗ್ರಂಥಗಳನ್ನು ರಚಿಸಿದರು. ಆದರೆ ಇವುಗಳಲ್ಲಿ ಕೆಲವು ಮಾತ್ರ ನಮಗೆ ಸಿಕ್ಕಿವೆ. ಇವರು ತಮ್ಮ ವಿದ್ಯಾ ಬಲದಿಂದ ವಿದೇಹ ಕ್ಷೇತ್ರದ ಶ್ರೀ ಸೀಮಂಧರ ಸ್ವಾಮಿಯ ಸಮವಸರಣಕ್ಕೆ ಹೋಗಿ ಬಂದಿದ್ದರು. ಇವರಿಗೆ ಪದ್ಮನಂದಿ, ಏಲಾಚಾರ್ಯ, ಗೃದ್ಧಪಿಂಛರು, ವಕ್ರಗ್ರೀವರೆಂಬ ಹೆಸರುಗಳೂ ಇದ್ದವು. ಇವರು ತಮ್ಮ ೯೪ನೇ ವಯಸ್ಸಿನಲ್ಲಿ ತಮಿಳುನಾಡಿನ ಪೊನ್ನೂರುಮಲೈ ಎಂಬಲ್ಲಿ ಸಮಾಧಿಯಾದರು.



**ಮಂಗಲಂ ಭಗವಾನ್ ವೀರೋ । ಮಂಗಲಂ ಗೌತಮೋಗಣೀ ।**
**ಮಂಗಲಂ ಕುಂದಕುಂದಾರ್ಯೋ । ಜೈನಧರ್ಮೋಸ್ತು ಮಂಗಲಂ ॥**

ಇಲ್ಲಿ ಮೊದಲ ಸ್ಥಾನ ಭಗವಾನ್ ಮಹಾವೀರರಿಗೂ ಮತ್ತು ಗೌತಮ ಗಣಧರರಿಗೂ, ಆ ನಂತರ ಕುಂದಕುಂದರಿಗೆ ಭಕ್ತಿ, ಗೌರವವನ್ನು ನೀಡಲಾಗಿದೆ. ಆ ಕಾಲದಲ್ಲಿ ಇವರನ್ನು ಗಣಧರರೆಂದೇ ಗೌರವಿಸುತ್ತಿದ್ದರು.

**೪. ಉಮಾಸ್ವಾಮಿ ಆಚಾರ್ಯರು : ಕ್ರಿ.ಶ. ೨ನೇ ಶತಮಾನ.**

ಇವರ ಕಾಲ ಕ್ರಿ.ಶ. ೨ನೇ ಶತಮಾನದ ಆದಿಭಾಗ. ಇವರು ಕುಂದ ಕುಂದಾಚಾರ್ಯರ ಶಿಷ್ಯರು. ಜೈನ ಸಿದ್ಧಾಂತವನ್ನು ಸಂಸ್ಕೃತ ಭಾಷೆಯಲ್ಲಿ ಸೂತ್ರ ಗಳ ರೂಪದಲ್ಲಿ ಬರೆದರು. ಅದೇ ತತ್ತ್ವಾರ್ಥಸೂತ್ರ ಗ್ರಂಥ. ಸೌರಾಷ್ಟ್ರ ದೇಶದ ಗಿರಿನಾರ್‌ನಲ್ಲಿ ಸಿದ್ದಯ್ಯನೆಂಬ ಶ್ರಾವಕನಿದ್ದನು. ಅವನು ನಿತ್ಯವೂ ಧರ್ಮದ ಒಂದು ಸೂತ್ರವನ್ನು ಹೇಳಿಕೊಳ್ಳದೆ ಊಟ ಮಾಡುತ್ತಿರಲಿಲ್ಲ. ಇದು ಅವನ ವ್ರತವಾಗಿತ್ತು. ಗುರುಗಳಿಂದ ಒಂದು ಸೂತ್ರವನ್ನು ಕೇಳಿ ಬಂದಿದ್ದನು. ಅದು ಮರೆತುಹೋದೀತೆಂದು ಅದನ್ನು ಮನೆಯ ಗೋಡೆಯ ಮೇಲೆ ಬರೆದಿದ್ದನು. ಅದು ಹೀಗಿತ್ತು-''ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ'' ಮನೆಗೆ ಬರುವುದರೊಳಗೆ ಮೊದಲ ಶಬ್ದ ಮರೆತುಹೋಗಿತ್ತು. ಆತ ತನ್ನ ಕೆಲಸಕ್ಕೆ ಎಲ್ಲಿಗೋ ಹೋಗಿದ್ದ ಉಮಾಸ್ವಾಮಿಗಳು ಅದೇ ವೇಳೆಗೆ ಅವನ ಮನೆಗೆ ಆಹಾರಕ್ಕೆಂದು ಬಂದರು. ಆ ಶ್ರಾವಕನ ಪತ್ನಿ ನಿರಂತರಾಯವಾಗಿ ಆಹಾರದಾನ ಮಾಡಿದಳು. ಆಗ ಸ್ವಾಮಿಗಳಿಗೆ ಗೋಡೆಯ ಮೇಲೆ ಬರೆದಿದ್ದ ಸೂತ್ರ ಕಂಡಿತು. ಅದರ ಪ್ರಾರಂಭದಲ್ಲಿ ಇರಬೇಕಾದ ಸಮ್ಯಕ್ ಎಂಬ ಶಬ್ದವನ್ನು ಬರೆದುಹೋದರು. ಆಗ ಅದು''ಸಮ್ಯಗ್ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ'' ಎಂದಾಯಿತು. ಶ್ರಾವಕನು ಮನೆಗೆ ಬಂದು ಊಟ ಮಾಡುವ ಮುನ್ನ ಆ ಸೂತ್ರವನ್ನು ಓದಿದ. ಆಶ್ಚರ್ಯವಾಗಿ ಈ ಮೊದಲ ಶಬ್ದವನ್ನು ಯಾರು ಬರೆದರೆಂದು ಪತ್ನಿಯನ್ನು ಕೇಳಿದ. ಆಕೆ ಆಹಾರಕ್ಕೆ ಬಂದಿದ್ದ ಸ್ವಾಮಿಗಳು ಬರೆದರೆಂದು ತಿಳಿಸಿದಳು. ಆತನಿಗೆ ಆ ಗುರುಗಳ ಬಗ್ಗೆ ಭಕ್ತಿ-ಗೌರವಗಳು ಮೂಡಿದವು. ಕೂಡಲೇ ಅವರನ್ನು ಪತ್ತೆಹಚ್ಚಿ, ನಮಿಸಿ, ಪ್ರಾರ್ಥಿಸಿದನು. ಆ ಸೂತ್ರದ ಪೂರ್ಣ ಅರ್ಥವೇನೆಂದು ಕೇಳಿದನು. ಆಗ ಉಮಾಸ್ವಾಮಿ ಆಚಾರ್ಯರು ಆ ಸೂತ್ರದ ಅರ್ಥವನ್ನು ಹೇಳುತ್ತಾ ಒಂದು ಗ್ರಂಥವನ್ನೇ ರಚಿಸಿದರು. ಅದೇ ತತ್ತ್ವಾರ್ಥ ಸೂತ್ರ ಗ್ರಂಥವಾಯಿತು. ಇದಕ್ಕೆ

ಮೋಕ್ಷ ಶಾಸ್ತ್ರವೆಂದೂ ಹೇಳುತ್ತಾರೆ. ಇದು ಜೈನರ ಬೈಬಲ್, ಭಗವದ್ಗೀತೆ ಎನಿಸಿದೆ. ಇದು ಹತ್ತು ಅಧ್ಯಾಯಗಳಲ್ಲಿದ್ದು, ಒಟ್ಟು ೩೫೭ ಸೂತ್ರಗಳಿಂದ ಕೂಡಿದೆ. ಇದನ್ನು ಭಕ್ತಿಯಿಂದ ಒಂದು ಸಾರಿ ಓದಿದರೆ ಒಂದು ಉಪವಾಸ ಮಾಡಿದ ಫಲ ಸಿಗುತ್ತದೆಂದು ಹೇಳಿದ್ದಾರೆ. ಈ ಗ್ರಂಥವನ್ನು ದಿಗಂಬರ, ಶ್ವೇತಾಂಬರರೆಲ್ಲಾ ಮಾನ್ಯ ಮಾಡಿದ್ದಾರೆ. ಉಮಾಸ್ವಾಮಿ ಆಚಾರ್ಯರಿಗೆ ಗೃದ್ಧಪಿಂಛಾಚಾರ್ಯರೆಂದೂ, ಉಮಾಸ್ವಾತಿ ಎಂದೂ ಹೆಸರುಂಟು.

**೫. ಸ್ವಾಮಿ ಸಮಂತಭದ್ರಾಚಾರ್ಯರು - ಕ್ರಿ.ಶ. ೨ನೇ ಶತಮಾನ**

ಇವರು ಕ್ರಿ.ಶ. ೨ನೇ ಶತಮಾನದ ಅಂತ್ಯದಲ್ಲಿದ್ದರು. ಇವರು ಜೈನ ಕ್ಷತ್ರಿಯರು. ಮಹಾನ್ ವಿದ್ವಾಂಸರು. ಜೈನಾಚಾರ್ಯರಲ್ಲಿ ಅತ್ಯಂತ ಪ್ರಭಾವ ಶಾಲಿಗಳಾಗಿದ್ದರು. ಇವರು ಆ ಕಾಲದಲ್ಲಿದ್ದ ಪರಮತ ವಾದಿಗಳನ್ನೆಲ್ಲಾ ತಮ್ಮ ವಿದ್ವತ್ತಿನಿಂದ ಸೋಲಿಸಿದ್ದರು. ಇವರಿಗೆ ಆಚಾರ್ಯ, ಕವಿ, ವಾದಿರಾಟ್, ಪಂಡಿತ, ದೈವಜ್ಞ, ಭಿಷಗ್‌ರತ್ನ, ಯಂತ್ರ, ಮಂತ್ರ, ತಂತ್ರ ವಿದ್ಯಾಪಾರಂಗತ, ಸಿದ್ಧ ಸಾರಸ್ವತ ಮುಂತಾದ ಪದವಿಗಳಿದ್ದವು. ಇವರು ದೇಶದ ಮೂಲೆ ಮೂಲೆ ಗಳಲ್ಲೆಲ್ಲಾ ಸಂಚರಿಸಿ, ಜನರಲ್ಲಿದ್ದ ಮೂಢನಂಬಿಕೆಗಳನ್ನು ತೊಲಗಿಸಿ ಧರ್ಮ ಪ್ರಚಾರ ಮಾಡಿದರು. ಒಮ್ಮೆ ಇವರಿಗೆ ಅಸಾಧ್ಯವಾದ ಭಸ್ಮಕ ವ್ಯಾಧಿ ಬಂದಿತು. ಎಷ್ಟು ತಿಂದರೂ ಹೊಟ್ಟೆಯ ಹಸಿವು ಹಿಂಗುತ್ತಿರಲಿಲ್ಲ, ಆದರೂ ತಮ್ಮ ವಿದ್ಯಾ ಬಲದಿಂದ ಕಾಂಚೀನಗರದಲ್ಲಿ ಚತುರ್ವಿಂಶತಿ ತೀರ್ಥಂಕರರ ಸ್ತುತಿ ಮಾಡಿ ರೋಗ ನಿವಾರಣೆ ಮಾಡಿಕೊಂಡರು. ಅಲ್ಲಿನ ಶಿವಾಲಯದಲ್ಲಿ ಚಂದ್ರನಾಥ ಸ್ವಾಮಿಯ ಬಿಂಬ ಪ್ರಕಟವಾಗುವಂತೆ ಮಾಡಿ, ಅದ್ಬುತ ಚಮತ್ಕಾರ ಮಾಡಿದರು. ಇದರಿಂದ ಅಲ್ಲಿನ ದೊರೆ ಶಿವಕೋಟಿ ಮಹಾರಾಜನು ಪ್ರಭಾವಿತನಾಗಿ ಇವರ ಶಿಷ್ಯನಾದನು. ಈ ಶಿವಕೋಟಿಯು ಮುಂದೆ ಆಚಾರ್ಯರೆನಿಸಿ, ಭಗವತೀ ಆರಾಧನಾ, ಮುಂತಾದ ಗ್ರಂಥಗಳನ್ನು ಬರೆದರು. ಸಮಂತಭದ್ರಾಚಾರ್ಯರು ದೇವಾಗಮ ಸ್ತೋತ್ರ, ಯುಕ್ತ್ಯಾನುಶಾಸನ, ಸ್ವಯಂಭೂ ಸ್ತೋತ್ರ, ಜಿನಸ್ತುತಿ ಶತಕ, ರತ್ನಕರಂಡಕ ಶ್ರಾವಕಾಚಾರ, ಜೀವಸಿದ್ಧಿ, ತತ್ತ್ವಾನುಶಾಸನ, ಪ್ರಾಕೃತ ವ್ಯಾಕರಣ, ಕರ್ಮಪ್ರಾಭೃತ ಟೀಕಾ ಮತ್ತು ಗಂಧಮಹಾಭಾಷ್ಯವೆಂಬ ತತ್ತ್ವಾರ್ಥ ಸೂತ್ರಕ್ಕೆ ವಾಖ್ಯಾನ ಬರೆದಿದ್ದರು. ಇದು ೮೪ ಸಾವಿರ ಶ್ಲೋಕ ಪ್ರಮಾಣವಾಗಿತ್ತು. ಆದರೆ ಈ ಗ್ರಂಥ ಸಿಕ್ಕಿಲ್ಲ. ಇದರ ಪ್ರಾರಂಭಿಕ ಮಂಗಲ ಶ್ಲೋಕಕ್ಕೆ ಬರೆದ ವ್ಯಾಖ್ಯಾನವಾದ ದೇವಾಗಮ ಸ್ತೋತ್ರದಲ್ಲಿ ಈ ಗ್ರಂಥದ ವಿಷಯವಿದೆ. ಈ



ಆಚಾರ್ಯರು ಮುಂದಿನ ಭವಿಷತ್ಕಾಲದ ಇಪ್ಪತ್ತಮೂರನೇ ತೀರ್ಥಂಕರ ರಾದ ದೇವಪಾಲರಾಗಿ ಜನ್ಮ ತಾಳುವರೆಂಬ ಪ್ರತೀತಿಯಿದೆ.

**೬. ಅಕಲಂಕಾಚಾರ್ಯರು - ಕ್ರಿ.ಶ. ೬೨೦.**

ಇವರ ಕಾಲ ಕ್ರಿ.ಶ. ೬೨೦. ಇವರು ನ್ಯಾಯಶಾಸ್ತ್ರ ಪಂಡಿತರು. ಇವರು ಕ್ಷತ್ರಿಯರು. ಆ ಕಾಲದಲ್ಲಿ ಬೌದ್ಧರ ಪ್ರಭಾವ ಹೆಚ್ಚಾಗಿತ್ತು. ಅವರ ಉಪಟಳ ದಿಂದ ಜೈನಧರ್ಮಕ್ಕೆ ಹಾನಿಯಾಗಿತ್ತು. ಇದನ್ನರಿತ ಇವರು ತಮ್ಮ ಸೋದರ ನಿಃಕಲಂಕನೊಂದಿಗೆ ಹೊರಟು ವೇಷ ಮರೆಸಿಕೊಂಡು ಬೌದ್ಧರಲ್ಲೇ ವಿದ್ಯೆ ಕಲಿತರು, ಕಾರಣಾಂತರದಿಂದ ಸಿಕ್ಕಿಬಿದ್ದಾಗ ತಮ್ಮ ನಿಃಕಲಂಕನು ಹತ್ಯೆಗೊಳ ಗಾದನು. ಆದರೂ ಅಕಲಂಕರು ಎದೆಗುಂದದೆ ಕಂಚಿಗೆ ಹೋಗಿ ಅಲ್ಲಿ ಹಿಮಶೀತಲ ರಾಜನ ಆಸ್ಥಾನದಲ್ಲಿ ವಾದ ಮಾಡಿ ಬೌದ್ಧರನ್ನು ಸೋಲಿಸಿದರು. ಆಗ ಮಹತ್ತರವಾದ ಜೈನಧರ್ಮದ ಪ್ರಭಾವನೆಯಾಯಿತು. ಇವರು ಸ್ವಾಮಿ ಸಮಂತಭದ್ರಾಚಾರ್ಯರ ಉತ್ತರಾಧಿಕಾರಿಗಳಾಗಿದ್ದರು. ಸಮಂತಭದ್ರರ ಆಪ್ತಮೀಮಾಂಸವೆಂಬ ಗ್ರಂಥಕ್ಕೆ ಅಷ್ಟಸಹಸ್ರೀ ಎಂಬ ಟೀಕೆಯನ್ನು ಬರೆದರು. ಇದಲ್ಲದೆ ತತ್ತ್ವಾರ್ಥ ರಾಜವಾರ್ಥಿಕ, ಲಘೀಯಶಾಸ್ತ್ರ, ಅಕಲಂಕ ಸ್ತೋತ್ರ, ಪ್ರಮಾಣ ಸಂಗ್ರಹ, ನ್ಯಾಯವಿನಿಶ್ಚಯ ಮುಂತಾದ ಗ್ರಂಥಗಳನ್ನು ಬರೆದು, ಇವರು ಕೊನೆಗೆ, ಸೋಂದೆ ಮಠದ ಭಟ್ಟಾರಕರಾಗಿ ಸಮಾಧಿಯಾದರು.

**೭. ಪೂಜ್ಯಪಾದರು - ಕ್ರಿ.ಶ. ೬ನೇ ಶತಮಾನ.**

ಇವರು ಮೈಸೂರು ಜಿಲ್ಲೆಯ ಕೊಳ್ಳೇಗಾಲದಲ್ಲಿ ಜನಿಸಿದರು. ತಂದೆ ಮಾಧವಭಟ್ಟ, ತಾಯಿ ಶ್ರೀದೇವಿ. ಇವರು ಬ್ರಾಹ್ಮಣರು. ಜೈನಧರ್ಮದಿಂದ ಪ್ರಭಾವಿತರಾಗಿ ದಿಗಂಬರ ಯತಿಗಳಾದರು. ತಮ್ಮ ವಿದ್ಯಾ, ಚಾರಿತ್ರದಿಂದ ಪ್ರಸಿದ್ಧರಾಗಿ ಆಚಾರ್ಯರಾದರು. ಇವರ ಇನ್ನೊಂದು ಹೆಸರು ದೇವನಂದಿ ಎಂದು. ಇವರು ಪಾದಲೇಪನ ಔಷಧದಿಂದ ವಿದೇಹಕ್ಷೇತ್ರಕ್ಕೆ ಹೋಗಿದ್ದರು. ಇವರಿಗೆ ರಸಸಿದ್ಧಿ ಇತ್ತು. ಇದರಿಂದ ಕಬ್ಬಿಣವನ್ನು ಚಿನ್ನ ಮಾಡಬಹುದಿತ್ತು. ಇವರು ಮಾಡಿದ ಘೋರ ತಪಸ್ಸಿನ ತಾಪದಿಂದ ಕಣ್ಣು ಕಾಣದಂತಾದವು. ಆದರೆ ಶಾಂತ್ಯಾಷ್ಟಕವೆಂಬ ಶಾಂತಿನಾಥರ ಸ್ತುತಿ ಮಾಡಿದಾಗ ಮತ್ತೆ ಕಣ್ಣು ಕಾಣು ವಂತಾಯಿತು. ಇವರು ಪ್ರಸಿದ್ಧವಾದ ವೈದ್ಯ ಗ್ರಂಥವನ್ನೂ, ತತ್ತ್ವಾರ್ಥಸೂತ್ರಕ್ಕೆ ಸರ್ವಾರ್ಥಸಿದ್ಧಿ ಎಂಬ ವ್ಯಾಖ್ಯಾನ ಬರೆದಿದ್ದಾರೆ. ಜೈನೇಂದ್ರ ವ್ಯಾಕರಣ, ಶಬ್ದಾವತಾರ, ಛಂದಶ್ಶಾಸ್ತ್ರ, ವೈದ್ಯಸಾರ, ಇಷ್ಟೋಪದೇಶ, ಸಮಾಧಿಶತಕ, ಜಿನಾ

ಭಿಷೇಕ, ಸಿದ್ಧಭಕ್ತಿ, ಶಾಂತ್ಯಾಷ್ಟಕ ಇವರ ರಚನೆಗಳು. ಇವರು ಮೈಸೂರು ಜಿಲ್ಲೆಯ ಕನಕಗಿರಿ (ಮಲೆಯೂರು ಬೆಟ್ಟ)ಯಲ್ಲಿದ್ದು ಸಮಾಧಿಯಾದರು. ಇವರು ಜೈನಧರ್ಮದ ಏಳಿಗೆಗಾಗಿ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ.

**೮. ಜಿನಸೇನಾಚಾರ್ಯರು - ಕ್ರಿ.ಶ. ೮೦೦.**

ಇವರು ವೀರಸೇನಾಚಾರ್ಯರ ಶಿಷ್ಯರು. ವೀರಸೇನರು ಜಯಧವಲ ಗ್ರಂಥವನ್ನು ಬರೆಯುವಾಗಲೇ ಕಾಲವಾದರು, ಜಿನಸೇನರು ೪೦ ಸಹಸ್ರ ಶ್ಲೋಕ ಬರೆದು ಪೂರ್ತಿ ಮಾಡಿದರು. ಪಾರ್ಶ್ವಾಭ್ಯುದಯವೆಂಬುದು ಇವರ ಇನ್ನೊಂದು ಗ್ರಂಥ. ಇವರು ಅಮೋಘವರ್ಷ ಮಹಾರಾಜನ ಪ್ರಾರ್ಥನೆಯಂತೆ ಮಹಾಪುರಾಣವನ್ನು ಬರೆಯಲು ಪ್ರಾರಂಭಿಸಿ ಅದು ಅರ್ಧ ರಚನೆಯಾಗಿರುವಾಗಲೇ ಕಾಲವಾದರು. ಮಿಕ್ಕ ಭಾಗವನ್ನು ಇವರ ಶಿಷ್ಯರಾದ ಗುಣಭದ್ರಾಚಾರ್ಯರು ಬರೆದರು. ಜಿನಸೇನಾಚಾರ್ಯರು ಬರೆದ ಆದಿನಾಥರ ಕಥಾಭಾಗಕ್ಕೆ ಪೂರ್ವಪುರಾಣವೆಂತಲೂ, ಗುಣಭದ್ರಾಚಾರ್ಯರು ಬರೆದ ಭಾಗಕ್ಕೆ ಉತ್ತರಪುರಾಣವೆಂತಲೂ ಹೇಳುತ್ತಾರೆ. ಇದು ಸಂಸ್ಕೃತದ ಬೃಹತ್ ಗ್ರಂಥ. ಈ ಮಹಾಪುರಾಣವನ್ನು ಎ. ಶಾಂತಿರಾಜ ಶಾಸ್ತ್ರಿಗಳು ಕನ್ನಡಕ್ಕೆ ಅನುವಾದಿಸಿದ್ದಾರೆ.

**೯. ಚಾರಿತ್ರಚಕ್ರವರ್ತಿ ಆಚಾರ್ಯ ಶ್ರೀ ಶಾಂತಿಸಾಗರ ಮುನಿಮಹಾರಾಜರು**

ಶ್ರೀ ಶಾಂತಿಸಾಗರ ಮುನಿ ಮಹಾರಾಜರು ಬೆಳಗಾಂ ಜಿಲ್ಲೆಯ ಭೋಜ ಗ್ರಾಮದವರು. ಇವರ ತಂದೆ ಭೀಮಗೌಡರು, ತಾಯಿ ಸತ್ಯವತಿ. ಇವರ ಸುಪುತ್ರರಾಗಿ ೧೮೭೨ರಲ್ಲಿ ಶಾಂತಿಸಾಗರರು ಜನಿಸಿದರು. ಇವರ ಜನ್ಮನಾಮ ಸಾತಗೌಡ. ಇವರು ಜನ್ಮದಿಂದಲೇ ಉತ್ತಮ ಸಂಸ್ಕಾರವನ್ನು ಹೊಂದಿದ್ದರು. ಇವರಿಗೆ ಬಾಲ್ಯ ವಿವಾಹವಾಗಿತ್ತಾದರೂ ಸಂಸಾರ ಮಾಡಲಿಲ್ಲ. ಚಿಕ್ಕಂದಿನಲ್ಲೇ ತ್ಯಾಗಿಯಂತೆ ಬೆಳೆದರು. ೧೯೧೫ರಲ್ಲಿ ದೇವಪ್ಪಸ್ವಾಮಿಗಳಿಂದ ಕ್ಷುಲ್ಲಕ ದೀಕ್ಷಾಧಾರಿಗಳಾಗಿ ಶಾಂತಿಸಾಗರರೆಂದು ಕರೆಯಲ್ಪಟ್ಟರು. ಕೆಲದಿನಗಳಲ್ಲೇ ಗಿರಿನಾರ್‌ನಲ್ಲಿ ತಾವೇ ಸ್ವಯಂ ಐಲಕ ದೀಕ್ಷಾಧಾರಿಗಳಾದರು. ೧೯೨೦ರಲ್ಲಿ ದೇವೇಂದ್ರಕೀರ್ತಿ (ದೇವಪ್ಪಸ್ವಾಮಿಗಳು)ಗಳಿಂದ ದಿಗಂಬರ ದೀಕ್ಷಾಧಾರಿಗಳಾದರು. ಇವರು ಬಹುಕಾಲ ದೇಶದಾದ್ಯಂತ ವಿಹರಿಸಿದರು. ಧರ್ಮದಲ್ಲಿದ್ದ ಶಿಥಿಲಾಚಾರವನ್ನು ತಿದ್ದಿ ಪುನರಾತ್ಥಾನ ಮಾಡಿದರು. ಇವರು ಅನೇಕರಿಗೆ ದೀಕ್ಷೆ ನೀಡಿದರು. ಇವರ ಸಂಘ ದೊಡ್ಡದಾಗಿತ್ತು. ಈಗಿರುವ ಮುನಿಗಳೆಲ್ಲಾ ಹೆಚ್ಚು ಕಡಿಮೆ ಇವರ ಶಿಷ್ಯ ಪರಂಪರೆಯವರೇ ಆಗಿದ್ದಾರೆ.



ಇವರ ಪರಿಶುದ್ಧ ಚಾರಿತ್ರ ಪಾಲನೆಯಿಂದ ಚಾರಿತ್ರ ಚಕ್ರವರ್ತಿ ಎಂದು ಕರೆಯಲ್ಪಟ್ಟರು. ಇವರು ಶಾಸ್ತ್ರೋದ್ಧಾರ, ತೀರ್ಥಕ್ಷೇತ್ರ, ಜಿನಮಂದಿರಗಳ ಜೀರ್ಣೋದ್ಧಾರ ಕಾರ್ಯಗಳನ್ನು ಭಕ್ತಾದಿಗಳಿಂದ ಮಾಡಿಸಿದರು. ಇವರ ಅಣ್ಣಂದಿರೂ ಇವರಿಂದಲೇ ದೀಕ್ಷಾಧಾರಿಗಳಾಗಿ ವರ್ಧಮಾನಸಾಗರರೆನಿಸಿದ್ದರು. ಅನೇಕ ಉಪಸರ್ಗವನ್ನು ಸಹಿಸಿ ಘೋರ ತಪಸ್ಸು ಮಾಡಿದರು. ಕೊನೆಯಲ್ಲಿ ೧೯೫೫ರಲ್ಲಿ ಕುಂಥಲಗಿರಿಯಲ್ಲಿ ಸಲ್ಲೇಖನ ಸಹಿತ ಸಮಾಧಿಯಾದರು.

ಇವರ ಪರಂಪರೆಯಲ್ಲಿಯೇ ವೀರಸಾಗರರು. ಶಿವಸಾಗರರು, ಧರ್ಮಸಾಗರರು, ಪಾಯಸಾಗರರು, ದೇಶಭೂಶಣರೂ, ಜ್ಞಾನಸಾಗರರೂ, ಮಹಾವೀರಕೀರ್ತಿಗಳೂ, ವಿದ್ಯಾಸಾಗರರೂ, ವಿದ್ಯಾನಂದಿಗಳೂ, ಕುಂಥುಸಾಗರರೂ, ವರ್ಧಮಾನಸಾಗರರೂ, ಭರತಸಾಗರರೂ ಮುಂತಾದ ಹಲವು ಮಂದಿ ಮುನಿಗಳೂ ಆರ್ಯಿಕೆಯರೇ ಮುಂತಾದ ತ್ಯಾಗಿಗಳು ಈಗಲೂ ಜೈನ ಧರ್ಮವನ್ನು ಪ್ರಚಾರ ಮಾಡುತ್ತಿದ್ದಾರೆ.

*ನಷ್ಟ ಚತುರ್ಘಾತಿಕರ್ಮಾ ದರ್ಶನಸುಖ ಜ್ಞಾನ ವೀರ್ಯಮಯಃ ।*
*ಶುಭದೇಹಸ್ಯ ಆತ್ಮಾ ಶುದ್ಧ ಅರ್ಹದ್ವಿಚಿಂತನೀಯಃ ॥*

**ಅರ್ಥ :-** ನಾಲ್ಕು ಘಾತಿಕರ್ಮಗಳನ್ನು ನಾಶಮಾಡಿ ಅನಂತದರ್ಶನ, ಅನಂತಜ್ಞಾನ, ಅನಂತಸುಖ, ಅನಂತವೀರ್ಯ ಎಂಬ ಅನಂತಚತುಷ್ಟಯಗಳನ್ನು ಯಾರು ಪಡೆದುಕೊಂಡಿದ್ದಾರೋ, ಶುಭ ಶರೀರದಲ್ಲಿ ಸ್ಥಿತರಿದ್ದಾರೆಯೋ, ಹಸಿವೆ ಮೊದಲಾದ ಹದಿನೆಂಟು ದೋಷಗಳಿಂದ ರಹಿತರಾಗಿದ್ದಾರೋ, ಈ ಕಾರಣದಿಂದ ಶುದ್ಧರಾಗಿರುವ ಅರಹಂತ ಪರಮೇಷ್ಠಿಯು ಧ್ಯಾನಿಸಲು ಯೋಗ್ಯರಾಗಿದ್ದಾರೆ.

--- ಆಚಾರ್ಯ ನೇಮಿಚಂದ್ರ.

**ದೃಷ್ಟಂ ಜಿನೇಂದ್ರಭವನಂ ಭವತಾಪಹಾರಿ ।**
**ಭವ್ಯಾತ್ಮನಾಂ ವಿಭವಸಂಭವ ಭೂರಿಹೇತುಃ ।**
**ದುಗ್ಧಾಬ್ಧಿಫೇನ ಧವಲೋಜ್ವಲ ಕೂಟಕೋಟಿ ।**
**ನದ್ವಧ್ವಜ ಪ್ರಕರರಾಜಿ ವಿರಾಜಮಾನಮ್ ॥**

# ೭೬ ಕೆಲವು ಮಂದಿ ಕನ್ನಡ ಕವಿಗಳು

## ೧. ಕನ್ನಡದ ಹೆಸರಾಂತ ಕವಿಗಳಾರು ?

ಕನ್ನಡ ಸಾಹಿತ್ಯಕ್ಕೆ ಮತ್ತು ಧರ್ಮ ಪ್ರಭಾವನೆಗೆ ಕನ್ನಡ ಕವಿಗಳ ಕೊಡುಗೆ ಅಪಾರವಾದುದು. ಕನ್ನಡ ಸಾಹಿತ್ಯವು ಶ್ರೀಮಂತವಾಗಿ ಬೆಳೆದು ವಿಶ್ವಸಾಹಿತ್ಯ ಮಟ್ಟಕ್ಕೇರಲು ಜೈನ ಕವಿಗಳು ಬಹಳವಾಗಿ ಶ್ರಮಿಸಿದ್ದಾರೆ. ಪ್ರಾರಂಭದಿಂದಲೂ ಹಲವಾರು ಉತ್ತಮ ಕವಿಗಳು ಅಮೂಲ್ಯವಾದ ಗ್ರಂಥ ರಚನೆ ಮಾಡಿ ಧರ್ಮ ಮತ್ತು ಸಾಹಿತ್ಯ ಪ್ರಸಾರಮಾಡಿದ್ದಾರೆ. ಇವರಲ್ಲಿ ಕೆಲವರ ಪರಿಚಯವನ್ನು ಮಾಡಿಕೊಳ್ಳೋಣ.

### 1) ಪಂಪ ಮಹಾಕವಿ :-

''ಪಸರಿಪ ಕನ್ನಡಕ್ಕೆ ಒಡೆಯನೋರ್ವನೇ ಪಂಪನಾವಗಂ'' ಎಂಬಂತೆ ಕನ್ನಡ ಸಾಹಿತ್ಯವೆಂದರೆ ಪಂಪನ ಹೆಸರನ್ನು ಹೇಳಲೇಬೇಕು. ಕನ್ನಡ ಕವಿತಿಲಕ, ಕವಿತಾಗುಣಾರ್ಣವ, ಕವಿರತ್ನನೆನಿಸಿದ ಈತನ ಕಾಲ ಕ್ರಿ.ಶ. ೯೪೧. ಈತನ ತಂದೆ ಅಭಿರಾಮ ದೇವರಾಯ. ಈತ ಬ್ರಾಹ್ಮಣನಾದರೂ ಜೈನ ಧರ್ಮದ ಆದರ್ಶವಾದ ನೀತಿ, ನಿಯಮ, ನಡೆ-ನುಡಿಗಳಿಗೆ ಪ್ರಭಾವಿತನಾಗಿ ಜೈನ ಧರ್ಮವನ್ನು ಸ್ವೀಕರಿಸಿ, ಪಾಲಿಸಿದನು. ಆದ್ದರಿಂದ ಪಂಪನಲ್ಲಿ ಒಳ್ಳೆಯ ವಿದ್ಯೆ, ಸಂಸ್ಕಾರವಿತ್ತು. ವೆಂಗಿಮಂಡಳದ ವೆಂಗಿಪಳು ಎಂಬುದು ಈತನ ಊರು, ಕನ್ನಡ ಭಾಷೆಯಲ್ಲಿ ಚಂಪೂ ಕಾವ್ಯ ಪ್ರಸಿದ್ಧವಾದುದು. ಪಂಪನು ಚಂಪೂ ಕಾವ್ಯ ರಚನೆಯಲ್ಲಿ ಮೊದಲಿಗನು. ಆದ್ದರಿಂದ ಈತನಿಗೆ ಆದಿಕವಿ ಪಂಪನೆಂದೇ ಕರೆಯುವರು.

ಕರ್ನಾಟಕದ ಪ್ರಸಿದ್ಧ ರಾಜನಾಗಿದ್ದ ಅರಿಕೇಸರಿಯ ಆಸ್ಥಾನದಲ್ಲಿ ಮಂತ್ರಿ, ದಂಡನಾಯಕ, ಕವಿ, ಪಂಡಿತ ಆಗಿದ್ದನು. ಪಂಪನು ಆದಿಪುರಾಣವೆಂಬ ಧಾರ್ಮಿಕ ಕಾವ್ಯವನ್ನೂ ವಿಕ್ರಮಾರ್ಜುನವಿಜಯವೆಂಬ ಲೌಕಿಕ ಕಾವ್ಯವನ್ನೂ ಬರೆದಿದ್ದಾನೆ. ಆದಿ ಪುರಾಣದಲ್ಲಿ ವೃಷಭನಾಥರ ಕಥೆಯನ್ನೂ, ವಿಕ್ರಮಾರ್ಜುನ ವಿಜಯದಲ್ಲಿ ಮಹಾಭಾರತವನ್ನೂ ಬರೆದು, ಧರ್ಮ, ನೀತಿ, ನ್ಯಾಯ, ಲೌಕಿಕ, ರಾಜಕೀಯ ಮತ್ತು ಆ ಕಾಲದಲ್ಲಿನ ಸ್ಥಿತಿಗಳನ್ನು ಚಿತ್ರಿಸಿದ್ದಾನೆ. ಇವು ಹಳಗನ್ನಡದ ಕಾವ್ಯಗಳು. ಕವಿತಾ ಗುಣಾರ್ಣವ ಎಂಬುದು ಇವನ ಬಿರುದು.

**2) ರನ್ನಕವಿ :-** ಈತನ ಕಾಲ ಕ್ರಿ.ಶ. ೯೯೩. ಜಮಖಂಡಿಯ ಮುಧೋಳ ಎಂಬುದು ರನ್ನನ ಜನ್ಮಸ್ಥಳ. ಈತನ ತಂದೆ ಜಿನವಲ್ಲಭ, ತಾಯಿ ಅಬ್ಬಲಬ್ಬೆ, ಇವರು ಬಳೆ ವ್ಯಾಪಾರಿಗಳು. ರನ್ನನಿಗೆ ಚಾವುಂಡರಾಯನ ಸ್ನೇಹ ಮತ್ತು ಆಶ್ರಯ ದೊರಕಿತ್ತು. ಆದ್ದರಿಂದ ಅಜಿತಸೇನಾಚಾರ್ಯರ ಬಳಿ ವಿದ್ಯೆಯನ್ನು ಕಲಿತನು. ಮುಂದೆ ತೈಲಪ ರಾಜ ಸತ್ಯಾಶ್ರಯನ ಆಸ್ಥಾನ ಕವಿಯಾದನು. ಆಗ ದಾನಚಿಂತಾಮಣಿ ಅತ್ತಿಮಬ್ಬೆಯ ಕೃಪೆಗೆ ಪಾತ್ರನಾದನು. ತನ್ನ ಗ್ರಂಥಗಳಲ್ಲಿ ಅತ್ತಿಮಬ್ಬೆಯ ದಾನಗುಣಗಳನ್ನು ಕೊಂಡಾಡಿದ್ದಾನೆ. ಈತನು ಅಜಿತಪುರಾಣ, ಗಧಾಯುದ್ಧ, ಪರಶುರಾಮಚರಿತೆ, ಚಕ್ರೇಶ್ವರ ಚರಿತೆ ಎಂಬ ಗ್ರಂಥಗಳನ್ನು ಬರೆದಿದ್ದಾನೆ. ಈತನು ಕವಿಚಕ್ರವರ್ತಿ ಎಂಬ ಕೀರ್ತಿಯನ್ನು ಗಳಿಸಿದ್ದನು. ಪಂಪನ ಹಾಗೆ ಈತನೂ ಹಳಗನ್ನಡದ ಕವಿ ಮತ್ತು ಧಾರ್ಮಿಕ ಮತ್ತು ಲೌಕಿಕ ಗ್ರಂಥ ರಚನೆ ಮಾಡಿದನು.



**3) ಜನ್ನಕವಿ :** ಈತನ ಕಾಲ ಕ್ರಿ.ಶ. ೧೨೨೩. ಜನ್ನನ ತಂದೆ ಶಂಕರ, ತಾಯಿ ಗಂಗಾದೇವಿ. ಹೊಯ್ಸಳ ದೊರೆ ವೀರಬಲ್ಲಾಳನ ಮಂತ್ರಿಯೂ, ದಂಡಾಧೀಶನೂ ಆಗಿದ್ದನು. ಈತನಿಗೂ ಕವಿಚಕ್ರವರ್ತಿಯೆಂಬ ಹೆಸರಿತ್ತು. ಮುನಿ ರಾಮಚಂದ್ರ ಎಂಬುವರು ಈತನ ಗುರು. ಯಶೋಧರ ಚರಿತ್ರೆ ಮತ್ತು ಅನಂತನಾಥ ಪುರಾಣ ಇವನ ಕಾವ್ಯಗಳು. ಉದ್ದಂಡ ಕವಿ, ಕವಿಭಾಳಲೋಚನ, ಎಂಬ ಬಿರುದುಗಳಿದ್ದವು. ಯಶೋಧರ ಚರಿತ್ರೆಯಲ್ಲಿ ಸಂಕಲ್ಪ ಹಿಂಸೆಯಿಂದ ಆದ ಅನಾಹುತವನ್ನೂ, ಅನಂತ ಪುರಾಣದಲ್ಲಿ ಹದಿನಾಲ್ಕನೇ ತೀರ್ಥಂಕರರಾದ ಅನಂತನಾಥರ ಪುರಾಣವನ್ನೂ ತಿಳಿಸಿದ್ದಾನೆ. ಈತನು ಜೀವದಯೆಯೇ ಜೈನಧರ್ಮ ಎಂದು ಘೋಷಿಸಿದ್ದಾನೆ.

### 4) ಚಾವುಂಡರಾಯ : ಈತನ ಕಾಲ ಕ್ರಿ.ಶ. ೯೭೮.

ಜೈನ ಐತಿಹಾಸಿಕ ವ್ಯಕ್ತಿಗಳಲ್ಲಿ ವೀರಮಾರ್ತಾಂಡ ಚಾವುಂಡರಾಯನು ಪ್ರಸಿದ್ಧನಾದವನು. ತನ್ನ ತಾಯಿಯ ಪ್ರೇರಣೆಯಂತೆ, ಗುರು ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳ ಮಾರ್ಗದರ್ಶನದಂತೆ ಶ್ರವಣಬೆಳಗೊಳದ ಇಂದ್ರ ಗಿರಿಯ ಮೇಲೆ ಬಾಹುಬಲಿ ಸ್ವಾಮಿಯ ವಿಶಾಲ ಕಾಯದ ಅದ್ಭುತ ಮೂರ್ತಿಯನ್ನು ಮಾಡಿಸಿದ ಕೀರ್ತಿಯು ಈತನದು. ಗಂಗರಸ ರಾಚಮಲ್ಲನ ಮಂತ್ರಿ, ಸೇನಾಪತಿ ಆಗಿದ್ದನು. ಈತನು ಕಲಿಯೂ, ಕವಿಯೂ ಹೌದು. ಕನ್ನಡ, ಸಂಸ್ಕೃತ, ಪ್ರಾಕೃತಗಳಲ್ಲಿ ಪಾಂಡಿತ್ಯ ಗಳಿಸಿದ್ದನು. ಕನ್ನಡದಲ್ಲಿ ತ್ರಿಷಷ್ಠಿ ಲಕ್ಷಣ ಮಹಾಪುರಾಣ (ಚಾವುಂಡರಾಯ ಪುರಾಣ)ವನ್ನೂ ಸಂಸ್ಕೃತದಲ್ಲಿ ಚಾರಿತ್ರಸಾರವನ್ನೂ ಬರೆದಿದ್ದಾನೆ. ಈತನಿಗಾಗಿಯೇ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು

ಗೊಮ್ಮಟಸಾರವೆಂಬ ಗ್ರಂಥವನ್ನು ಪ್ರಾಕೃತ ಭಾಷೆಯಲ್ಲಿ ರಚಿಸಿದರು. ಚಾವುಂಡ ರಾಯನಿಗೆ ವೀರಮಾರ್ತಾಂಡ, ಸಮರದುರಂಧರ, ಛಲದಂಕಮಲ್ಲ, ಸಮರ ಪರಶುರಾಮ, ಕವಿಶೇಖರ ಎಂಬ ಬಿರುದುಗಳಿದ್ದವು. ಕೊನೆಯಲ್ಲಿ ದಿಗಂಬರ ದೀಕ್ಷೆ ಪಡೆದು, ಮುನಿಯಾಗಿ, ಸಮಾಧಿಮರಣ ಹೊಂದಿದನು.

5) **ನಾಗಚಂದ್ರ :** ಈತನ ಕಾಲ ಕ್ರಿ.ಶ. ೧೧೦೦. ಈತನ ಪೂರ್ಣ ಜೀವನ ಚರಿತ್ರೆ ಸಿಗುತ್ತಿಲ್ಲ. ಆದರೆ ವಿಜಯಪುರ (ವಿಜಾಪುರ)ದಲ್ಲಿ ಮಲ್ಲಿನಾಥ ಜಿನಾಲಯವನ್ನು ಕಟ್ಟಿಸಿ, ಮಲ್ಲಿನಾಥ ಪುರಾಣವನ್ನು ಬರೆದುದಾಗಿ ತಾನೇ ಹೇಳಿಕೊಂಡಿರುತ್ತಾನೆ. ಈತ ಹೊಯ್ಸಳ ರಾಜ ವಿಷ್ಣುವರ್ಧನನ ಆಸ್ಥಾನ ದಲ್ಲಿದ್ದು ನಂತರ ಚಾಳುಕ್ಯರ ಆಶ್ರಯವನ್ನು ಹೊಂದಿ ವಿಜಾಪುರಕ್ಕೆ ಹೋದನು. ಈತನೂ ಪಂಪಮಹಾಕವಿಯಂತೆಯೇ ಚಂಪೂ ಕಾವ್ಯಗಳನ್ನು ಬರೆದು ಅಭಿನವ ಪಂಪ ಎನಿಸಿಕೊಂಡನು. ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಎಂಬವು ಈತನ ಕೃತಿಗಳು. ರಾಮಚಂದ್ರಚರಿತ ಪುರಾಣವು ಜೈನ ರಾಮಾಯಣ, ಇದು ಪಂಪರಾಮಾಯಣವೆಂದೇ ಪ್ರಸಿದ್ಧವಾಗಿದೆ. ವಿಷ್ಣು ವರ್ಧನನ ಆಸ್ಥಾನದಲ್ಲಿದ್ದಾಗ ಕಂತಿ ಎಂಬ ಕವಯತ್ರಿಯು ಈತನಷ್ಟೇ ಪ್ರಸಿದ್ಧ ಳಾಗಿದ್ದಳು. ಇವರಿಬ್ಬರಿಗೂ ಯಾವಾಗಲೂ ಕಾವ್ಯಮಯವಾದ ವಿವಾದಗಳಾಗು ತ್ತಿದ್ದವು. ಅವು ಈಗಲೂ ಕಂತಿ-ಪಂಪರ ಸಮಸ್ಯೆಗಳೆಂದೇ ಪ್ರಸಿದ್ಧವಾಗಿವೆ.

6) **ನಯಸೇನ :** ಈತನ ಕಾಲ ಕ್ರಿ.ಶ. ೧೧೧೨. ಈತನು ಮಹಾ ಪಂಡಿತನೂ, ಕವಿಯೂ, ಮುನಿಯೂ ಆಗಿದ್ದನು. ಈತನ ಜೀವನದ ಬಗ್ಗೆ ಹೆಚ್ಚು ವಿವರ ದೊರೆತಿಲ್ಲವಾದರೂ ಮುಳಗುಂದ ಈತನ ಜನ್ಮಸ್ಥಳವೆಂದೂ, ನರೇಂದ್ರಸೇನ ಮುನಿಗಳು ಈತನ ಗುರುಗಳಾಗಿದ್ದರೆಂದೂ ತಿಳಿಯುತ್ತದೆ. ಈತನು ಧರ್ಮಾಮೃತವೆಂಬ ಗ್ರಂಥವನ್ನು ಬರೆದಿದ್ದಾನೆ. ಇದರಲ್ಲಿ ಸಮ್ಯಗ್ದರ್ಶನ ಮತ್ತು ಪಂಚಾಣುವ್ರತಕ್ಕೆ ಸಂಬಂಧಿಸಿದ ೧೪ ಕಥೆಗಳಿವೆ. ಈತನಿಗೆ ನಗೆಗಾರ ನಯಸೇನ, ಸುಕವಿನಿಕರಪಿಕಮಾಕಂದ, ಸುಕವಿಜನಮನಃ, ಪದ್ಮಿನೀರಾಜಹಂಸ, ದಿಗಂಬರದಾಸ, ನೂತ್ನಕವಿ ವಿಳಾಸ, ವಾತ್ಸಲ್ಯ ರತ್ನಾಕರ ಎಂಬ ಬಿರುದುಗಳಿದ್ದವು.

7) **ರತ್ನಾಕರಕವಿ :** ಈತನ ಕಾಲ ೧೫೫೭. ಈತನ ಜನ್ಮ ಸ್ಥಳ ಮೂಡು ಬಿದಿರೆ. ತಂದೆ ದೇವರಾಜ, ತಾಯಿ ಯಶಸ್ವತಿ. ಈತ ಬಹಳ ಪ್ರತಿಭಾಶಾಲಿಯಾದ ವಿದ್ವಾಂಸ. ಕಾರ್ಕಳದ ಭೈರವರಸನ ಆಸ್ಥಾನ ಕವಿಯಾಗಿದ್ದನು. ಆಗ ಭರತೇಶ ವೈಭವವೆಂಬ ಬೃಹದ್ ಗ್ರಂಥವನ್ನು ರಚಿಸಿ ಪ್ರಸಿದ್ಧನಾದನು. ಇದು ಸಾಂಗತ್ಯ



ಛಂದಸ್ಸಿನಲ್ಲಿದೆ. ಹೊಂಬುಜದ ಶ್ರೀ ದೇವೇಂದ್ರಕೀರ್ತಿಗಳು ಈತನ ಗುರುಗಳು. ಅಪರಾಜಿತೇಶ್ವರ ಶತಕ, ರತ್ನಾಕರಶತಕ, ತ್ರಿಲೋಕಶತಕ ಮತ್ತು ಸಾವಿರಾರು ಜಿನಭಕ್ತಿ ಗೀತೆಗಳನ್ನು ರಚಿಸಿದ್ದಾನೆ. ಈತನಿಗೆ ಶೃಂಗಾರಕವಿ, ರತ್ನಾಕರವರ್ಣಿ, ರತ್ನಾಕರ ಅಣ್ಣ ಎಂಬ ಹೆಸರುಗಳು ಇದ್ದವು. ಭರತೇಶವೈಭವದಿಂದ ಆರಿಸಿದ ಪದ್ಯಸಂಗ್ರಹವೇ ನಿರಂಜನಸ್ತುತಿ.

ಹೀಗೆಯೇ ಇನ್ನೂ ಹೆಸರಾಂತ ಜೈನ ಕವಿಗಳು ಬಹಳಮಂದಿ ಇದ್ದಾರೆ

**೨. ಇನ್ನೂ ಕೆಲವು ಕನ್ನಡ ಕವಿಗಳು ಮತ್ತು ಅವರು ರಚಿಸಿದ ಕಾವ್ಯಗಳಾವುವು ?**

| ಕವಿಗಳ ಹೆಸರು | ಕಾಲ ಕ್ರಿ.ಶ. | ಬರೆದಿರುವ ಕಾವ್ಯಗಳು |
|---|---|---|
| 1. ಗುಣವರ್ಮ | ಪಂಪಪೂರ್ವ ಯುಗ | ಹರಿವಂಶ-ಭುವನೈಕವೀರ |
| 2. ನೃಪತುಂಗ | ಕ್ರಿ.ಶ. ೮೧೪ | ಕವಿರಾಜಮಾರ್ಗ |
| 3. ಶಿವಕೋಟಿ | ಕ್ರಿ.ಶ. ೯೨೦ | ವಡ್ಡಾರಾಧನೆ |
| 4. ಪಂಪಮಹಾಕವಿ | ಕ್ರಿ.ಶ. ೯೪೧ | ಆದಿಪುರಾಣ, ಪಂಪಭಾರತ |
| 5. ಪೊನ್ನಕವಿ | ಕ್ರಿ.ಶ. ೯೫೦ | ಶಾಂತಿನಾಥಪುರಾಣ |
| 6. ರನ್ನಕವಿ | ಕ್ರಿ.ಶ. ೯೯೩ | ಅಜಿತಪುರಾಣ, ರನ್ನಕಂದ ಚಕ್ರೇಶ್ವರಿ ಚರಿತೆ, ಸಾಹಸಭೀಮ ವಿಜಯ |
| 7. ಶಾಂತಿನಾಥ | ಕ್ರಿ.ಶ. ೧೦೬೮ | ಸುಕುಮಾರಚರಿತೆ |
| 8. ನಾಗಚಂದ್ರ | ಕ್ರಿ.ಶ. ೧೧೦೦ | ಮಲ್ಲಿನಾಥಪುರಾಣ ರಾಮಚಂದ್ರಚರಿತ ಪುರಾಣ |
| 9. ನಯಸೇನ | ಕ್ರಿ.ಶ. ೧೧೧೨ | ಧರ್ಮಾಮೃತ |
| 10. ಬ್ರಹ್ಮಶಿವ | ಕ್ರಿ.ಶ. ೧೧೧೨ | ಸಮಯಪರೀಕ್ಷೆ ತ್ರೈಲೋಕ್ಯಚೂಡಾಮಣಿ |
| 11. ಕರ್ಣಪಾರ್ಯ | ಕ್ರಿ.ಶ. ೧೧೪೦ | ನೇಮಿನಾಥಪುರಾಣ |
| 12. ಪದ್ಮಣಾಂಕ | ಕ್ರಿ.ಶ. ೧೪೦೦ | ಪದ್ಮರಾಜಪುರಾಣ |
| 13. ನೇಮಿಚಂದ್ರ | ಕ್ರಿ.ಶ. ೧೨೦೦ | ನೇಮಿನಾಥಪುರಾಣ |

| | | | |
|---|---|---|---|
| 14. | ಪಾರ್ಶ್ವನಾಥ ಪಂಡಿತರು | ಕ್ರಿ.ಶ. ೧೨೦೫ | ಪಾರ್ಶ್ವನಾಥಪುರಾಣ |
| 15. | ಬೊಪ್ಪಣಪಂಡಿತ | ಕ್ರಿ.ಶ. ೧೨೦೦ | ನಿರ್ವಾಣಲಕ್ಷ್ಮೀಪತಿ<br>ಗೊಮ್ಮಟಸ್ತುತಿ |
| 16. | ಅಗ್ಗಳ | ಕ್ರಿ.ಶ. ೧೨೦೦ | ಚಂದ್ರಪ್ರಭಪುರಾಣ |
| 17. | ಆಚಣ್ಣ | ಕ್ರಿ.ಶ. ೧೨೦೦ | ವರ್ಧಮಾನಪುರಾಣ |
| 18. | ಬಂಧುವರ್ಮ | ಕ್ರಿ.ಶ. ೧೨೦೦ | ಜೀವಸಂಬೋಧನೆ |
| 19. | ಪಾರ್ಶ್ವಪಂಡಿತ | ಕ್ರಿ.ಶ. ೧೨೨೫ | ಪಾರ್ಶ್ವನಾಥಪುರಾಣ |
| 20. | ಜನ್ನ | ಕ್ರಿ.ಶ. ೧೨೨೫ | ಯಶೋಧರ ಚರಿತೆ<br>ಅನಂತನಾಥಪುರಾಣ |
| 21. | 2ನೇ ನಾಗವರ್ಮ | ಕ್ರಿ.ಶ. ೧೨೨೫ | ಪುಷ್ಪದಂತಪುರಾಣ<br>ಚಂದ್ರನಾಥಪುರಾಣ |
| 22. | ಮಹಾಬಲ | ಕ್ರಿ.ಶ. ೧೨೫೪ | ನೇಮಿನಾಥಪುರಾಣ |
| 23. | ನಾಗರಾಜ | ಕ್ರಿ.ಶ. ೧೩೩೧ | ಪುಣ್ಯಾಸ್ರವ |
| 24. | ಬಾಹುಬಲಿಪಂಡಿತ | ಕ್ರಿ.ಶ. ೧೩೫೨ | ಧರ್ಮನಾಥಪುರಾಣ |
| 25. | ಮಧುಕರಕವಿ | ಕ್ರಿ.ಶ. ೧೩೮೫ | ಧರ್ಮನಾಥಪುರಾಣ |
| 26. | ಮಂಗರಾಜ | ಕ್ರಿ.ಶ. ೧೩೬೦ | ಖಗೇಂದ್ರಮಣಿದರ್ಪಣ |
| 27. | ಭಾಸ್ಕರ | ಕಿ.ಶ. ೧೪೨೫ | ಜೀವಂಧರ ಚರಿತೆ |
| 28. | ಕಲ್ಯಾಣಕೀರ್ತಿ | ಕ್ರಿ.ಶ. ೧೪೩೯ | ಜ್ಞಾನಚಂದ್ರಾಭ್ಯುದಯ<br>ಅನುಪ್ರೇಕ್ಷೆ , ಜಿನಸ್ತುತಿ<br>ತತ್ತ್ವಭೋದಾಷ್ಟಕ,<br>ಜ್ಞಾನಾಭ್ಯುದಯ |
| 29. | ರತ್ನಾಕರವರ್ಣಿ | ಕ್ರಿ.ಶ. ೧೪೫೭ | ಭರತೇಶವೈಭವ<br>ಶತಕತ್ರಯ,ರತ್ನಾಕರಗೀತೆಗಳು |
| 30. | ವಿಜಯಣ್ಣ | ಕ್ರಿ.ಶ. ೧೪೫೨ | ದ್ವಾದಶಾನುಪ್ರೇಕ್ಷೆ |
| 31. | ಶಿಶುಮಾಯಣ | ಕ್ರಿ.ಶ. ೧೪೭೨ | ಅಂಜನಾ ಚರಿತ್ರೆ |



| | | | |
|---|---|---|---|
| | | | ತ್ರಿಪುರದಹನ ಸಾಂಗತ್ಯ |
| 32. | ತೆರಕಣಾಂಬಿಯ ಬೊಮ್ಮರಸ | ಕ್ರಿ.ಶ. ೧೪೮೫ | ಸನತ್ಕುಮಾರಚರಿತ್ರೆ<br>ಜೀವಂಧರ ಸಾಂಗತ್ಯ |
| 33. | 3ನೇ ಮಂಗರಸ | ಕ್ರಿ.ಶ. ೧೫೦೮ | ಜಯನೃಪಕಾವ್ಯ<br>ಜಿನೇಶಸಂಗತಿ<br>ಶಿಶುಪಾಲಚರಿತೆ<br>ಪ್ರಭಂಜನಚರಿತೆ<br>ಸಮ್ಯಕ್ತ್ವಕೌಮುದಿ, ಸೂಪಶಾಸ್ತ್ರ |
| 34. | ಸಾಳ್ವ | ಕ್ರಿ.ಶ. ೧೫೬೦ | ಸಾಳ್ವಭಾರತ |
| 35. | ಭಟ್ಟಾಕಳಂಕ | ಕ್ರಿ.ಶ. ೧೬೦೪ | ಶಬ್ದಾನುಶಾಸನ |
| 36. | ಧರಣಿಪಂಡಿತ | ಕ್ರಿ.ಶ. ೧೬೫೦ | ವರಾಂಗನೃಪಚರಿತೆ<br>ಬಿಜ್ಜಳರಾಯಚರಿತೆ |
| 37. | ದೇವಚಂದ್ರ | ಕ್ರಿ.ಶ. ೧೭೭೦ | ರಾಜಾವಳಿಕಥೆ |
| 38. | ದೊಡ್ಡಣಾಂಕ | ಕ್ರಿ.ಶ. | ಚಂದ್ರಪ್ರಭಪುರಾಣ |
| 39. | ಚಂದಸಾಗರವರ್ಣಿ | | ರಾಮಾಯಣ |
| 41. | ಬೊಮ್ಮಣ್ಣಬಿದಿರೆ | ಕ್ರಿ.ಶ. ೧೮೦೦ | ನಾಗಕುಮಾರಚರಿತೆ |

***ನವಪುಣ್ಯೈಃ ಪ್ರತಿಪತ್ತಿಃ ಸಪ್ತಗುಣಸಮಾಹಿತೇ ಶುದ್ಧೇನ ।***
***ಅಪಸೂನಾರಂಭಾಣಾ-ಮಾರ್ಯಾಣಾಮಿಷ್ಯತೇ ದಾನಮ್ ॥೧೧೩॥***

ಅರ್ಥ:- ದಾತಾರನು ಸಪ್ತಗುಣ ಸಹಿತ, ನವಧಾಭಕ್ತಿಯುಕ್ತನಾಗಿ, ಏಕಾಂತವಿಲ್ಲದ, ಸಮ್ಯಗ್ದರ್ಶನಯುಕ್ತನಾಗಿ, ಏಕಾಂತವಿಲ್ಲದ, ಆರಂಭವಿಲ್ಲದ, ಸಮ್ಯಗ್ದರ್ಶನ ಧಾರಕ ಮುನಿಗಳಿಗೆ ನವಪುಣ್ಯಪರಿಣಾಮಗಳೊಡನೆ ಎಂದರೆ ಆದರಪೂರ್ವಕ ಗೌರವಸಹಿತ ಅಂಗೀಕಾರ ಮಾಡುತ್ತಾರೆ ಅದನ್ನು ದಾನವೆಂದು ಹೇಳುತ್ತಾರೆ.- ರತ್ನಕರಂಡ ಶ್ರಾ. ಚಾರ.

*ತನು ಜಿನಗೇಹ ಮನ ಸಿಂಹಪೀಠ*
*ವನು ಪರಮಾತ್ಮನೆ ಜಿನನೆಂದು*
*ನೆನಹನೆಲ್ಲವ ಬಿಟ್ಟು ಕಣ್ಮುಚ್ಚಿ ನೋಳ್ಪಾಗ*
*ಜಿನನಾಥ ತೋರುವನೊಳಗೆ ॥* -- ಭರತೇಶವೈಭವ.

# ೭೭ ಕೆಲವು ಆದರ್ಶ ಜೈನ ಮಹಿಳೆಯರು

ಮನುಷ್ಯ ಭವವು ಎಲ್ಲಾ ಭವಗಳಿಗಿಂತಲೂ ಶ್ರೇಷ್ಠವಾಗಿದೆ, ಎನ್ನುವುದನ್ನು ಜೈನಧರ್ಮವು ಸಾರುತ್ತಲೇ ಇದೆ. ಸಂಸಾರದಲ್ಲಿ ಸ್ತ್ರೀ-ಪುರುಷರಿಬ್ಬರೂ ಒಂದು ನಾಣ್ಯದ ಎರಡು ಮುಖಗಳಿದ್ದಂತೆ. ಜೈನಧರ್ಮವು ಮಹಿಳೆಯರಿಗೆ ಕೊಟ್ಟಿರುವ ಸ್ಥಾನಮಾನಗಳು ಗಮನಾರ್ಹ. ಈ ಧರ್ಮದಲ್ಲಿ ನಡೆದುಬಂದಿರುವ ಅನೇಕ ಮಹಿಳೆಯರಲ್ಲಿ ಪೌರಾಣಿಕ ದೃಷ್ಟಿಯಿಂದ ಮಾತೆ ತ್ರಿಶಲಾದೇವಿ, ಬ್ರಹ್ಮಚಾರಿಣಿ ಚಂದನಬಾಲೆಯನ್ನೂ, ಐತಿಹಾಸಿಕವಾಗಿ ಕಾಳಲಾದೇವಿ, ಅತ್ತಿಮಬ್ಬೆಯನ್ನೂ, ಈ ಆಧುನಿಕ ಯುಗದಲ್ಲಿ ಧರ್ಮಸ್ಥಳದ ರತ್ನಮ್ಮ ಹೆಗ್ಗಡತಿ ಇವರನ್ನೂ ಪರಿಚಯಿಸುವುದು ಪ್ರಸ್ತುತವಿದೆ.

## ೧. ಮಾತೆ ತ್ರಿಶಲಾದೇವಿ :

ಹೆಣ್ಣು ಮಡದಿಯಾಗಿ, ತಾಯಿಯಾಗಿ, ಸೋದರಿಯಾಗಿ, ಸಂಸಾರಿಯಾಗಿ, ಸಂಸಾರದ ಸುಖ-ದುಃಖವನ್ನು ನಶ್ವರತೆಯನ್ನು ಕುರಿತು ಆ ದುಃಖವನ್ನು ದೂರಮಾಡುವ ಉಪಾಯವನ್ನು ಜಗದ ಜೀವಿಗಳಿಗೆ ತಿಳಿಸಿ ಹೇಳುವ ಪುತ್ರನನ್ನು ಪಡೆದು, ತಾನೂ ಆದರ್ಶಳಾಗಿ ಬಾಳಿ ಮನುಷ್ಯ ಭವವನ್ನು ಸಾರ್ಥಕ ಪಡಿಸಿಕೊಳ್ಳುವ ಮಹಿಳೆಯರು ಅತಿ ವಿರಳ.

ಜಗತ್ತಿನ ಅಜ್ಞಾನಾಂಧಕಾರವನ್ನು ಹೋಗಲಾಡಿಸಲು ಉದಯಿಸುವ ಸೂರ್ಯನೂ, ಅಲ್ಪಕಾಲ ಉದಯಿಸಿ ಮತ್ತೆ ಅಸ್ತಂಗತನಾಗುವನು. ಇದು ಜೀವಿಗಳ ನಶ್ವರತೆಯ ಪ್ರತೀಕ. ಈ ನಶ್ವರತೆಯನ್ನು, ಅಜ್ಞಾನಾಂಧಕಾರವನ್ನು ನಾಶ ಮಾಡಿ ಎಲ್ಲಾ ಜೀವಿಗಳೂ ಸದಾ ಆತ್ಮ ಪ್ರಕಾಶದಲ್ಲಿ ಬೆಳಗುವಂತಾಗಲಿ ಎಂಬ ಉದ್ದೇಶವುಳ್ಳವರಾಗಿ ತಾವೂ ಸ್ವತಃ ಕರ್ಮಗಳ ಕ್ಷಯ ಮಾಡಿಕೊಳ್ಳುವುದಲ್ಲದೆ, ಮಹಾಪುರುಷರಾಗಿ, ದಾರಿದೀಪವಾಗಿ ಬೆಳಗಿ ಬಂದವರು ಜಿನರು. ಇಂತಹ ಜೀವಿಗಳ ದಾರಿದೀಪವಾಗಿ ಜಿನರಾದ ಮಹಾವೀರರಿಗೆ ಜನ್ಮವಿತ್ತ ಮಾತೆಯೇ ತ್ರಿಶಲಾದೇವಿ. ಆದ್ದರಿಂದಲೇ ಈ ತಾಯಿ ಪೂಜನೀಯಳೂ ಹಾಗೂ ಇತರರಿಗೆ ಮಾರ್ಗದರ್ಶಕಳೂ ಕೂಡ.

ಸುಮಾರು ೨೬೩೦ ವರ್ಷಗಳ ಹಿಂದೆ ವೈಶಾಲಿಯ ಲಿಚ್ಛವಿ ವಂಶದ ರಾಜ ಚೇಟಕನ ಹಿರಿಯ ಮಗಳೇ ತ್ರಿಶಲಾದೇವಿ. ಈಕೆಗೆ ಪ್ರಿಯಕಾರಿಣಿ ಎಂಬ ಹೆಸರೂ ಇತ್ತು. ಈಕೆ ಕುಂಡಲಪುರದ ಸಿದ್ಧಾರ್ಥ ಮಹಾರಾಜನ ಪತ್ನಿ. ಇಲ್ಲಿಗೆ



೨೬೦೦ ವರ್ಷಗಳ ಹಿಂದೆ ಅಂತಿಮ ತೀರ್ಥಂಕರರಾದ ಭಗವಾನ್ ಮಹಾವೀರರ ತಾಯಿ. ಈ ಮಹಾಸ್ವಾಮಿಯ ತಾಯಿಯಾದ ಈಕೆ ದೇವ ಮಾನವರಿಂದ ಪೂಜಿತಳಾಗಿ ಜಗಜ್ಜನನಿ ಎನಿಸಿದಳು. ಇಂತಹ ಮಹಾಪುರುಷನ ಜನನಕ್ಕೆ ಕಾರಣಳಾಗಿದ್ದರಿಂದ ತ್ರಿಶಲೆ ಸಾಮಾನ್ಯ ಸ್ತ್ರೀಯಲ್ಲ. ಕೆಲ ಭವಗಳಲ್ಲಿ ಮುಕ್ತಿಯನ್ನು ಪಡೆಯಲಿರುವ ಪುಣ್ಯಜೀವಿ. ತ್ರಿಶಲಾ ಅನೇಕ ಭವಗಳ ಪುಣ್ಯದ ಫಲವನ್ನು ಹೊತ್ತುತಂದು ಈ ಜಗದ ಅಜ್ಞಾನಾಂಧಕಾರವನ್ನು ಹೋಗಲಾಡಿಸುವ ಈ ಸೂರ್ಯನನ್ನು ಬೆಳಗಿಸಿ ನಮ್ಮ ನಿಮ್ಮೆಲ್ಲರ ಮನದಲ್ಲಿ ಧರ್ಮದ ಅಂಕುರವನ್ನು ಉಂಟು ಮಾಡಲು ಕಾರಣಳಾದ ಈ ತಾಯಿ ತ್ರಿಶಲೆಯ ಬದುಕು ಸ್ಮರಣೀಯ. ಈ ವರ್ತಮಾನ ಕಾಲದ ಅಂತಿಮ ತೀರ್ಥಂಕರರ ಜನ್ಮದಾತೆ ಈ ತ್ರಿಶಲಾದೇವಿ. ನಾರಿ ಶಿರೋಮಣಿಯಾಗಿ ಬಾಳಿ ಬೆಳಗಿ ಆದರ್ಶ ಮಾತೆ ಆಗಿದ್ದಾಳೆ.

## ೨. ಚಂದನ ಬಾಲಾ :

ಹೆಸರಿಗೆ ತಕ್ಕಂತೆ ಚಂದನಬಾಲೆ ಚಂದನದ ಬೊಂಬೆಯಂತೆ ಸುಂದರ ರೂಪವನ್ನು ಪಡೆದು, ಆ ಸುಂದರ ರೂಪದಲ್ಲೇ ಅನೇಕ ತೊಂದರೆಗಳನ್ನು ಅನುಭವಿಸಿಯೂ ಧರ್ಮವನ್ನು ಬಿಡದೆ, ಶೀಲವತಿಯಾಗಿ, ಬಾಲಬ್ರಹ್ಮಚಾರಿಣಿಯಾಗಿ, ಬ್ರಹ್ಮಚರ್ಯೆಯಲ್ಲಿ ಮಿಂದವಳು ಚಂದನೆ.

ಈ ಹಿಂದೆ ಹೇಳಿದ ತ್ರಿಶಲೆಯ ಕಿರಿಯ ಸೋದರಿ ಚಂದನೆ. ಚೇಟಕರಾಜ ಹಾಗೂ ಆತನ ಪತ್ನಿ ಸುಭದ್ರಾದೇವಿಗೆ ಹತ್ತು ಮಂದಿ ಗಂಡು ಮಕ್ಕಳೂ, ಏಳು ಮಂದಿ ಹೆಣ್ಣುಮಕ್ಕಳೂ ಇದ್ದರು. ಇವರಿಗೆ ಚಂದನೆಯೇ ಕೊನೆಯವಳು. ಇವಳಿಗೆ ಯಶಸ್ವತಿಯೆಂಬ ಆರ್ಯಿಕೆಯ ಬಳಿ ಧರ್ಮದ ಅಭ್ಯಾಸವು ಚೆನ್ನಾಗಿ ಆಗಿತ್ತು. ಆದ್ದರಿಂದಲೇ ಇವಳು ದೃಢವಾದ ಸಮ್ಯಗ್ದೃಷ್ಟಿಯಾಗಿ, ಜೀವನದಲ್ಲಿ ಕರ್ಮವಿಶೇಷದಿಂದ ಬಂದೊದಗಿದ ಸಂಕಷ್ಟಗಳನ್ನು ಗೆದ್ದು ಪಾರಾದಳು.

ಒಮ್ಮೆ ಮನೋವೇಗನೆಂಬ ಖೇಚರನು ಚಂದನೆಯನ್ನು ಕಂಡು ಇವಳ ರೂಪಕ್ಕೆ ಮರುಳಾಗಿ, ಇವಳನ್ನು ಕದ್ದು ಕರೆದುಕೊಂಡು ಹೋಗುತ್ತಿರಲು, ವಿಷಯ ತಿಳಿದ ಈತನ ಪತ್ನಿ ಹಿಂಬಾಲಿಸಿ ಬರಲು, ಪತ್ನಿಗೆ ಹೆದರಿದ ಖೇಚರನು ಚಂದನೆಯನ್ನು ಭೂತರಮಣವೆಂಬ ಅರಣ್ಯದಲ್ಲಿ ಇಳಿಸಿ ಹೋಗುವನು. ಚಂದನೆಯು ಜಿನೇಶ್ವರರ ಪಾದವೇ ಗತಿ ಎಂದಿರಲು ಅಲ್ಲಿಗೆ ಬಂದ ಕಾಳನೆಂಬ ಬೇಡನು ಈಕೆಯನ್ನು ಬೇಡರ ನಾಯಕನಿಗೆ ಒಪ್ಪಿಸುವನು. ಇವನೂ ಅವಳ ರೂಪಿಗೆ ಮರುಳಾಗಿ ಬಲಾತ್ಕರಿಸಲು ಬಂದನು. ವಿಷಯ ತಿಳಿದ ಇವನ

ತಾಯಿಯು ಅಲ್ಲಿಗೆ ಬಂದು ಅವಳ ಸೌಂದರ್ಯ ಕಂಡು ಅವಳನ್ನು ದೇವತೆಯೆಂದೇ ಭಾವಿಸಿ, ಪುತ್ರನಿಗೆ ಬುದ್ಧಿ ಹೇಳಿದಳು. ಆಗ ಅವನು ಚಂದನೆಯನ್ನು ಒಬ್ಬ ವೈಶ್ಯನಿಗೆ ಒಪ್ಪಿಸುವನು. ಆ ವೈಶ್ಯನು ಅವಳನ್ನು ತನ್ನ ಮಗಳಂತೆ ಭಾವಿಸಿದರೂ ಅವನ ಪತ್ನಿ ಸುಭದ್ರೆಯು ಅವಳಲ್ಲಿ ಸಂಶಯಗೊಂಡು ಅವಳನ್ನು ಆಳಿನಂತೆ ನಡೆಸಿಕೊಂಡಳು. ಕೊನೆಗೆ ತಲೆ ಬೋಳಿಸಿ, ಬೇಡಿ ತೊಡಿಸಿ ಬಂಧನದಲ್ಲಿಟ್ಟಳು. ಇಷ್ಟೆಲ್ಲಾ ತೊಂದರೆಗೆ ಸಿಲುಕಿದರೂ ಈ ಚಂದನೆ ತನ್ನ ಶೀಲವನ್ನು ಕಾಪಾಡಿಕೊಂಡು ಸದಾ ಜಿನೇಶ್ವರರ ಚಿಂತನೆಯಲ್ಲಿಯೇ ಇದ್ದು ಎಲ್ಲಾ ಕಷ್ಟಗಳನ್ನೂ ಸಹಿಸಿದಳು. ಕೊನೆಗೆ ಮಹಾವೀರರಿಗೆ ಆಹಾರದಾನವನ್ನು ಮಾಡುವ ಸಮಯದಲ್ಲಿ ಬಂಧ ಮುಕ್ತಳಾದಳು. ಆಗ ಪಂಚಾಶ್ಚರ್ಯಗಳಾದವು. ಇಷ್ಟೆಲ್ಲಾ ಕಷ್ಟವನ್ನು ಅನುಭವಿಸಿದ ಚಂದನೆ ಮದುವೆಯಾಗಿ ಮತ್ತೆ ಸಂಸಾರಕ್ಕೆ ಬರಲಿಲ್ಲ. ಸಂಸಾರ ಶರೀರ ವೈಭವದಲ್ಲಿ ವೈರಾಗ್ಯಹೊಂದಿ, ದೀಕ್ಷೆ ಪಡೆದು, ಮಹಾವೀರರ ಸಮವಸರಣದಲ್ಲಿ ಆರ್ಯಿಕೆಯರ ಗಣಕ್ಕೆ ಮುಖಂಡಳಾಗಿ ರಾರಾಜಿಸಿದಳು. ಈ ಕಥೆಯ ತಾತ್ಪರ್ಯವೇನೆಂದರೆ ಎಂಥಹ ಕಷ್ಟದಲ್ಲೂ ಧರ್ಮವನ್ನು ಬಿಡದೆ, ಧೈರ್ಯ ಮತ್ತು ದೈವಭಕ್ತಿಯಿಂದ ಶೀಲವನ್ನು ಕಾಪಾಡಿಕೊಂಡು, ನಾರೀ ರತ್ನರೆನಿಸಬೇಕು.

**೩. ಕಾಳಲಾದೇವಿ :**

ಜಗತ್ತಿನ ಕಲಾ ಸಂಪತ್ತಿನಲ್ಲಿ ಶಿಲ್ಪಕಲೆಯೂ ಒಂದು. ಈ ಶಿಲ್ಪಕಲೆಯಲ್ಲಿಯೇ ಒಂದು ಮಹತ್ತರವಾದ ಜೀವಕಳೆ ತುಂಬಿದ ಒಂದು ಕಲಾಕೃತಿಯಾಗಲು ಸ್ಫೂರ್ತಿದಾಯಕವಾಗಿ ಬೃಹದ್ ಗೊಮ್ಮಟನ ಮೂರ್ತಿಯ ನಿರ್ಮಾಣಕ್ಕೆ ಕಾರಣಳಾದಳು ಕಾಳಲಾದೇವಿ. ಗಂಗ ಸಾಮ್ರಾಜ್ಯದ ಮಹಾಪ್ರಧಾನಿ, ಮಹಾದಂಡನಾಯಕ ಚಾವುಂಡರಾಯ ಹಾಗೂ ಕಾಳಲಾದೇವಿಯರ ಬದುಕು ಚಿರಸ್ಥಾಯಿ.

ಚಾವುಂಡರಾಯನ ತಾಯಿಯೇ ಕಾಳಲಾದೇವಿ. ಮಗನ ಬಹುಮುಖ ಪ್ರತಿಭೆಗೆ ಕಾರಣಳಾದ ಇವಳು ದಿನನಿತ್ಯ ಜಿನ ಪೂಜೆ, ಮುನಿಜನರ ಸೇವೆ, ಸ್ವಾಧ್ಯಾಯ ಇತ್ಯಾದಿ ಧರ್ಮಕಾರ್ಯದಲ್ಲಿಯೇ ನಿರತಳಾಗಿದ್ದರೂ, ಮಗನಿಗೂ ಮಾರ್ಗದರ್ಶಕಳಾಗಿದ್ದಳು.

ಒಮ್ಮೆ ಕಾಳಲಾದೇವಿಯು ಅಜಿತಸೇನರೆಂಬ ಮುನಿಗಳ ಬಳಿ ಮಹಾಪುರಾಣವನ್ನು ಕೇಳುತ್ತಿರಲು ಅದರಲ್ಲಿ ಬರುವ ಭರತ-ಬಾಹುಬಲಿಯರ



ಯುದ್ಧಾ ನಂತರ ಬಾಹುಬಲಿಯು ದೀಕ್ಷಿತನಾಗಿ ಮೋಕ್ಷವನ್ನು ಪಡೆಯಲು, ಸೋದರ ಭರತನು ಅವರ ಪ್ರತೀಕವಾಗಿ ಕೈಲಾಸಗಿರಿಯಲ್ಲಿ ಸುವರ್ಣ ಮೂರ್ತಿಯನ್ನು ಮಾಡಿಸಿ ಪ್ರತಿಷ್ಠಾಪಿಸಿದನು. ಎಂಬ ವಿಷಯವನ್ನು ಕೇಳಿದ ಕಾಳಲಾದೇವಿಗೆ ಆ ಮೂರ್ತಿಯ ದರ್ಶನ ಮಾಡುವ ಅಭಿಲಾಷೆಯಾಯಿತು. ಇದು ದಿನೇದಿನೇ ವೃದ್ಧಿಯಾಗಿ ಊಟ ಉಪಚಾರಗಳು ಸೇರದಂತಾದವು. ಹಾಗೂ ಮಾತು ಕಡಿಮೆಯಾಯಿತು. ಹೀಗಾಗಲು ಕಾರಣವಾದ ವಿಷಯವನ್ನು ತಿಳಿದ ಚಾವುಂಡರಾಯನು ದಿಕ್ಕು ತೋಚದವನಂತಾದನು. ಅಜಿತಸೇನರನ್ನು ಕಂಡು ವಿಷಯ ತಿಳಿಸುತ್ತಾನೆ. ಆಗ ಅವರು ಕಟವಪ್ರ ಕಳ್ವಪ್ಪುವೆಂದು ಹೆಸರಾಗಿದ್ದ ಈಗಿನ ಶ್ರವಣಬೆಳಗೊಳಕ್ಕೆ ಹೋಗಿ ಅಲ್ಲಿ ನೆಲೆಸಿದ್ದ ನೇಮಿಚಂದ್ರಾಚಾರ್ಯರನ್ನು ಭೇಟಿ ಮಾಡುವಂತೆ ಹೇಳುತ್ತಾರೆ. ಧರ್ಮದಲ್ಲಿ ನಂಬಿಕೆಯುಳ್ಳ ಚಾವುಂಡರಾಯನು ಮುನಿಗಳ ಮಾತಿನಂತೆ ತನ್ನ ತಾಯಿಯೊಡಗೂಡಿ ಕಳ್ವಪ್ಪುವಿಗೆ ಬಂದು ಅದರಲ್ಲಿರುವ ಚಂದ್ರಗಿರಿಯ ಚಂದ್ರಗುಪ್ತ ಬಸದಿಯಲ್ಲಿದ್ದ ನೇಮಿಚಂದ್ರಾಚಾರ್ಯರನ್ನು ದರ್ಶನ ಮಾಡಿ ವಿಷಯವನ್ನು ತಿಳಿಸುವನು. ಕಾಳಲಾದೇವಿಯ ಧರ್ಮನಿಷ್ಠೆಯನ್ನು ತಿಳಿದ ಮುನಿಗಳು ಈ ಪುಣ್ಯಕ್ಷೇತ್ರದಲ್ಲಿ ನಿನ್ನ ತಾಯಿಯ ಅಭೀಷ್ಟವು ನೆರವೇರುವುದೆಂದು ಧರ್ಮ ಬೋಧನೆ ಮಾಡಿದರು. ಅವರ ಬೋಧಾಮೃತವನ್ನೇ ಪಾನ ಮಾಡುತ್ತಾ ಮಲಗಿದರು. ಅವರಿಗೂ ಮತ್ತು ಮುನಿಗಳಿಗೂ ರಾತ್ರಿ ಕನಸಿನಲ್ಲಿ ಕೈಲಾಸಗಿರಿಯು ಈಗ ಕುಕ್ಕುಟ ಸರ್ಪಗಳಿಂದ ಆವೃತವಾಗಿದ್ದು ಅಲ್ಲಿಗೆ ಹೋಗಲಾಗುವುದಿಲ್ಲವೆಂದೂ, ಇಲ್ಲಿಯೇ ಚಂದ್ರಗಿರಿಯ ಎದುರಿನ ಇಂದ್ರಗಿರಿಯ ಬೆಟ್ಟದ ಬಂಡೆಯಲ್ಲಿಯೇ ಬಾಹುಬಲಿಯ ರೇಖಾಚಿತ್ರ ಇರುವುದೆಂದೂ, ಚಂದ್ರಗಿರಿಯಿಂದ ಇಂದ್ರಗಿರಿಗೆ ಬಾಣಪ್ರಯೋಗ ಮಾಡಿದರೆ ಅದು ಗೋಚರಿಸುವುದೆಂದೂ ಹೇಳಿದಂತಾಗುವುದು. ಆಗ ಚಾವುಂಡರಾಯನು ಮುನಿಗಳ ಆಶೀರ್ವಾದ ಪಡೆದು ಇಂದ್ರಗಿರಿಗೆ ಬಾಣಪ್ರಯೋಗ ಮಾಡಲು ಬಾಹುಬಲಿಯ ಚಿತ್ರ ಗೋಚರವಾಗಿ ಅದನ್ನೇ ಚಾವುಂಡರಾಯನು ಕೆತ್ತಿಸಿ ಜಗತ್ತಿಗೇ ಅದ್ವಿತೀಯವಾದ ಸುಂದರ ಮೂರ್ತಿಯ ನಿರ್ಮಾಣಕ್ಕೆ ಕಾರಣನಾದನು. ಇದಕ್ಕೆ ಪ್ರೇರಣೆ ಕಾಳಲಾದೇವಿಯೇ ಆದುದರಿಂದ ಜಗದ್ ವಿಖ್ಯಾತೆಯಾದ ಮಹಾತಾಯಿಯಾದಳು. ಈಕೆಯಿಂದ ಕರ್ನಾಟಕವು ವಿಶ್ವವಿಖ್ಯಾತವಾಯಿತು.

**೪. ನಾಟ್ಯರಾಣಿ ಶಾಂತಲಾದೇವಿ :-** ಶಾಂತಲಾ ಪರಮ ಜಿನಭಕ್ತೆ. ಈಕೆ ಮಾರಸಿಂಗಯ್ಯ ಹೆಗ್ಗಡೆ, ಮಾಚಿಕಬ್ಬೆಯರ ಪುತ್ರಿ. ಹೊಯ್ಸಳ ರಾಜ ಬಿಟ್ಟಿದೇವನ

ಪತ್ನಿ. ಶ್ರೀ ಶಾಂತಿನಾಥಸ್ವಾಮಿಯು ಈಕೆಯ ಆರಾಧ್ಯ ದೈವ. ಶ್ರೀ ಪ್ರಭಾಚಂದ್ರಾಚಾರ್ಯರು ಈಕೆಯ ಗುರುಗಳು. ನಾಟ್ಯವಿದ್ಯಾ ಪ್ರವೀಣೆ. ಸರ್ವಧರ್ಮ ಸಮನ್ವಯಾನ್ವಿತೆ. ಈಕೆ ಶ್ರವಣಬೆಳಗೊಳದ ಚಿಕ್ಕ ಬೆಟ್ಟದಲ್ಲಿ ಮತ್ತು ಕೊಪಣಾಚಲದಲ್ಲಿ ಶ್ರೀ ಶಾಂತಿನಾಥ ಬಸದಿಗಳನ್ನು ಕಟ್ಟಿಸಿದಳು. ಕೊನೆಯಲ್ಲಿ ಶಿವಗಂಗೆಯಲ್ಲಿ ಸಮಾಧಿಯಾದಳು.

**೫. ದಾನಚಿಂತಾಮಣಿ ಅತ್ತಿಮಬ್ಬೆ :-** ಶ್ರಾವಕರ ಷಟ್ ಕ್ರಿಯೆಗಳಲ್ಲಿ ನಿರತಳಾಗಿ, ದಾನದ ಮಹತ್ವವನ್ನರಿತು ತನ್ನ ಸರ್ವಸ್ವವನ್ನೂ ದಾನಕ್ಕಾಗಿ ವಿನಿಯೋಗಿಸಿ ದಾನಚಿಂತಾಮಣಿಯೆನಿಸಿದವಳೇ ಕನ್ನಡ ನಾಡಿನ ಹೆಮ್ಮೆಯ ಸಮ್ಯಕ್ತ್ವ ಶಿರೋಮಣಿ ಅತ್ತಿಮಬ್ಬೆ.

ಹತ್ತನೇ ಶತಮಾನದ ಪೂರ್ವಾರ್ಧದಲ್ಲಿದ್ದ ಚಾಲುಕ್ಯ ಚಕ್ರವರ್ತಿ ಎರಡನೇ ದಂಡನಾಯಕನಾದ ಮಲ್ಲಪಯ್ಯನಿಗೆ ಅತ್ತಿಮಬ್ಬೆ ಮತ್ತು ಗುಂಡುಮಬ್ಬೆ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದರು. ಮಲ್ಲಪಯ್ಯನು ವಿದ್ಯಾವಿಶಾರದನಾಗಿದ್ದನು. ಮಕ್ಕಳನ್ನೂ ವಿದ್ಯಾವಂತರನ್ನಾಗಿ ಮಾಡಿದ್ದಲ್ಲದೆ, ಧರ್ಮಸಂಸ್ಕಾರವನ್ನೂ ಚಿಕ್ಕಂದಿನಿಂದಲೇ ಅವರಲ್ಲಿ ಮೂಡಿಸಿದ್ದನು. ಈ ಇಬ್ಬರು ಮಕ್ಕಳನ್ನೂ ಚಾಲುಕ್ಯರ ಸೇನಾಪತಿ ನಾಗದೇವನಿಗೆ ಕೊಟ್ಟು ಮದುವೆ ಮಾಡಿದ್ದನು. ಈಕೆಯ ತಾಯಿ ಅಬ್ಬಕಬ್ಬೆ.

ಅತ್ತಿಮಬ್ಬೆ ಸ್ತ್ರೀ ರತ್ನಗಳಲ್ಲಿ ಒಂದು ಅನರ್ಘ್ಯರತ್ನ. ಇವಳು ರನ್ನನಂತಹ ಕವಿಗಳಿಗೆ ಆಶ್ರಯಕೊಟ್ಟು ಸ್ಫೂರ್ತಿ ನೀಡಿದಳು. ಇವಳು ಸ್ವಂತ ಕಾವ್ಯ ಬರೆಯದಿದ್ದರೂ ಮಹಾಕಾವ್ಯದಂತಹ ಬಾಳನ್ನು ಬಾಳಿ ಬೆಳಗಿದಳು. ಈಗಿನಂತೆ ಮುದ್ರಣಾಲಯಗಳಿಲ್ಲದಿದ್ದ ಆ ಕಾಲದಲ್ಲಿ ಓಲೆಗರಿಗಳಲ್ಲಿ ಶಾಂತಿನಾಥ ಪುರಾಣವನ್ನು, ಅಜಿತನಾಥಪುರಾಣಗಳಂಥ ಮಹಾಕಾವ್ಯಗಳನ್ನು ಕೈಯಿಂದ ಸಾವಿರಗಟ್ಟಲೆ ಬರೆಸಿ, ದಾನ ಮಾಡಿ, ಕನ್ನಡ ಸಾಹಿತ್ಯವನ್ನು ಪುನರುಜ್ಜೀವನಗೊಳಿಸಿದಳು. ಇಷ್ಟೇ ಅಲ್ಲದೆ ಸಾವಿರಾರು ಜಿನ ಪ್ರತಿಮೆಗಳನ್ನು ಮಾಡಿಸಿ, ಅವುಗಳನ್ನಿಡಲು ಅಷ್ಟೇ ಸಂಖ್ಯೆಯ ಮಂಟಪಗಳನ್ನೂ, ಅಷ್ಟೇ ಜಯಗಂಟೆಗಳನ್ನೂ ಮಾಡಿಸಿ, ದಾನ ಮಾಡುವುದರ ಮೂಲಕ ತನ್ನ ತನು, ಮನ, ಧನವನ್ನರ್ಪಿಸಿ ಇತರರ ಒಳಿತಿಗಾಗಿ ಶ್ರಮಿಸಿದಳು.

ಈ ರೀತಿ ವಿದ್ಯಾದಾನ, ಶಾಸ್ತ್ರದಾನ, ಔಷಧದಾನ, ಸಂಪತ್ತಿನ ದಾನಗಳನ್ನು ಮಾಡುವುದರ ಮೂಲಕ ದಾನಿಗಳಲ್ಲಿ ಮಹಾದಾನಿ ಎನಿಸಿ, ದಾನ



ಚಿಂತಾಮಣಿಯಾಗಿ, ಕರ್ನಾಟಕದಲ್ಲಿ ಕನ್ನಡ ಜನತೆಯ ಕಲ್ಪತರುವಾಗಿ ವಿಜೃಂಭಿಸಿದಳು. 'ಹೆತ್ತಮನೆಗೆ ಹೆಸರಾಗಿ, ಹೊಕ್ಕಮನೆಗೆ ಹೊನ್ನಾಗಿ' ಬಾಳಿ ಬೆಳಗಿದ ಅತ್ತಿಮಬ್ಬೆಯ ಬದುಕೇ ಒಂದು ಬೃಹದ್‌ಕಾವ್ಯ. ನಾಡಿನಾದ್ಯಂತ ನೂರಾರು ಚೈತ್ಯಾಲಯಗಳ ನಿರ್ಮಾಣ ಮಾಡಿ, ಮುನಿಗಳ ಸೇವೆ ಮತ್ತು ದಾನ, ಧರ್ಮವನ್ನು ಮಾಡಿದಳು. ಇವನ್ನೆಲ್ಲ ಕಂಡ ರನ್ನ ಕವಿಯು ತನ್ನ ಕಾವ್ಯದಲ್ಲಿ ಇವಳನ್ನು

**ಬಿಳಿಯರಳೆಯಂತೆ ಗಂಗಾ**
**ಜಳದಂತೆಸೆವಜಿತಮುನಿಪತಿಯ ಗುಣಾ ।**
**ವಳಿಯಂತೆ ನೆಗಳ್ದ ಕೊಪಣಾ**
**ಚಳದಂತೆ, ಪವಿತ್ರಮತ್ತಿಮಬ್ಬೆಯ ಚರಿತಂ ॥**

ಎಂದು ಕೊಂಡಾಡಿರುವಂತೆ ಅತ್ತಿಮಬ್ಬೆಯ ಚರಿತ್ರೆಯು ಪವಿತ್ರವಾದುದು. ಈಕೆ ಧಾರವಾಡ ಜಿಲ್ಲೆಯ ಲಕ್ಕುಂಡಿಯಲ್ಲಿ ಬೆಳಗಿದ ಕನ್ನಡದ ಧ್ರುವತಾರೆ.

**೬. ವೀರರಾಣಿ ಅಬ್ಬಕ್ಕದೇವಿ – ಕಾಲ ಕ್ರಿ.ಶ. 1720-49.**

ಜೈನರಲ್ಲಿ ಅನೇಕ ವೀರ ವನಿತೆಯರಿದ್ದರು. ಅವರಲ್ಲಿ ರಾಣಿ ಅಬ್ಬಕ್ಕದೇವಿ ಪ್ರಸಿದ್ಧಳು. ಈಕೆ ತುಳುನಾಡಿನ ಉಳ್ಳಾಲದ ರಾಣಿಯಾಗಿ ಆಡಳಿತ ನಡೆಸಿದಳು. ಈಕೆ ಚೌಟರ ಬಂಗರಸನ ಪತ್ನಿ. ಆದರೂ ಈಕೆ ಪತಿಯಿಂದ ಬಹಳ ಕಿರುಕುಳವನ್ನನುಭವಿಸಬೇಕಾಯಿತು. ಪತಿಯ ಸೋದರಳಿಯ ಕಾಮರಾಯನೊಂದಿಗೂ ಮತ್ತು ಕೆಳದಿಯ ಶಿವಪ್ಪನಾಯಕನೊಂದಿಗೂ ಹೋರಾಟ ನಡೆಸಿದ ವೀರ ರಮಣಿ ಈಕೆ. ಪೋರ್ಚುಗೀಸರ ಧಾಳಿಯನ್ನು ದಿಟ್ಟತನದಿಂದ ಎದುರಿಸಿ, ನಾಡಿನ ಸ್ವಾತಂತ್ರ್ಯವನ್ನು ಕಾಪಾಡಿದಳು. ಕಾಳುಮೆಣಸು ಮುಂತಾದ ಸಾಂಬಾರ ಪದಾರ್ಥಗಳ ರಫ್ತು ವ್ಯಾಪಾರದಿಂದ ಬೊಕ್ಕಸಕ್ಕೆ ಅಪಾರ ಸಂಪತ್ತು ಬರುವಂತೆ ಮಾಡಿದ್ದಳು.

ಈಕೆ ಜೈನ ಧರ್ಮಕ್ಕೆ ಬಹುವಿಧವಾದ ಸೇವೆ ಸಲ್ಲಿಸಿದ್ದಾಳೆ. ಈಕೆಯ ಕೊನೆಯ ದಿನಗಳು ಬಹು ದುಃಖಕರವಾಗಿದ್ದವು.

**೭. ಮಾತೃಶ್ರೀ ರತ್ನಮ್ಮನವರು :** ಕಾಲ ಕಳೆದಂತೆ ಆಧುನಿಕತೆ ಹೆಚ್ಚುತ್ತಾ

ಹೋಗುವುದು ಸರ್ವೇಸಾಮಾನ್ಯ. ಹಾಗೆಯೇ ಈ ಕಾಲವೂ ಆಧುನಿಕತೆಯನ್ನು ಹೊಂದಿ ಮುನ್ನುಗ್ಗಿ ವಿನಾಶದ ಹಾದಿಯನ್ನು ಹಿಡಿಯುತ್ತಿರುವುದು ಅತಿಶಯೋಕ್ತಿಯಲ್ಲ. ಆದರೆ ಆಧುನಿಕ ವಿಜ್ಞಾನ ಯುಗದಲ್ಲೂ ಧರ್ಮದ ಮಹತ್ತ್ವವನ್ನು ಸಾರುತ್ತಾ ಧರ್ಮಕಾರ್ಯವನ್ನು ಮಾಡುತ್ತಿರುವ ಮಾತೃಶ್ರೀ ರತ್ನಮ್ಮನವರೂ ಹಾಗೂ ಅವರ ಪುತ್ರ ಧರ್ಮಾಧಿಕಾರಿ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರೂ ತುಂಬ ಆದರ್ಶರಾಗಿರುವುದು ಅತಿಶಯವಾದುದು. ಇಂತಹವರಿಗೆ ಜನ್ಮವಿತ್ತ ಕನ್ನಡನಾಡು ಧನ್ಯ.

ಮಾತೃಶ್ರೀ ರತ್ನಮ್ಮನವರು ಸಮ್ಯಕ್ತ್ವದ ತಳಹದಿಯ ಮೇಲೆ ನಿರ್ಮಾಣಗೊಂಡ 'ಜೈನ ದಕ್ಷಿಣಕಾಶಿ' ಎನಿಸಿದ ಮೂಡುಬಿದಿರೆಯಲ್ಲಿ ಸಮ್ಯಕ್ತ್ವಶಿರೋಮಣಿಗಳ ಕುಟುಂಬದಲ್ಲಿ ಜನಿಸಿದ ರತ್ನವಾಗಿದ್ದಾರೆ. ಈ ಮೂಡುಬಿದಿರೆ ಕ್ಷೇತ್ರವು ಸಹಸ್ರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ರತ್ನ, ವಜ್ರ, ವೈಡೂರ್ಯಗಳ ಜಿನಬಿಂಬಗಳನ್ನೂ ಹಾಗೂ ಹದಿನೆಂಟು ಜಿನ ಚೈತ್ಯಾಲಯಗಳಿಂದಲೂ ಕೂಡಿದ ಪವಿತ್ರ ಕ್ಷೇತ್ರವಾಗಿದೆ. ಇಂತಹ ಕ್ಷೇತ್ರದಲ್ಲಿ ರತ್ನಮ್ಮನವರು ಜನಿಸಿದರು. ಇವರ ತಂದೆ ಸಂಕಪ್ಪಶೆಟ್ಟರು, ತಾಯಿ ಅನಂತಮ್ಮನವರು. ಇವರು ಉತ್ತಮ ಶ್ರಾವಕರಾಗಿದ್ದರು.

ಇವರು ಧರ್ಮಸ್ಥಳದ ಧರ್ಮಾಧಿಕಾರಿಯಾಗಿದ್ದ ರತ್ನವರ್ಮರನ್ನು ಕೈ ಹಿಡಿದು ನಾಲ್ಕು ಜನ ಗಂಡು ಮಕ್ಕಳನ್ನೂ ಹಾಗೂ ಒಬ್ಬ ಪುತ್ರಿಯನ್ನೂ ಪಡೆದರು. ಇವರೆಲ್ಲರನ್ನೂ ಸುಶಿಕ್ಷಿತರನ್ನಾಗಿ ಹಾಗೂ ಸನ್ಮಾರ್ಗಿಗಳನ್ನಾಗಿ ಮಾಡಿದ ಕೀರ್ತಿಯು ರತ್ನಮ್ಮನವರದು. ಇವರಿಗೆ ಚಿಕ್ಕ ವಯಸ್ಸಿನಿಂದಲೂ ಜೈನಧರ್ಮದ ಸಂಸ್ಕಾರ ಚೆನ್ನಾಗಿ ಆಗಿತ್ತು. ಆ ಸಂಸ್ಕಾರದ ಬಲದಿಂದಲೇ ಇಂದು ಅವರು 'ಅಭಿನವ ಕಾಳಲಾದೇವಿ'ಯಾಗಿ, 'ಅಭಿನವ ಸುನಂದಾದೇವಿ'ಯಾಗಿ, 'ದಾನ ಚಿಂತಾಮಣಿ'ಯಾಗಿ ಕಂಗೊಳಿಸಲು ಕಾರಣವಾಯಿತು. ಧರ್ಮಸ್ಥಳದಲ್ಲಿ ಭಗವಾನ್ ಬಾಹುಬಲಿ ಸ್ವಾಮಿಯ ಸ್ಥಾಪನೆಗೆ ಕಾರಣರಾಗಿದ್ದಾರೆ

ಇವರಲ್ಲಿ ದಾನ ಕೇಳಲು ಬಂದವರಾರೂ ಬರಿಗೈಲಿ ಹಿಂದಿರುಗುವುದಿಲ್ಲ. ಊಟ, ಉಪಚಾರದೊಂದಿಗೆ ಕೈಯಿಂದಾಗುವ ನೆರವು ನೀಡುತ್ತಾರೆ ಹಾಗೂ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಹಗಲಿರುಳೂ ಶ್ರಮಿಸುತ್ತಿದ್ದಾರೆ. ಚಿಕ್ಕ ವಯಸ್ಸಿನಲ್ಲಿಯೇ ಪತಿ ವಿಯೋಗವಾದರೂ ಧೈರ್ಯಗೆಡದೆ, ಧರ್ಮದ ಮೇಲೆ ಭಾರ ಹಾಕಿ, ಮಕ್ಕಳಿಗೆ ಧೈರ್ಯ ನೀಡಿ, ಧರ್ಮಕಾರ್ಯದಲ್ಲೂ,



ಸಾರ್ವಜನಿಕ ಕಾರ್ಯದಲ್ಲೂ ಮಾರ್ಗದರ್ಶಕರಾಗಿದ್ದಾರೆ. ''ತಾಯಿಯಂತೆ ಮಕ್ಕಳು ನೂಲಿನಂತೆ ಸೀರೆ'' ಎನ್ನುವ ಹಾಗೆ ಇವರು ತಮ್ಮ ಧರ್ಮ ಸಂಸ್ಕಾರದಿಂದ ತಮ್ಮ ಹಿರಿಯ ಮಗ ವೀರೇಂದ್ರ ಹೆಗ್ಗಡೆಯವರನ್ನು ತರಬೇತಿ ಮಾಡಿದರಲ್ಲದೆ ಇಂದು ಭಾರತಾದ್ಯಂತ ಅವರ ಕೀರ್ತಿ ಹರಡಿ, ಹೆಗ್ಗಡೆ ಮನೆತನಕ್ಕೆ ಕಳಶಪ್ರಾಯರಾಗಿರಲು ಕಾರಣರಾಗಿದ್ದಾರೆ. ಇಂದಿನ ಆಧುನಿಕ ಯುಗದಲ್ಲಿ ಎಷ್ಟು ಸಂಪತ್ತಿದ್ದರೂ ಸಾಲದು ಎನ್ನುವವರಿರುವಾಗ ಧರ್ಮಕ್ಕಾಗಿ ತನು, ಮನ, ಧನವನ್ನರ್ಪಿಸಿ ದುಡಿಯುವುದು ಸುಲಭವಾದ ಮಾತೇನಲ್ಲ. ಹೀಗಿರುವ ಈ ಕಾಲದಲ್ಲೂ ಸಹ ಇವರು ಕೈಗೊಂಡಿರುವ ಅನೇಕಾನೇಕ ಕಾರ್ಯಗಳು ಶ್ಲಾಘನೀಯವಾದವುಗಳು. ಹಳ್ಳಿಗಳನ್ನು ದತ್ತು ಪಡೆದು ಅವುಗಳ ಸರ್ವತೋಮುಖ ಅಭಿವೃದ್ಧಿ ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಅನೇಕಾನೇಕ ಸಾರ್ವಜನಿಕ ಸಮಾಜೋದ್ಧಾರದ ಕೆಲಸಗಳನ್ನು ಮಾಡುತ್ತಲೇ ಇದ್ದಾರೆ. ರತ್ನಮ್ಮನವರಿಗೆ 29-1-99 ರಂದು ಬೆಂಗಳೂರಿನಲ್ಲಿ ಅಖಿಲ ಕರ್ನಾಟಕ ಜೈನ ಮಹಿಳಾ ಒಕ್ಕೂಟದವರು ''ಧರ್ಮ ಶ್ರೀ'' ಎಂಬ ಬಿರುದು ನೀಡಿ ''ರತ್ನ ಶ್ರೀ'', ''ಮಾತೃ ಶ್ರೀ'' ಎಂಬ ಅಭಿನಂದನಾ ಗ್ರಂಥಗಳೊಂದಿಗೆ ಸನ್ಮಾನಿಸಿದರು.

೨೦೦೧ನೇ ನವಂಬರ್ ೧ ರಂದು ರಾಜ್ಯೋತ್ಸವ ಪ್ರಶಸ್ತಿಯು ಇವರಿಗೆ ಲಭಿಸಿತು.

---

**ಐದು ವಿಧವಾದ ಶರೀರಗಳು :**

ಸಂಸಾರೀ ಜೀವಿಗಳು ಒಂದಲ್ಲ ಒಂದು ಶರೀರವನ್ನು ಧಾರಣೆ ಮಾಡಿರುತ್ತವೆ. ಶರೀರಗಳು ಐದು ವಿಧವಾಗಿವೆ. ಔದಾರಿಕ, ವೈಕ್ರಿಯಿಕ, ಆಹಾರಕ, ಕಾರ್ಮಣ, ತೈಜಸ. ಮಾನವರು-ತಿರ್ಯಂಚರಿಗೆ ರಕ್ತ-ಮಾಂಸಗಳಿಂದ ಕೂಡಿದ ಔದಾರಿಕ ಶರೀರವಿರುತ್ತದೆ. ದೇವತೆಗಳಿಗೂ-ನಾರಕಿಗಳಿಗೂ ವಿವಿಧ ಆಕಾರವನ್ನು ಹೊಂದುವ ವೈಕ್ರಿಯಿಕ ಶರೀರವಿರುತ್ತದೆ. ವೃದ್ಧಿಧಾರೀ ಮುನಿಗಳು ಕೆಲವೊಮ್ಮೆ ಆಹಾರಕ ಶರೀರ ಧರಿಸುತ್ತಾರೆ. ಸಂಸಾರೀ ಜೀವಿಗಳೆಲ್ಲರಿಗೂ ಕಾರ್ಮಣ ಮತ್ತು ತೈಜಸವೆಂಬ ಶರೀರಗಳು ಇರುತ್ತವೆ. ಮರಣ ಹೊಂದಿದ ನಂತರ ಇನ್ನೊಂದು ಗತಿಗೆ ಹೋಗುವಾಗ ಆತ್ಮನೊಂದಿಗೆ ಕಾರ್ಮಣ ಮತ್ತು ತೈಜಸವೆಂಬ ಸೂಕ್ಷ್ಮವಾದ ಶರೀರಗಳಿರುತ್ತವೆ. ಸಿದ್ಧಾತ್ಮರಿಗೆ ಯಾವ ಶರೀರವೂ ಇರುವುದಿಲ್ಲ.

# ೭೮ ಜೈನ ಪರ್ವತಿಥಿಗಳು

## ೧. ಪರ್ವಗಳೆಂದರೇನು ?

ಪರ್ವವೆಂದರೆ ಹಬ್ಬ ಎಂದರ್ಥ. ಜೈನ ಸಂಸ್ಕೃತಿಯಲ್ಲಿ ಈ ಹಬ್ಬಗಳು ಕೇವಲ ತಿಂದುಂಡು, ಉಡುಗೆ-ತೊಡುಗೆ ತೊಟ್ಟು ಆನಂದಿಸುವುದಲ್ಲ. ಇವುಗಳಿಗೆ ಒಂದಲ್ಲ ಒಂದು ಧಾರ್ಮಿಕವಾದ, ಪೌರಾಣಿಕವಾದ, ಆಧ್ಯಾತ್ಮಿಕವಾದ, ಸಾಂಸ್ಕೃತಿಕ, ನೈತಿಕವಾದ ಹಿನ್ನೆಲೆಯುಂಟು. ಇವುಗಳ ಆಚರಣೆಗೆ ಒಂದು ನಿರ್ದಿಷ್ಟವಾದ ವಿಧಿವಿಧಾನ ಉಂಟು. ಈ ಪರ್ವಗಳನ್ನು ಹಬ್ಬ, ವ್ರತ, ನೋಂಪಿ ಎಂದೂ ಕರೆಯುತ್ತಾರೆ. ಇವುಗಳಲ್ಲಿ ಪೂಜೆ, ಅಭಿಷೇಕ, ಪೂರ್ತಿ ಅಥವಾ ಒಂದು ಹೊತ್ತು ಉಪವಾಸ, ಸ್ವಾಧ್ಯಾಯ, ಬ್ರಹ್ಮಚರ್ಯ ಪಾಲನೆ, ಜಪ, ಧ್ಯಾನ, ಯಂತ್ರ, ಮಂತ್ರಾರಾಧನೆ ಮಾಡಲಾಗುತ್ತದೆ. ಇಷ್ಟಲ್ಲದೆ ದಾನ, ಧರ್ಮ, ಪರೋಪಕಾರ, ಉತ್ಸವ, ಧರ್ಮಪ್ರಭಾವನೆ, ಪ್ರಚಾರ ಉಪನ್ಯಾಸ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಪದ್ಧತಿಯುಂಟು. ಇವುಗಳ ಆಚರಣೆ ನಿಮಿತ್ತದಿಂದ ಕೆಲಹೊತ್ತು ಶಾಂತಿ, ನೆಮ್ಮದಿಯಿಂದ ಸಾಂಸಾರಿಕ ಗೊಂದಲದಿಂದ, ಜಂಜಾಟದಿಂದ ದೈಹಿಕ, ಮಾನಸಿಕವಾದ ನೋವು, ದುಃಖಗಳನ್ನು ಮರೆತು, ಸತ್ಕಾಲಕ್ಷೇಪವನ್ನು ಮಾಡಲು ಸಹಕಾರಿಯಾಗಿ, ಪಾಪ ನಿವಾರಣೆ, ಪುಣ್ಯ ವೃದ್ಧಿ ಮತ್ತು ಆತ್ಮಸಂಸ್ಕಾರವಾಗುವುದು. ಇವುಗಳಲ್ಲಿ ಪರಸ್ಪರ ಸಹಕಾರ, ಹೊಂದಾಣಿಕೆ, ಒಗ್ಗಟ್ಟು, ಸಂಘಟನೆ, ಧರ್ಮ ಪ್ರಭಾವನೆಗಳಾಗುತ್ತವೆ.

## ೨. ಪರ್ವತಿಥಿಗಳ ವಿಧಗಳಾವುವು ?

ಮೂಲತಃ ಪರ್ವಗಳಲ್ಲಿ ಎರಡುವಿಧ :-

1. ನಿತ್ಯ ಪರ್ವ,  2. ನೈಮಿತ್ತಿಕ ಪರ್ವ.

ಪ್ರತಿ ಮಾಸದ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷಗಳಲ್ಲಿ ಬರುವ ಬಿದಿಗೆ, ಪಂಚಮಿ, ಅಷ್ಟಮಿ, ಏಕಾದಶಿ ಮತ್ತು ಚತುರ್ದಶಿ ಎಂಬಿವು ನಿತ್ಯಪರ್ವಗಳು. ಇವುಗಳನ್ನು ಪಂಚಪರ್ವ ತಿಥಿಗಳೆಂದು ಹೇಳುತ್ತಾರೆ. ಆದರೆ ಅಷ್ಟಮಿ ಚತುರ್ದಶಿಗಳು ಮಾತ್ರ ವಿಶೇಷವಾಗಿ ಆಚರಿಸಲ್ಪಡುವ ನಿತ್ಯಪರ್ವಗಳು. ಒಂದು ವಿಶೇಷ ಕಾರಣದಿಂದಾಗಿ ಆಚರಿಸಲ್ಪಡುವ ಪರ್ವಗಳು ನೈಮಿತ್ತಿಕ ಪರ್ವಗಳು. ಇವುಗಳಲ್ಲಿ ಯುಗಾದಿ, ಮಹಾವೀರ ಜಯಂತಿ, ಅಕ್ಷಯತದಿಗೆ, ಶ್ರುತಪಂಚಮಿ, ಅಷ್ಟಾಹ್ನೀಕ, ಮುಕುಟಸಪ್ತಮಿ, ಉಪಾಕರ್ಮ, ದಶಲಕ್ಷಣ, ಶೋಡಶಕಾರಣ, ಜೀವದಯಾಷ್ಟಮಿ ಮತ್ತು ದೀಪಾವಳಿ ಮುಂತಾದವು ಮುಖ್ಯವಾದವುಗಳು. ಇವುಗಳ ಸಂಕ್ಷಿಪ್ತವಾದ ಪರಿಚಯವನ್ನು ಇಲ್ಲಿ ತಿಳಿಸಲಾಗಿದೆ. ವಿಶೇಷವಾಗಿ ಆಚರಿಸುವ ನಿಯಮವನ್ನು ಶಾಸ್ತ್ರಗಳಿಂದ ತಿಳಿಯಬೇಕು.



## ೩. ಮುಖ್ಯ ಪರ್ವಗಳು :

**1. ಯುಗಾದಿ :** ಚೈತ್ರ ಶುದ್ಧಪಾಡ್ಯ, ಇದು ವರ್ಷದ ಆರಂಭದ ದಿನ ಆಚರಿಸುವ ಹಬ್ಬ. ಇದರಲ್ಲಿ ಚಂದ್ರಮಾನ ಯುಗಾದಿ ಮತ್ತು ಸೌರಮಾನ ಯುಗಾದಿ ಎಂದು ಎರಡು ವಿಧ. ಕರ್ನಾಟಕದಲ್ಲಿ ಚಂದ್ರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ಅಂದು ಬೆಳಿಗ್ಗೆ ಎದ್ದ ತಕ್ಷಣ ಜಿನಬಿಂಬದ ಶ್ರೀಮುಖ ದರ್ಶನ ಮಾಡಬೇಕು. ಸ್ನಾನಾನಂತರ ಜಿನಮಂದಿರದಲ್ಲಿ ಪೂಜೆ-ಅಭಿಷೇಕ ಮಾಡಿ(ಮಾಡಿಸಿ) ಶ್ರೀಫಲವಿಟ್ಟು ವಂದಿಸಬೇಕು. ಸುಖ-ದುಃಖಗಳಲ್ಲಿ ಹಿಗ್ಗದೆ-ಕುಗ್ಗದೆ, ಧರ್ಮಮಾರ್ಗವನ್ನು ಬಿಡದೆ ಬಾಳುವಂತಾಗಲಿ ಭಗವಂತಾ ಎಂದು ಭಾವಿಸಬೇಕು.

**2. ಮಹಾವೀರ ಜಯಂತಿ :** ಚೈತ್ರ ಶುದ್ಧ ತ್ರಯೋದಶಿ, ವರ್ತಮಾನ ಕಾಲದ ಅಂತಿಮ ತೀರ್ಥಂಕರರಾದ ಭಗವಾನ್ ಮಹಾವೀರರು ಕುಂಡಲಪುರದ ಸಿದ್ಧಾರ್ಥ ಮಹಾರಾಜನ ಪತ್ನಿ ತ್ರಿಶಲಾದೇವಿಯ ಪುತ್ರನಾಗಿ ಜನಿಸಿದ ಪವಿತ್ರದಿನ. ಅಂದಿನಿಂದ ಜೈನಧರ್ಮದ ಪುನರುದ್ಧಾರವಾಯಿತು. ಆದ್ದರಿಂದ ಇವರ ಜಯಂತಿಯನ್ನು ಹಲವು ರೀತಿಯ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ವೈಭವಯುತವಾಗಿ ಆಚರಿಸುತ್ತಾರೆ. ಅಂದು ಮಹಾವೀರ ಜಿನರಿಗೆ ಪೂಜಾಭಿಷೇಕ ಮಾಡಿ, ಉಪನ್ಯಾಸ, ಉತ್ಸವ, ದಾನ, ಇವರ ತತ್ವ, ಜೀವನ, ಪ್ರಚಾರ ಮತ್ತು ಪ್ರಭಾವನೆ ಮಾಡುತ್ತಾರೆ. ಅಂದು ಎಲ್ಲರೂ ಒಂದೇ ಕಡೆ ಸೇರಿ ಊಟೋಪಚಾರ ಮಾಡಿ ಆನಂದದಿಂದ ನಲಿಯುತ್ತಾರೆ. ಅಂದು ದೀನ-ದಲಿತರು, ರೋಗಿಗಳಿಗೂ ಅಸಮರ್ಥರಿಗೂ ಅನಾಥರಿಗೂ ದಾನ-ಧರ್ಮ ಮಾಡಲಾಗುತ್ತದೆ.

**3. ಅಕ್ಷಯತದಿಗೆ :** ವೈಶಾಖ ಶುದ್ಧ ತದಿಗೆ, ಹಿಂದೆ ಆದಿನಾಥರಿಗೆ ಮೊಟ್ಟಮೊದಲಬಾರಿಗೆ ಆಹಾರ ದಾನವಾದ ಪವಿತ್ರ ದಿನ. ಅಂದು ಹಸ್ತಿನಾಪುರದ ಶ್ರೇಯಾಂಸ ಮಹಾರಾಜನು ತನ್ನ ಅಣ್ಣ ಸೋಮಪ್ರಭನೊಂದಿಗೆ ಆದಿನಾಥರಿಗೆ

ಇಕ್ಷು ರಸವನ್ನು (ಕಬ್ಬಿನ ಹಾಲನ್ನು) ನೀಡಿದರು. ಆ ದಿನ ಆಹಾರ ಅಕ್ಷಯ ವಾಯಿತು, ಪಂಚಾಶ್ಚರ್ಯಗಳಾದವು. ಅಂದು ಆದಿನಾಥರ ಪೂಜಾಭಿಷೇಕ ಉತ್ಸವಗಳು ನಡೆಯುತ್ತವೆ. ಅಂದು ಶುಭ ಕಾರ್ಯಗಳನ್ನು ಮಾಡಲು ಒಳ್ಳೆಯದಿನ.

**4. ಶ್ರುತಪಂಚಮಿ :** ಜ್ಯೇಷ್ಠ ಶುದ್ಧ ಪಂಚಮಿ, ಜಿನವಾಣಿಯು ಲಿಪಿಬದ್ಧ ವಾಗಿ ಶಾಸ್ತ್ರರೂಪವನ್ನು ತಾಳಿದ ದಿನ. ಆಚಾರ್ಯ ಧರಸೇನರ ಆದೇಶದಂತೆ ಪುಷ್ಪದಂತ, ಭೂತಬಲಿ ಆಚಾರ್ಯರುಗಳು ಷಟ್‌ಖಂಡಾಗಮವನ್ನು ಬರೆದು ಪೂರೈಸಿ ಪೂಜೆ ಮಾಡಿದ ದಿನ. ಅಂದು ಶಾಸ್ತ್ರ ಪೂಜೆ, ಶಾಸ್ತ್ರದಾನ, ಸಂಗೀತ, ಪುರಾಣ, ಪ್ರವಚನಗಳು ನಡೆಯುತ್ತವೆ.

**5. ಅಷ್ಟಾಹ್ನಿಕ :** ಇದು ಪ್ರಸಿದ್ಧವಾದ ಪರ್ವ. ವರ್ಷದಲ್ಲಿ ಮೂರು ಬಾರಿ ಎಂಟೆಂಟು ದಿನ ಆಚರಿಸುವ ಪರ್ವ. ಆಷಾಢ, ಕಾರ್ತಿಕ ಮತ್ತು ಫಾಲ್ಗುಣ ಮಾಸಗಳಲ್ಲಿ ಶುದ್ಧ ಅಷ್ಟಮಿಯಿಂದ ಪೌರ್ಣಮೆಯವರೆಗೆ ನಂದೀಶ್ವರ ದ್ವೀಪದ ಮತ್ತು ಪಂಚ ಮೇರುಗಳ ಪೂಜೆ-ಆರಾಧನೆ ಮಾಡುವ ವಿಧಾನವೇ ಅಷ್ಟಾಹ್ನಿಕ, ಜಂಬೂ ದ್ವೀಪದಿಂದ ಎಂಟನೆಯ ದ್ವೀಪವೇ ನಂದೀಶ್ವರ ದ್ವೀಪ. ಅದರ ನಾಲ್ಕು ದಿಕ್ಕಿನಲ್ಲಿರುವ ಅಂಜನ, ರತಿಕರ, ದಧಿಮುಖ ಪರ್ವತಗಳಲ್ಲಿ ಇರುವ ಒಟ್ಟು ಐವತ್ತೆರಡು ಅಕೃತ್ರಿಮ ಜಿನಮಂದಿರಗಳಲ್ಲಿ ಒಂದೊಂದರಲ್ಲೂ ಇರುವ ನೂರೆಂಟು ಜಿನಬಿಂಬಗಳ ಪೂಜೆಯನ್ನು ದೇವತೆಗಳು ಬಹಳ ವೈಭವ ದಿಂದ ಮಾಡಿ ನಲಿಯುತ್ತಾರೆ. ಅಂತಹ ಭಾಗ್ಯ ನಮಗೂ ಸಿಗಲೆಂದು ಅವುಗಳ ಪ್ರತಿಕೃತಿಗಳ ಪೂಜೆ, ಯಂತ್ರಾರಾಧನೆ, ವ್ರತ, ಉಪವಾಸಾದಿ ನೋಂಪಿ ಹಾಗೂ ಉತ್ಸವಗಳನ್ನು ಮಾಡುತ್ತಾರೆ.

**6. ಮುಕುಟಸಪ್ತಮಿ :** ಶ್ರಾವಣ ಶುದ್ಧ ಸಪ್ತಮಿಯಂದು ಭಗವಾನ್ ಶ್ರೀ ಪಾರ್ಶ್ವನಾಥಸ್ವಾಮಿಯು ಸಮ್ಮೇದ ಶಿಖರಿಯ ಸುವರ್ಣಭದ್ರಕೂಟದಲ್ಲಿ ಮುಕ್ತರಾದ ದಿನ. ಪಾರ್ಶ್ವನಾಥರಿಗೆ ಪೂಜಾಭಿಷೇಕ ಮಾಡಿ ನಿರ್ವಾಣ ಲಾಡನ್ನು ಅರ್ಪಿಸಿ, ಉತ್ಸವ ಮಾಡುತ್ತಾರೆ.

**7. ಉಪಾಕರ್ಮ :** ಶ್ರಾವಣ ಶುದ್ಧ ಪೂರ್ಣಿಮೆಯಂದು ಹೊಸ ರತ್ನತ್ರಯ ಸೂತ್ರವನ್ನು (ಜನಿವಾರವನ್ನು) ಧಾರಣೆ ಮಾಡುವ ದಿನ. ಹಿಂದೆ ಅಕಂಪನಾ ಚಾರ್ಯರೆಂಬ ಮುನಿಗಳ ಸಂಘಕ್ಕೆ ಆದ ಘೋರವಾದ ಉಪಸರ್ಗವನ್ನು



ವಿಷ್ಣುಕುಮಾರ ಮುನಿಗಳು ತಮ್ಮ ತಪೋಬಲದಿಂದ ನಿವಾರಿಸಿ ಧರ್ಮ ಕಂಟಕ ವನ್ನು ನಿವಾರಣೆ ಮಾಡಿದ ದಿನ. ಇದನ್ನು ರಾಖೀ ಬಂಧನ ಪರ್ವವೆಂದೂ ಕರೆಯುತ್ತಾರೆ.

**8. ದಶಲಕ್ಷಣ ಪರ್ವ :** ಇದು ವರ್ಷದಲ್ಲಿ ಮೂರು ಬಾರಿ ಆಚರಿಸುವ ಪರ್ವ. ಭಾದ್ರಪದ, ಚೈತ್ರ ಮತ್ತು ಮಾಘಮಾಸಗಳ ಶುಕ್ಲಪಕ್ಷದ ಪಂಚಮಿ ಯಿಂದ ಪೂರ್ಣಿಮೆಯ ವರೆಗೂ ಹತ್ತು ದಿನ ಆಚರಿಸುವ ಪರ್ವ. ಆದರೆ ವಿಶೇಷವಾಗಿ ಭಾದ್ರಪದ ಮಾಸದಲ್ಲಿ ಆಚರಿಸುತ್ತಾರೆ. ಇದು ಜೈನ ಸಂಸ್ಕೃತಿಯ ಆಧ್ಯಾತ್ಮಿಕ ಪರ್ವ. ಆತ್ಮಕಲ್ಯಾಣಕ್ಕೆ ಸಹಕಾರಿಯಾದ ಆಚರಣೆ ಮಾಡುವ ಪವಿತ್ರ ಪರ್ವ. ಉತ್ತಮ ಕ್ಷಮಾ, ಮಾರ್ದವ, ಆರ್ಜವ, ಶೌಚ, ಸತ್ಯ, ಸಂಯಮ, ತಪ, ತ್ಯಾಗ, ಆಕಿಂಚನ್ಯ, ಬ್ರಹ್ಮಚರ್ಯ ಎಂಬ ಹತ್ತು ವಿಧದ ಧಾರ್ಮಿಕ ವಿಧಿಗಳನ್ನು ದಿನಕ್ಕೆ ಒಂದರಂತೆ ಭಾವಿಸಿ, ಪೂಜಿಸಿ, ಯಂತ್ರಾರಾಧನೆ ಮಾಡಿ, ಜಪ, ತಪ, ಮಂತ್ರಪುಷ್ಪ ಸ್ವಾಧ್ಯಾಯ, ಉಪವಾಸ ಮಾಡುತ್ತಾರೆ. ಕೊನೆಯ ದಿನವಾದ ಕ್ಷಮಾವಾಣಿ ದಿನ ಎಲ್ಲರೂ ಪರಸ್ಪರ ಕ್ಷಮೆ ಕೋರಿ, ಇತರರ ತಪ್ಪನ್ನು ಕ್ಷಮಿಸುವ ಆಚರಣೆ ಮಾಡುತ್ತಾರೆ. ಈ ಪರ್ವಕ್ಕೆ ಪರ್ಯೂಷಣವೆಂದೂ ಹೇಳುವರು. ಇದು ಅನಾದಿ ಪರ್ವ ಮತ್ತು ಆಧ್ಯಾತ್ಮಿಕ ಪರ್ವ.

**9. ಅನಂತ ನೋಂಪಿ :** ಭಾದ್ರಪದ ಶುದ್ಧ ಚತುರ್ದಶಿಯಂದು ಹದಿ ನಾಲ್ಕನೇ ತೀರ್ಥಂಕರರಾದ ಅನಂತನಾಥರ ಆರಾಧನೆಯನ್ನು ಹದಿನಾಲ್ಕು ವಿಧವಾದ ಸಾಮಗ್ರಿಗಳಿಂದ ಪೂಜೆ ಮಾಡಿ, ನೋಂಪಿಯ ಆಚರಣೆ ಮಾಡು ತ್ತಾರೆ. ವ್ರತ, ನೋಂಪಿ, ಉಪವಾಸ, ಉತ್ಸವ ಮುಂತಾದ ಆಚರಣೆಯೊಂದಿಗೆ ಮಾಡುವ ಪದ್ಧತಿಯುಂಟು. ದಕ್ಷಿಣ ದೇಶದವರಿಗೆ ಈ ನೋಂಪಿ ಪ್ರಸಿದ್ಧ ವಾದುದು. ಇದನ್ನು 14 ವರ್ಷ ಮಾಡಿ ಕೊನೆಯಲ್ಲಿ ಉದ್ಯಾಪನೆ ಮಾಡುತ್ತಾರೆ.

**10. ಶೋಡಶಕಾರಣ ಭಾವನಾ ಪರ್ವ :**

ಇದು ದಶಲಕ್ಷಣದ ಹಾಗೆ ವರ್ಷದಲ್ಲಿ ಮೂರುಸಲ ಆಚರಿಸುವ ಪರ್ವ. ಆದರೂ ವಿಶೇಷವಾಗಿ ಭಾದ್ರಪದ ಮಾಸದ ಶುಕ್ಲಪಕ್ಷದ ಪಾಡ್ಯಮಿ ಯಿಂದ ಹದಿನಾರು ದಿನ ಆಚರಿಸುತ್ತಾರೆ. ದಿನವೂ ಒಂದೊಂದರಂತೆ ಒಂದು ಉತ್ತಮ ಭಾವನೆಯನ್ನು ಭಾವಿಸಿ ಆರಾಧಿಸುತ್ತಾರೆ. ಎಲ್ಲ ತೀರ್ಥಂಕರರೂ ತಮ್ಮ ಹಿಂದಿನ ಭವಗಳಲ್ಲಿ ಶೋಡಶಭಾವನೆಯನ್ನು ಕೇವಲಿಗಳ ಪಾದ

ಮೂಲದಲ್ಲಿ ಆರಾಧಿಸಿದ್ದರು. ಅವುಗಳು ಯಾವುವೆಂದರೆ ದರ್ಶನವಿಶುದ್ಧಿ, ವಿನಯಸಂಪನ್ನತೆ, ಶೀಲವ್ರತೇಶ್ವನತಿಚಾರ, ಅಭೀಕ್ಷ್ಣಜ್ಞಾನೋಪಯೋಗ, ಸಂವೇಗ, ಶಕ್ತಿಸ್ತ್ಯಾಗ, ಶಕ್ತಿತಸ್ತಪ, ಸಾಧುಸಮಾಧಿ, ವೈಯಾವೃತ್ತ್ಯ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಬಹುಶ್ರುತಭಕ್ತಿ, ಪ್ರವಚನಭಕ್ತಿ, ಆವಶ್ಯಕಾಪರಿಹಾಣಿ, ಮಾರ್ಗ ಪ್ರಭಾವನಾ ಮತ್ತು ಪ್ರವಚನ ವಾತ್ಸಲ್ಯ.

ಪ್ರತಿದಿನವೂ ಪೂಜೆ, ಅಭಿಷೇಕ, ಆರಾಧನೆ, ಜಪ, ಮಂತ್ರಪುಷ್ಪ, ಒಂದೊತ್ತು, ಉಪವಾಸ, ವ್ರತ, ಸ್ವಾಧ್ಯಾಯ, ಬ್ರಹ್ಮಚರ್ಯದ ಪಾಲನೆಯಿಂದ ಆಚರಿಸುತ್ತಾರೆ. ಇದೂ ಒಂದು ಅಧ್ಯಾತ್ಮಿಕ ಪರ್ವ ಮತ್ತು ಅನಾದಿ ಪರ್ವ.

11. **ಜೀವದಯಾಷ್ಟಮಿ :** ಆಶ್ವಯುಜ ಶುದ್ಧ ಅಷ್ಟಮಿಯಂದು ಆಚರಿಸುವ ಪರ್ವದಿನ. ಅಭಯಮತಿ, ಅಭಯರುಚಿ ಎಂಬ ಅಣ್ಣತಂಗಿಯರು ಮಾರಿದತ್ತನೆಂಬ ರಾಜನಿಗೆ ಧರ್ಮೋಪದೇಶ ಮಾಡಿ ಚಂಡಮಾರಿಗೆ ಕೊಡುತ್ತಿದ್ದ ಪ್ರಾಣಿ ಬಲಿಗಳನ್ನು ತಪ್ಪಿಸಿದ ದಿನ. ಸಂಕಲ್ಪ (ಹಿಂಸೆಯ ಭಾವನೆ) ಹಿಂಸೆಯಿಂದ ಆದ ಅನಾಹುತವನ್ನು ತಿಳಿಸುವ ಯಶೋಧರ ಚರಿತ್ರೆಯನ್ನು ಅಂದು ಓದಿ, ಪೂಜೆ ಉಪವಾಸಾದಿಗಳನ್ನು ಮಾಡುತ್ತಾರೆ.

12. **ದೀಪಾವಳಿ :** ಆಶ್ವಯುಜ ಬಹುಳ ಚತುರ್ದಶಿಯ ಬೆಳಗಿನ ಜಾವದ ಅಮಾವಾಸ್ಯೆಯಲ್ಲಿ ಭಗವಾನ್ ಮಹಾವೀರರು ಪಾವಾಪುರಿಯ ಕೆರೆಯ ಮಧ್ಯದ ಬಂಡೆಗಲ್ಲಿನ ಮೇಲೆ ಯೋಗ ನಿರೋಧ ಮಾಡಿ ಅಘಾತೀಯ ಕರ್ಮಗಳನ್ನು ಕಳೆದು ಮುಕ್ತರಾದ ದಿನ. ಅಂದು ಅವರು ಜೀವಿಗಳಿಗೆ ಧರ್ಮೋಪದೇಶವನ್ನು ಮಾಡಿ ಅಜ್ಞಾನವೆಂಬ ಕತ್ತಲೆಯನ್ನು ಕಳೆದು ಸುಜ್ಞಾನವೆಂಬ ಬೆಳಕನ್ನು ನೀಡಿದ ನೆನಪಿಗೆ ಅಂದು ದೀಪಗಳನ್ನು ಸಾಲುಸಾಲಾಗಿ ಹಚ್ಚಿ ದೀಪಾವಳಿ ಎಂಬ ಹೆಸರಿನಿಂದ ಆಚರಿಸುತ್ತಾರೆ. ಅಂದು ಬೆಳಗಿನ ಜಾವ ಜಿನಮಂದಿರಗಳಲ್ಲಿ ಭಗವಾನ್ ಮಹಾವೀರರಿಗೆ ಅಭಿಷೇಕ, ಪೂಜೆ ದೀಪೋತ್ಸವ ಮಾಡಿ, ನಿರ್ವಾಣ ಲಾಡು ಅರ್ಪಿಸಿ ನಿರ್ವಾಣ ಕಲ್ಯಾಣ ಮಾಡುತ್ತಾರೆ. ಅಂದಿನಿಂದಲೇ ಮಹಾವೀರ ಶಕ ವರ್ಷಾರಂಭವಾಗುವುದು. ಇದೇ ಜೈನರಿಗೆ ನಿಜವಾದ ಯುಗದ ಆದಿ.

13. **ಜಿನರಾತ್ರಿ :** ಮಾಘ ಬಹುಳ ಚತುರ್ದಶಿಯಂದು ಶ್ರೀ ವೃಷಭನಾಥ ತೀರ್ಥಂಕರರು ಮೋಕ್ಷವನ್ನು ಹೊಂದಿದ ಪವಿತ್ರವಾದ ದಿನವಾಗಿದೆ. ಅಂದು ಆದಿನಾಥರ ನಿರ್ವಾಣ ಕಲ್ಯಾಣ ಮಹೋತ್ಸವವನ್ನು ವೈಭವದಿಂದ ಆಚರಿಸುತ್ತಾರೆ.



**೨೪ ಮಂದಿ ತೀರ್ಥಂಕರರ ಪಂಚಕಲ್ಯಾಣದ ತಿಥಿಗಳು :**

ಇವೂ ಪರ್ವ ತಿಥಿಗಳೇ ಆಗಿವೆ. ಇವುಗಳಲ್ಲಿ ತಮಗೆ ಇಷ್ಟವಾದ, ತಿಥಿಗಳನ್ನು ತಮ್ಮ ಶಕ್ತಿಗೆ ತಕ್ಕಂತೆ ಆಚರಣೆ, ಪೂಜೆ, ಆರಾಧನೆ, ಒಂದು ಹೊತ್ತು, ಉಪವಾಸ ಮುಂತಾದವುಗಳನ್ನು ಮಾಡಬಹುದು. ಈ ತಿಥಿಗಳನ್ನು ತೀರ್ಥಂಕರರ ವಿವರದಲ್ಲಿ ತಿಳಿಸಿದೆ.

---

## ಸುಖ-ಶಾಂತಿ ಜೀವನಕ್ಕೆ ಕೆಲವು ಸುಲಭ ಸೂತ್ರಗಳು :

ಮಾನವನು ತನ್ನ ಜೀವಿತ ಕಾಲದಲ್ಲಿ ಸುಖ-ಶಾಂತಿಯಿಂದ ಬಾಳುವೆ ಮಾಡುವುದಕ್ಕೆ ಹಲವಾರು ಮಾರ್ಗ ಸೂತ್ರಗಳಿವೆ. ಸಾಧನ ಸಲಕರಣೆಗಳಿವೆ. ಇವುಗಳಲ್ಲಿ ಪೂರ್ವಾಚಾರ್ಯರು ಹೇಳಿರುವ ಕೆಲವೆರಡು ಸುಲಭವಾದ ಸೂತ್ರಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸುಖ-ಶಾಂತಿಯನ್ನು ಹೊಂದಬಹುದು. ಅವುಗಳಲ್ಲಿ ಮುಖ್ಯವಾಗಿ ಎರಡು ಸೂತ್ರಗಳಿವೆ.

1) ಕೆಲವನ್ನು ಮರೆಯಬೇಕು.

2) ಕೆಲವನ್ನು ಮರೆಯದೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

**1) ಮರೆಯಬೇಕಾದವುಗಳು :-** ಯಾರಾದರೂ ತಮಗೆ ಏನಾದರೂ ಹೇಳಿದರೆ, ಆಡಿದರೆ, ಬೈದರೆ, ನಿಂದಿಸಿದರೆ, ಕೆಡುಕು ಮಾಡಿದರೆ, ಅಪಕಾರ ಮಾಡಿದರೆ, ಅಂಥವನ್ನು ಮರೆಯಬೇಕು. ಅವುಗಳಿಗೆ ಪ್ರತೀಕಾರ ಮಾಡಬೇಕೆಂದಾಗಲೀ ಸೇಡು ತೀರಿಸಿಕೊಳ್ಳಬೇಕೆಂದಾಗಲೀ ಚಿಂತಿಸಬಾರದು. ತನ್ನ ಜೀವನದಲ್ಲಿ ಹಿಂದೆ ಆಗಿದ್ದ ಕೆಡುಕುಗಳನ್ನು, ದುರ್ಘಟನೆಗಳನ್ನು ಮರೆಯಬೇಕು. ಹಿಂದಾದುದನ್ನು ಮರೆತು ಮುಂದಿನದನ್ನು ವಿಚಾರ ಮಾಡುವುದೇ ಜೀವನ. ಇದನ್ನು ಬಿಟ್ಟು ಹಿಂದಿನದನ್ನೇ ಚಿಂತಿಸಿಕೊಂಡಿರಬಾರದು. ಈ ಚಿಂತೆ ಜೀವನದಲ್ಲಿ ನೆಮ್ಮದಿ, ಸುಖ-ಶಾಂತಿಯನ್ನು ಹಾಳು ಮಾಡುವುದು. ಯಾರಿಗೂ ತನ್ನಿಂದ ಅಪಕಾರವಾಗದಂತೆ ತನ್ನ ವರ್ತನೆಯನ್ನು ಭಾವನೆಗಳನ್ನು ಇಟ್ಟುಕೊಂಡು ಸಹನೆ, ತಾಳ್ಮೆಯಿಂದ ಬಾಳಬೇಕು. ಹಾಗೇಯೇ ತಾನು ಮಾಡಿದ ದಾನ, ಪರೋಪಕಾರ, ಸಹಾಯಗಳನ್ನೂ ಮರೆಯಬೇಕು. ತಾನು ಮಾಡಿದೆನೆಂದು ಹೆಮ್ಮೆ ಪಡಬಾರದು.

(ಪುಟ ೫೪೪ರಲ್ಲಿ ನೋಡುವುದು.